ಜನಶಕ್ತಿ



ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 41
ಅಕ್ಟೋಬರ್ 07, 2012
ಪುಟ 16
ರೂ. 5/-
Blog :janashakthi.wordpress.com e-mail : js_weekly@yahoo.com

ಡೀಸೆಲ್ ಬೆಲೆ ಏರಿಕೆ



ಈ ಸೋಗೇಕೆ ಪ್ರಧಾನಿಗಳೇ?



SFI ಅಖಿಲ ಭಾರತ ಸಮ್ಮೇಳನ

ಸಮರಶೀಲ ವಿದ್ಯಾರ್ಥಿ ಚಳುವಳಿಗೆ ಕರೆ

ಶಿಕ್ಷಣ - ರಸ್ತೆ - ರಾಜ್ಯ
ಶೆಟ್ಟರ್ ದರ್ಬಾರ್‌ನಲ್ಲಿ
ಗುಂಡಿಗಳೋ ತಿಪ್ಪೆಗುಂಡಿಗಳು






ಗಲಭೆಗಳಿಗೆ ಬಳಕೆಯಾಗುತ್ತಿರುವ ಗಣೇಶೋತ್ಸವ

ಅಕ್ಟೋಬರ್ 6 ರ ಬಂದ್ : ಭಾವೋದ್ರೇಕಕ್ಕೆ ಎಡೆ ಮಾಡದಿರಲಿ

ಸಂಗಾತಿ ಗಂಗಾಧರ ಗಟ್ಟಿ ನಿಧನ



ಕಾರ್ಮಿಕ ನೇತಾರ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ದುಡಿದು, ಜನಸೇವೆಗೈದ ಸಂಗಾತಿ ಗಂಗಾಧರ ಗಟ್ಟಿ ತೊಕ್ಕೋಟು ಇವರು ಸೆ. 24ರಂದು ನಿಧರಾಗಿರುತ್ತಾರೆ. ಅವರಿಗೆ 71 ವರ್ಷ ವಯಸ್ಸಾಗಿತ್ತು.

ಮಂಗಳೂರು ಹೆಂಚಿನ ಕಾರ್ಖಾನೆಯಲ್ಲಿ ಜೀವನ ನಿರ್ವಹಣೆಯ ದುಡಿಮೆಗೈಯುವುದರೊಂದಿಗೆ ಬೀಡಿ ಕಾರ್ಮಿಕರನ್ನು ಸಂಘಟಿಸುತ್ತಿದ್ದರು. ಚಿಕ್ಕಂದಿನಲ್ಲಿ ಜನಸಂಘದಲ್ಲಿ ಕಾರ್ಯಕರ್ತರಾಗಿದ್ದವರು ಸಂಘದ ತಪ್ಪು ಧೋರಣೆಗಳನ್ನು ವಿರೋಧಿಸಿ ಹೊರಬಂದು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿಕೊಂಡರು. ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತರಾಗಿದ್ದು ಕೊಂಡು ಕಳೆದ ನಾಲ್ಕು ದಶಕಗಳಿಂದ ಅಪ್ಪಟ ಹೋರಾಟಗಾರನಾಗಿ ಗುರುತಿಸಿ ಕೊಂಡಿದ್ದರು.

ಅವಿಭಜಿತ ದ.ಕ.ಜಿಲ್ಲೆಯ ಹೆಂಚಿನ ಕಾರ್ಖಾನೆ ಕಾರ್ಮಿಕರ ಸಂಘಟನೆಯಲ್ಲಿ ಉಪಾಧ್ಯಕ್ಷರಾಗಿ ದೀರ್ಘ ಕಾಲ ಸೇವೆ ಸಲ್ಲಿಸಿದ್ದರು, ಪಕ್ಷದ ಆದೇಶದಂತೆ ಹೆಂಚಿನ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಪಕ್ಷ ಕಾರ್ಯಕರ್ತರು, ಶೋಷಣೆಗೆ ಒಳಗಾಗಿದ್ದ ಅಸಂಘಟಿತ ಕ್ಷೇತ್ರದ ಬೀಡಿ ಕಾರ್ಮಿಕರನ್ನು ಸಂಘಟಿಸಲು ತೆಗೆದುಕೊಂಡಿದ್ದ ತೀರ್ಮಾನ ಪ್ರಕಾರ ಹಳ್ಳಿಯಲ್ಲಿ ಮನೆಮನೆಗೆ ಭೇಟಿ ನೀಡಿ ಅವರಿಗೆ ಸಂಘಟನೆಯ ಅವಶ್ಯಕತೆಯನ್ನು ತಿಳಿ ಹೇಳುವ ಮೂಲಕ ಮಾಲಕರಿಂದ ಮತ್ತು ಮಧ್ಯವರ್ತಿಗಳಿಂದ ಆಗುತ್ತಿರುವ, ಅನ್ಯಾಯ ಶೋಷಣೆಯ ವಿರುದ್ಧ ಚಳವಳಿಗಳನ್ನು ಸಂಘಟಿಸಿದ್ದರು, ಬೀಡಿ ಕಾರ್ಮಿಕರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ ಇವರು ಭವಿಷ್ಯನಿಧಿ ಜ್ಯಾರಿಗಾಗಿ ಒತ್ತಾಯಿಸಿ ದ.ಕ. ಜಿಲ್ಲಾಧಿಕಾರಿ ಕಛೇರಿ ಎದುರು 1982 ಜೂನ್ 15 ರಿಂದ 7 ದಿನಗಳವರೆಗೆ ನಡೆದಿದ್ದ ಅಮರಣಾಂತ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಕಾರ್ಮಿಕರ ಮನಗೆದ್ದಿದ್ದರು. ಈ ಹೋರಾಟದ ಯಶಸ್ವಿ ಯಿಂದಾಗಿ ಕರ್ನಾಟಕ ರಾಜ್ಯದ 6 ಲಕ್ಷ ಬೀಡಿ ಕಾರ್ಮಿಕರಿಗೆ ಭವಿಷ್ಯನಿಧಿ ಸವಲತ್ತು ಜ್ಯಾರಿಗೆ ಬಂದಿತ್ತು.

ಸರಿಸುಮಾರು 30 ವರ್ಷಗಳ ಹಿಂದೆ ಧರ್ಮನಗರ, ಸಾರಸ್ವತ ಕಾಲನಿ, ತೊಕ್ಕೋಟು ಪ್ರದೇಶಗಳಲ್ಲಿ ಸರಕಾರಿ ಜಾಗಗಳನ್ನು ಆಕ್ರಮಿಸಿ ಮನೆ ಇಲ್ಲದವರಿಗೆ ನಿವೇಶನ ಹಂಚಿಕೊಡುವ ಕಮ್ಯೂನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ ಇವರು ಪ್ರಧಾನ ಪಾತ್ರವಹಿಸಿದ್ದರು.

ತುರ್ತು ಪರಿಸ್ಥಿತಿಕಾಲದಲ್ಲಿ ಪೊಲೀಸರು ಇವರನ್ನು ಬಂಧಿಸಿ ಕ್ರೂರ ರೀತಿಯಲ್ಲಿ ಚಿತ್ರಹಿಂಸೆ ನೀಡಿದ್ದರೂ ಇವರು ಧೃತಿಗೆಡಲಿಲ್ಲ. ಮಾರ್ಕ್ಸ್‌ವಾದಿ ತತ್ವಕ್ಕೆ ಇವರಿಗಿದ್ದ ಬದ್ಧತೆಯನ್ನು ಬದಲಾಯಿಸಲು ಪೊಲೀಸರಿಂದಲೂ ಸಾಧ್ಯವಾಗಲಿಲ್ಲ. ಇವರು ಒಬ್ಬ ಕಮ್ಯೂನಿಸ್ಟ್ ಕಾರ್ಯಕರ್ತನೆಂಬ ಕಾರಣಕ್ಕಾಗಿಯೇ ಪೊಲೀಸರಿಂದ ಮರ್ಧನಕ್ಕೊಳಗಾಗಿದ್ದರು. ಇವರ ದೇಹದ ಅಂಗಾಂಗಗಳನ್ನು ಮರ್ಧಿಸಿ ಪೊಲೀಸರ ಕೈಯಲ್ಲಿದ್ದ 3 ಲಾಠಿಗಳು ಪುಡಿಯಾಗಿದ್ದುದನ್ನು ತನ್ನ ಸಂಗಾತಿಗಳೊಂದಿಗೆ ಆಗಾಗ ವಿವರಿಸುತ್ತಿದ್ದರು. ದೃಢಕಾಯ ನೀಳದೇಹದ ವ್ಯಕ್ತಿತ್ವವುಳ್ಳವರಾಗಿದ್ದ ಇವರು ರಾಜ್ಯಮಟ್ಟದ ಓರ್ವ ಕಬಡ್ಡಿ ಆಟಗಾರರಾಗಿಯೂ ಗುರುತಿಸಿಕೊಂಡಿದ್ದರು.



ಅಮರಣಾಂತ ಉಪವಾಸ ಸತ್ಯಾಗ್ರಹದಲ್ಲಿ ಗಂಗಾಧರ ಗಟ್ಟಿ

ಕೂಲಿ ಕೆಲಸ ಮಾಡಿ ಬದುಕುತ್ತಿದ್ದ ತನ್ನ ತಾಯಿಗೆ ತಾನೊಬ್ಬನೇ ಮಗನಾಗಿದ್ದರೂ ಕೂಡಾ ತಂದೆಯ ಪ್ರೀತಿವಾತ್ಸಲ್ಯದಿಂದ ದೂರವಾಗಿದ್ದ ಇವರಿಗೆ ಶಾಲೆಯ ಮೆಟ್ಟಿಲು ಹತ್ತುವ ಅವಕಾಶವೂ ದೊರೆತಿರಲಿಲ್ಲ.

ಆದರೂ ಇವರು ಯೌವನದ ಕಾಲದಲ್ಲಿ ಹಲವಾರು ಸಾಮಾಜಿಕ ನಾಟಕಗಳಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತಿದ್ದುದು ವಿಶೇಷವಾಗಿತ್ತು. ಅಕ್ಷರಾಭ್ಯಾಸವಿಲ್ಲದೆ ನಾಟಕದ ಪಾತ್ರವನ್ನು ಲೀಲಾಜಾಲವಾಗಿ ನಿರ್ವಹಿಸುತ್ತಿದ್ದುದು ಎಲ್ಲರಿಗೂ ಆಶ್ಚರ್ಯವೆನಿಸುತ್ತಿತ್ತು.

ಜನ ಸಾಮಾನ್ಯರೊಂದಿಗೆ ನಿಕಟ ಸಂಪರ್ಕ ವಿರಿಸುತ್ತಿದ್ದ ಇವರು ಕೋಟೆಕಾರು ಸರ್ಕಲ್ ಬೀಡಿ ಲೇಬರ್ ಯೂನಿಯನಿನ ಉಪಾಧ್ಯಕ್ಷರಾಗಿ, ಸಿಐಟಿಯು ದ.ಕ. ಜಿಲ್ಲಾ ಸಮಿತಿಯ ಸದಸ್ಯರಾಗಿಯೂ ಹಾಗೂ ಸ್ಥಳೀಯ ಗಣೇಶ ಮಂದಿರದ ಆಡಳಿತ ಸಮಿತಿಯ ಪದಾಧಿಕಾರಿಯಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಇವರು ಪತ್ನಿ, ಇಬ್ಬರು ಪುತ್ರಿಯರು, ಮೂರು ಮಂದಿ ಗಂಡು ಮಕ್ಕಳನ್ನು ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿರುತ್ತಾರೆ. ಸಿಪಿಐ(ಎಂ) ಪಕ್ಷದ ಉಳ್ಳಾಲ ವಲಯ ಸಮಿತಿ ಹಾಗೂ ಕೋಟೆಕಾರು ಸರ್ಕಲ್ ಬೀಡಿ ಲೇಬರ್ ಯೂನಿಯನ್ ಇವರು ನಿಧನಕ್ಕೆ ಸಂತಾಪ ಸೂಚಿಸಿದೆ.

ರಫ್ತು ನೀತಿ ಬದಲಾವಣೆಗೆ ಹಾಗೂ ಅದಿರು ಕಳ್ಳಸಾಗಾಣಿಕೆದಾರರ ಮೇಲೆ ಕಠಿಣ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ

ಅಂಕೋಲಾ ತಾಲೂಕಿನ ಬೇಲೇಕೇರಿ ಬಂದರಿನಿಂದಲೇ 2009ರ ಜನವರಿ 1 ರಿಂದ 2010 ಮೇ 31ರ ವರೆಗಿನ ಅವಧಿಯಲ್ಲಿ 33.98 ಲಕ್ಷ ಟನ್ ಕಬ್ಬಿಣದ ಅದಿರನ್ನು ಅಕ್ರಮವಾಗಿ ರಫ್ತು ಮಾಡಿದ ನಾಲ್ಕು ಮೊಕದ್ದಮೆಗಳನ್ನು ಸಿ.ಬಿ.ಐ. ದಾಖಲಿಸಿಕೊಂಡಿದೆ. ಅಕ್ರಮ ಕಳ್ಳಸಾಗಣೆ ನಡೆಯುತ್ತಿದೆಯೆಂದು ತಿಳಿದು 2010ರ ಮಾರ್ಚ್‌ನಲ್ಲಿ ಅರಣ್ಯ ಇಲಾಖೆ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರಿನಲ್ಲಿ 8 ಲಕ್ಷ ಟನ್ ಅದಿರನ್ನು ಕಳ್ಳತನದಿಂದ ವಿದೇಶಕ್ಕೆ ರಫ್ತು ಮಾಡಿದ ಬಗ್ಗೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಳ್ಳಲಾಗಿದೆ. ಇಷ್ಟಲ್ಲದೇ ಮೊಕದ್ದಮೆ ದಾಖಲಿಸಿಕೊಳ್ಳದ ನೂರಾರು ಲಕ್ಷ ಟನ್ ಅದಿರು ದೇಶದ ಬೇರೆ ಬೇರೆ ಬಂದರಿನಿಂದ ವಿದೇಶಕ್ಕೆ ಕಳ್ಳತನದಲ್ಲಿ ರಫ್ತಾಗಿರುವ ಎಲ್ಲಾ ಸಾಧ್ಯತೆಯಿದೆ.

ಈ ರೀತಿ ಅದಿರು ಅಕ್ರಮವಾಗಿ ರಫ್ತಾಗಲು ಕೇಂದ್ರದ ರಫ್ತು ನೀತಿಯೇ ಕಾರಣವಾಗಿದೆ. ರಫ್ತು ನೀತಿಯಲ್ಲಿರುವ ಉದಾರತೆಯನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಲಾಗಿದೆ. ಇದರಲ್ಲಿ ಅಧಿಕಾರಿಗಳು ಮತ್ತು ರಫ್ತುದಾರರು ಶಾಮೀಲಾತಿ ಎದ್ದು ಕಾಣುತ್ತದೆ. ಅಲ್ಲದೇ ಅದಿರು ಕಳ್ಳತನದಲ್ಲಿ ರಫ್ತಾಗಲು ಕರ್ನಾಟಕ ರಾಜ್ಯ ಸರಕಾರದ ಸಂಪೂರ್ಣ ಶಾಮೀಲಾತಿ ಇದೆ. ರಾಜ್ಯದ ಹಲವಾರು ಮಂತ್ರಿಗಳು, ಶಾಸಕರು ಶಾಮೀಲಾಗಿದ್ದಾರೆ.

ದೇಶದ ಖನಿಜ ಸಂಪತ್ತು ಈ ರೀತಿ ವಿದೇಶಕ್ಕೆ ಕಳ್ಳತನದಲ್ಲಿ ಕೊಳ್ಳೆ ಹೋಗುತ್ತಿದ್ದರೆ ಕೇಂದ್ರ ಸರಕಾರ ಕಠಿಣ ಕ್ರಮ ತೆಗೆದುಕೊಳ್ಳದೆ ಇರುವುದು ಆಶ್ಚರ್ಯಕರ ಸಂಗತಿ. ಉದಾರತೆಯ ಪ್ರತೀಕ. ನಿರ್ಲಕ್ಷ್ಯತೆಯ ಪರಮಾವಧಿ.

ಈ ಹಿನ್ನೆಲೆಯಲ್ಲಿ ಸಿ.ಪಿ.ಐ.(ಎಂ.) ಉತ್ತರ ಕನ್ನಡ ಜಿಲ್ಲಾ ಸಮಿತಿ ಸೆಪ್ಟೆಂಬರ್ 27ರಂದು ಕಾರವಾರದಲ್ಲಿ ಪ್ರತಿಭಟನಾ ಪ್ರದರ್ಶನ ನಡೆ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿಗಳಿ ಮುಖ್ಯ ಬೇಡಿಕೆಗಳಾದ ರಫ್ತು ನೀತಿಗೆ ಸೂ ತಿದ್ದುಪಡಿ ತರಬೇಕು. ಕಳ್ಳತನದ ಭಾಗಿಯಾದವರಿಗೆ ಕಠಿಣ ಶಿಕ್ಷೆಗೆ ಕ್ರಮ ತೆಗೆದುಕೊಳ್ಳಬೇಕು. ದೇಶದ ಖನಿಜ ಸಂಪತ್ತ ರಕ್ಷಿಸಲು ಸೂಕ್ತ ಕಾನೂನು ತಿದ್ದುಪಡಿ ತರಬೇಕು ಸಿ.ಬಿ.ಐ. ತನಿಖೆ ನಿಷ್ಪಕ್ಷವಾಗಿ ನಡೆಯುವಂ ನೋಡಿಕೊಳ್ಳಬೇಕು. ಬೇಲೇಕೇರಿ ಬಂದರ ಕಾರ್ಮಿಕರಿಗೆ ಸೂಕ್ತ ಪರಿಹಾರ ನೀಡಬೇಕೆಂದ ಮನವಿ ನೀಡಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿದರು. ಪಕ್ಷ ಮುಖಂಡರಾದ ಯಮುನಾ ಗಾಂವಕರ ಸುಭಾಶ ಕೊಪ್ಪಿಕರ, ತಿಲಕ ಗೌಡ, ಶ್ಯಾಮನಾಥ ನಾಯ್ಕ, ಪ್ರೇಮಾನಂದ ವೇಳಿಪ, ವಿಷ್ಣು ನಾಯ್ಕ ಅಹಲ್ಯಾ ನಾಯ್ಕ, ಮಾಸ್ತಿ ನಾಯ್ಕ, ಗಣಪ ವಂದೂರು ಮುಂತಾದವರು ಹಾಜರಿದ್ದರು.



ಸಂಪಾದಕೀಯ

ಅಕ್ಟೋಬರ್ 6 ರ ಬಂದ್ ಭಾವೋದ್ರೇಕಕ್ಕೆ ಎಡೆಮಾಡದಿರಲಿ

ಕಾವೇರಿ ನೀರಿನ ಹಂಚಿಕೆಯ ವಿಷಾದದಲ್ಲಿ ಪ್ರಾಧಿಕಾರದ ಸೂಚನೆಯನ್ನು ವಿರೋಧಿಸಿ ಕರ್ನಾಟಕದ ಕೆಲವು ಸಂಘಟನೆಗಳು ಅಕ್ಟೋಬರ್ 6 ರಂದು ಕರೆ ನೀಡಿರುವ ಕರ್ನಾಟಕ ಬಂದ್ ಆತಂಕಕ್ಕೆ ಕಾರಣವಾಗಿದೆ. ನಮ್ಮ ಪ್ರಜಾಪ್ರಭುತ್ವವನ್ನು ಜೀವಂತವಾಗಿಡುವ ದೃಷ್ಟಿಯಿಂದ ಜನತೆ ಪ್ರತಿಭಟಿಸುವ ತನ್ನ ಹಕ್ಕನ್ನು ಚಲಾಯಿಸುತ್ತಿರಬೇಕಾಗುತ್ತದೆ. ಪ್ರಜೆಗಳಿಂದ ಚನಾಯಿತವಾಗಿರುವ ಸರ್ಕಾರ ಪ್ರಜೆಗಳ ಹಕ್ಕುಗಳನ್ನು ಕಡೆಗಣಿಸಿದಾಗ, ಜನಹಿತ ಕೆಲಸಗಳನ್ನು ಕೈಬಿಟ್ಟು ಕುಳಿತಾಗ, ಜನ ಬಂದ್, ಹರತಾಳ, ಪ್ರದರ್ಶನಗಳ ಮೂಲಕ ಚುನಾಯಿತ ಸರ್ಕಾರವನ್ನು ಎಚ್ಚರಿಸಬೇಕಾಗುತ್ತದೆ. ಡಿಸೇಲ್ ಬೆಲೆ ಏರಿಕೆ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅನುಮತಿ ಮೊದಲಾದ ಕೇಂದ್ರ ಸರ್ಕಾರದ ಕ್ರಮಗಳ ವಿರುದ್ಧ ಇದೆ. ಸೆ. 20 ರಂದು ದೇಶವ್ಯಾಪಿಯಾಗಿ ನಡೆದ ಸಾರ್ವತ್ರಿಕ ಹರತಾಳ ಅಂತಹ ಒಂದು ಸ್ವಾಗತಾರ್ಹ ಜನಸಂಘರ್ಷವಾಗಿತ್ತು. ಅಂದು ಸಾರಿಗೆ ಸಂಚಾರ ಸ್ಥಗಿತಗೊಂಡು ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದರಿಂದ ಸಾರ್ವಜನಿಕರು ಬಹಳಷ್ಟು ತೊಂದರೆ ಅನುಭವಿಸುವಂತಾಯಿತು. ಆದರೆ ದೇಶದ ವಿಶಾಲ ಹಿತದೃಷ್ಟಿಯಿಂದ ಸಾರ್ವಜನಿಕರು ಇಂತಹ ಸಂದರ್ಭಗಳಲ್ಲಿ ಆಗುವ ಅನಾನುಕೂಲತೆಗಳನ್ನು ಸಹಿಸಿಕೊಂಡು ಸಹಕರಿಸಬೇಕಾಗುತ್ತದೆ.

ಆದರೆ ಅಕ್ಟೋಬರ್ 6 ರಂದು ನಡೆಸಲು ಉದ್ದೇಶಿಸಿರುವ ಬಂದ್‌ಗೆ ಕೆಲವು ಭಿನ್ನವಾದ ಆಯಾಮಗಳಿವೆ. ಈ ಬಂದ್ ಕೂಡಾ ಕೇಂದ್ರ ಸರ್ಕಾರದ ಕ್ರಮದ ವಿರುದ್ಧ ಎಂದು ಹೇಳಲಾಗುತ್ತಿದ್ದರೂ ಇಲ್ಲಿ ವಿರೋಧಿಸಲಾಗುತ್ತಿರುವುದು ಪ್ರಧಾನ ಮಂತ್ರಿ ಅಧ್ಯಕ್ಷರಾಗಿರುವ ಕಾವೇರಿ ನದಿ ಪ್ರಾಧಿಕಾರದ ಸೂಚನೆಯನ್ನು. ನೀರು ಹಂಚಿಕೆಯ ಕುರಿತಾದ ತಕರಾರುಗಳನ್ನು ಪ್ರಾಧೀಕಾರದಲ್ಲೇ ಇತ್ಯರ್ಥಪಡಿಸುವಂತೆ ದೇಶದ ಸರ್ವೋಚ್ಚ ನ್ಯಾಯಾಲಯವೇ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳಿಗೆ ಸೂಚನೆ ನೀಡಿತ್ತು. ಪ್ರಾಧಿಕಾರದ ಸಲಹೆಯನ್ನು ಸಾರಾಸಗಟಾಗಿ ತಿರಸ್ಕರಿಸಿ, ತಮಿಳುನಾಡಿಗೆ ಒಂದು ತೊಟ್ಟು ನೀರನ್ನೂ ಕೊಡುವುದಿಲ್ಲ ಎಂದು ರಾಜ್ಯ ಸರ್ಕಾರ ತಿರ್ಮಾನ ಮಾಡಿದ್ದು ಮತ್ತು ಈ ತೀರ್ಮಾನಕ್ಕೆ ಕಾಂಗ್ರೇಸ್ ಸೇರಿದಂತೆ ಪ್ರತಿಪಕ್ಷಗಳು ಬೆಂಬಲ ವ್ಯಕ್ತಪಡಿಸಿದ್ದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಚರ್ಚೆಗೆ ಗ್ರಾಸವಾಗಿದೆ. ಕಾವೇರಿ ಕೃಷ್ಣಾ ನೀರು ಹಂಚಿಕೆಯ ವಿವಾದಗಳಲ್ಲಿ ರಾಜ್ಯ ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿನ ವ್ಯವಹಾರಗಳನ್ನು ನಿರ್ವಹಿಸುತ್ತಿರುವ ತಂಡದ ನಾಯಕರಾದ ಖ್ಯಾತ ನ್ಯಾಯವಾದಿ ನಾರಿಮನ್ ಅವರೇ ರಾಜ್ಯ ಸರ್ಕಾರದ ವರ್ತನೆ ಕುರಿತು ಅಸಮಧಾನ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. ಈಗ ಇಡೀ ವಿವಾದ ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗಲಿದೆ. ಈ ಹಂತದಲ್ಲಿ ಬಂದ್ ಮೊದಲಾದ ಕ್ರಮಗಳಿಂದ ನ್ಯಾಯಾಂಗದ ಮೇಲೆ ಪ್ರಭಾವಬೀರಲು ಸಾಧ್ಯವಿಲ್ಲ ಎಂಬುದನ್ನು ಯಾರೂ ಮರೆಯಬಾರದು.


ಎರಡನೇಯದಾಗಿ, ಎರಡು ರಾಜ್ಯಗಳ ನಡುವಿನ ವಿವಾದವಿದು. ತಮಿಳುನಾಡು ನಮ್ಮ ನೆರೆಯ ರಾಜ್ಯ. ಅದರೊಂದಿಗೆ ನಾವು ಶಾಂತಿ ಸಹಕಾರದೊಂದಿಗೆ ಬಾಳುವುದು ಅನಿವಾರ್ಯವಾಗಿದೆ. ಆದರೆ ಕೇವಲ ಚುನಾವಣೆ ಮತ್ತು ಓಟುಗಳ ಮೇಲೆ ಕಣ್ಣಿಟ್ಟುಕೊಂಡಿರುವ ಕೆಲವು ರಾಜಕೀಯ ಪಕ್ಷಗಳು ಎರಡು ರಾಜ್ಯಗಳ ಜನರನ್ನು ಪರಸ್ಪರ ಎತ್ತಿಕಟ್ಟಿ ಅದರ ರಾಜಕೀಯ ಲಾಭ ಪಡೆಯುವ ಹುನ್ನಾರ ನಡೆಸಿದಂತೆ ಕಾಣುತ್ತದೆ. ಉದಾಹರಣೆಗೆ ಕಾವೇರಿ ನದಿ ನೀರಿನ ಹಂಚಿಕೆಯ ವಿಷಯದಲ್ಲಿ ಕರ್ನಾಟಕದ ಬಿಜೆಪಿ ಹಾಗೂ ತಮಿಳುನಾಡಿನ ಬಿಜೆಪಿ ಭಿನ್ನವಾದ ನಿಲುಮೆಯನ್ನೇ ಪ್ರತಿಪಾದಿಸುತ್ತವೆ. ಇಂತಹ ಪಕ್ಷಗಳು ಚುನಾವಣಾ ಲಾಭಕ್ಕಾಗಿ ಯಾವ ಮಟ್ಟಕ್ಕೂ ಇಳಿಯಲು ಹೇಸುವುದಿಲ್ಲ. ಇಂತಹ ಪಕ್ಷಗಳು-ಸಂಘಟನೆಗಳು ಪ್ರದರ್ಶಿಸುವ ವೀರಾವೇಶಕ್ಕೆ ನಮ್ಮ ರೈತರು ಮೋಸ ಹೋಗಬಾರದು.

ಬಂದ್ ಅಂತಹ ಸಂದರ್ಭದಲ್ಲಿ ರಾಜ್ಯದ ಜನತೆಯ ಭಾವನೆಗಳನ್ನು ರಾಜ್ಯದಲ್ಲಿ ನೆಲೆಸಿರುವ ತಮಿಳು ಭಾಷಿಕರ ವಿರುದ್ಧ ಕೆರಳಿಸುವ ಅಪಾಯವಿದೆ. ಉದ್ಯೋಗ ಹುಡುಕಿಕೊಂಡು ಕರ್ನಾಟಕಕ್ಕೆ ಬಂದ ತಮಿಳು ಜನರ ಮೇಲೆ ನಾವು ಆಕ್ರೋಶ ವ್ಯಕ್ತಪಡಿಸುವುದರಿಂದ ಯಾವ ಪ್ರಯೋಜನವೂ ಇಲ್ಲ, ಮಾತ್ರವಲ್ಲ ಅದು ಅತ್ಯಂತ ಅಮಾನವೀಯ ಕೃತ್ಯವಾಗುತ್ತದೆ. ಇದರ ಪರಿಣಾಮ ತಮಿಳುನಾಡಿನಲ್ಲಿ ವಾಸ ಇರುವ ಕನ್ನಡಿಗರ ಮೇಲೆ ಆಗುತ್ತದೆ ಎಂಬುದನ್ನು ನಾವು ಮರೆಯಬಾರದು. ಅಂತಹ ಯಾವುದೇ ಅಹಿತಕರ ಘಟನೆ ನಡೆಯದಂತೆ ರಾಜ್ಯ ಸರ್ಕಾರ ಕಟ್ಟೆಚ್ಚರವಹಿಸಬೇಕಾಗಿದೆ.

ತಮಿಳುನಾಡಿಗೆ ನೀರು ಬಿಡುವ ವಿಷಯದಲ್ಲಿಯೂ ಸರ್ಕಾರ ಪ್ರಬುದ್ಧವಾಗಿ ವರ್ತಿಸಬೇಕು. ಪ್ರಾಧಿಕಾರ ಸೂಚಿಸಿದಂತೆ ಪ್ರತಿದಿನ 9,000 ಕ್ಯೂಸೆಕ್ಸ್ ನೀರು ಬಿಡಲು ಸಾಧ್ಯವಾಗದಿದ್ದರೆ, ಎಷ್ಟು ನೀರನ್ನು ಬಿಡಲು ಸಾಧ್ಯವೋ ಅಷ್ಟನ್ನಾದರೂ, ಬಿಡಲು ಮುಂದಾಗಬೇಕು. ಅದನ್ನು ಭಾವನಾತ್ಮಕವಾಗಿ ನಮ್ಮ ಸೋಲೆಂದಾಗಲಿ, ಕರ್ನಾಟಕದ ಹಿತವನ್ನು ಕೈಬಿಟ್ಟಂತಾಯಿತು ಎಂದಾಗಲಿ ಪರಿಗಣಿಸಬೇಕಾಗಿಲ್ಲ. ಪ್ರಾಧಿಕಾರದ ಕಾರ್ಯಸಾಧುವಲ್ಲದ ಸೂಚನೆಯನ್ನು ಮಾರ್ಪಾಟು ಮಾಡುವಂತೆ ಕೋರಿಕೆ ಸಲ್ಲಿಸಲು, ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ನಮ್ಮ ವಾದವನ್ನು ಪರಿಣಾಮಕಾರಿಯಾಗಿ ಮಂಡಿಸಲು ಇದು ಅಗತ್ಯ ವಾತಾವರಣವನ್ನು ನಿರ್ಮಾಣಮಾಡುವುದು. ಈಗ ಪ್ರತಿದಿನ 4,000 ಕ್ಯೂಸೆಕ್ಸ್ ನೀರು ಮಾತ್ರ ತಮಿಳುನಾಡಿಗೆ ಬಿಡುಗಡೆಯಾಗುತ್ತಿದೆ ಎನ್ನಲಾಗಿದೆ. ನೀರಿನ ಒಳ ಹರಿವಿನ ಆಧಾರದಲ್ಲಿ ಇದನ್ನು ಇನ್ನಷ್ಟು ಹೆಚ್ಚಿಸಲು ಸಾಧ್ಯವಿದ್ದರೆ ಅದನ್ನು ಪರಿಶೀಲಿಸಬೇಕು. ತಮಿಳುನಾಡು ಸರ್ಕಾರ ಒತ್ತಾಯಿಸುವಂತೆ ಪ್ರತಿದಿನ 2 ಟಿಎಂಸಿ ನೀರನ್ನು ಬಿಡುವುದು ಸಾಧ್ಯವಾಗಲಿಕ್ಕಿಲ್ಲ. ಆ ಕುರಿತು ಅಂತಿಮವಾಗಿ ಎರಡೂ ರಾಜ್ಯ ಸರ್ಕಾರಗಳು ನ್ಯಾಯಾಲಯದ ತೀರ್ಮಾನಕ್ಕೆ ತಲೆಬಾಗಲೇಬೇಕು.

ಸಂಕುಚಿತವಾದದ ಬೇಲಿಯ ಕಟ್ಟುತ್ತಾ ಹೋದೊಡೆ ಎಂತಯ್ಯಾ.....

ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಆಗೀಗ ಏಳುವ ಚರ್ಚೆ, ವಿವಾದಗಳ ಸ್ವರೂಪವನ್ನು ಗಮನಿಸಿದರೆ ಅವುಗಳಿಂದ ಬೆಳಕು ಕಾಣುವುದಿರಲಿ ಕತ್ತಲೆ ಅಡರದಿದ್ದರೆ ಸಾಕೇ ಸಾಕು ಎನ್ನುವಂತಾಗುವುದು ಸನ್ನಿವೇಶದ ದುಸ್ಥಿತಿ, ದುರಂತವೆಂದೇ ಹೇಳಬೇಕಾಗುತ್ತದೆ. ವಸ್ತು ನಿಷ್ಠತೆ ಮತ್ತು ಸಮಗ್ರ ದೃಷ್ಟಿಕೋನದ ಬದಲು ಬಹುತೇಕ ವ್ಯಕ್ತಿನಿಷ್ಟ ಕಾರಣಗಳೇ ಪ್ರಾಧಾನ್ಯತೆ ಪಡೆಯುವುದು ಹೆಚ್ಚಾಗುತ್ತಿದೆ. ಅಂತಿಮವಾಗಿ ಇದರ ಪ್ರಯೋಜನ ಆಗುವುದಾದರೂ ಯಾರಿಗೆ? ಏನೀ ಮಾನದಂಡ?




ಇಂತಹ ಒಂದು ಚರ್ಚೆ, ವಿವಾದ ಈ ವಾರದಲ್ಲಿ ಬಲು ತುರುಸಿನಿಂದಲೇ ನಡೆದಿದೆ. ಕೆಲವು ಹಿರಿಯ ಬರಹಗಾರರೇ ಅದರಲ್ಲಿ ತೊಡಗಿಕೊಂಡಿದ್ದಾರೆ. ಭಾರತದ ಮತ್ತು ವಿಶ್ವದ ಖ್ಯಾತರಾಗಿರುವ ಸಾಹಿತಿ ದಿ. ಆರ್.ಕೆ.ನಾರಾಯಣ್ ರವರ ಮೈಸೂರಿನ ಮನೆಯನ್ನು ಸ್ಮಾರಕವನ್ನಾಗಿಸಲು ಮುಂದಾಗಿರುವ ಕರ್ನಾಟಕ ಸರಕಾರದ ನಿರ್ಧಾರದ ಸುತ್ತ ವಿರೋಧ-ವಿವಾದವನ್ನು ಮಾಧ್ಯಮಗಳಲ್ಲಿ ಹುಟ್ಟು ಹಾಕಲಾಗಿದೆ. 'ಅವರು ಹುಟ್ಟಿದ್ದು ಸತ್ತಿದ್ದು ತಮಿಳುನಾಡಿನಲ್ಲಿ. ಕರ್ನಾಟಕದ ಮೈಸೂರಿನಲ್ಲಿ ವಾಸವಾಗಿದ್ದರೂ ಕನ್ನಡ ಸರಿಯಾಗಿ ಕಲಿಯಲಿಲ್ಲ, ಮಾತನಾಡಲಾಗಲಿಲ್ಲ, ಕನ್ನಡದಲ್ಲಿ ಬರೆಯದೇ ಇಂಗ್ಲೀಷ್‌ನಲ್ಲಿ ಬರೆದರು. ಜನರೊಂದಿಗೆ ಬೆರೆಯಲಿಲ್ಲ. ಪುಸ್ತಕಗಳನ್ನು ಮುದ್ರಣಕ್ಕೆ ನೀಡಿದ್ದು ಇಂಗ್ಲೆಂಡ್, ಅಮೇರಿಕಾದಲ್ಲೇ'. ಹೀಗಾಗಿ ರಾಜ್ಯದಲ್ಲಿ ಸ್ಮಾರಕ ಸರಕಾರದಿಂದ ಬೇಡ ಎಂಬ ವಾದಗಳು ಒಬ್ಬ ಅತ್ಯಂತ ಪ್ರತಿಭಾನ್ವಿತ ಲೇಖಕನ್ನು ಅರಿತಂತೆಯೇ? ಅಥವಾ ಅರ್ಥ ಮಾಡಿಕೊಳ್ಳುವ ಮಾನದಂಡದ ಬಗೆಯೇ?

ಮರೆಯಬಾರದ್ದು

ಆರ್.ಕೆ. ನಾರಾಯಣ್ ಸಾಹಿತ್ಯದ ಹಿರಿಯ ಸಾಧಕ. ಭಾರತೀಯ ಬರಹಗಾರರಲ್ಲಿ ಪ್ರಮುಖರು. ಅತ್ಯಂತ ಪ್ರಖ್ಯಾತ ವ್ಯಂಗ್ಯ ಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರ ಸಹೋದರ. ನಾರಾಯಣ್ ಜನಿಸಿದ್ದು 1906 ಬ್ರಿಟೀಷ್ ಕಾಲದ ಚೆನ್ನೈನಲ್ಲಾದರೂ ಬದುಕಿ ಬಾಳಿದ್ದು ಮೈಸೂರಿನಲ್ಲೇ. ಕಾಲೇಜ್ ವಿದ್ಯಾಭ್ಯಾಸ ಮಹಾರಾಜ ಕಾಲೇಜಿನಲ್ಲಿ. ತಾಯಿ ತಮಿಳು ಭಾಷಿಕರಾದರೂ ಅವರು ಮೈಸೂರಿನವರೇ. ಹೀಗಾಗಿ ಅವರ ಬಹುತೇಕ ಕೃತಿಗಳಲ್ಲಿ ಮೈಸೂರು ಒಳಗೊಂಡ ಈ ಭಾಗದ ಕರ್ನಾಟಕದ ಜನ ಸಾಮಾನ್ಯರ ಜೀವನದ ದಟ್ಟ ಚಿತ್ರಣ ಕಾಣಬಹುದು. ಅವರ ಖ್ಯಾತ 'ಮಾಲ್ಗುಡಿ ಡೇಸ್', ನೆನಪುಗಳ 'ಮೈ ಡೇಸ್' ಅಸ್ಟ್ರಾಲಜರ್ಸ್ ಡೇಸ್‌ನಂತಹ ಹಲವು ಕಥಾ ಸಂಕಲನ, ಕಾದಂಬರಿಗಳಲ್ಲಿ ಇವು ಒಡಮೂಡಿವೆ. ಅವರ ಪ್ರವಾಸ ಕಥನ 'ಮೈಸೂರು' ನೋಡುಗರಿಗೆ ಈಗಲೂ ಒಂದು ಮಾರ್ಗದರ್ಶಿ.

ಪ್ರಾದೇಶಿಕ ಸೊಗಡಿನಿಂದಾಗಿ ಶಂಕರ್ ನಾಗ್ ನಿರ್ದೇಶಿಸಿದ 'ಮಾಲ್ಗುಡಿ ಡೇಸ್' ಧಾರವಾಹಿ ಈಗಲೂ ಜನಪ್ರಿಯ. ಮಾಲ್ಗುಡಿಯ ಕಾಲ್ಪನಿಕ ಹೆಸರು ಮಲ್ಲೇಶ್ವರಂ ಮತ್ತು ಬಸವನಗುಡಿಗಳಿಂದ ಸಂಕಲನಗೊಂಡಿದ್ದು ಎನ್ನುತ್ತಾರೆ ಇತಿಹಾಸದ ಬರಹಗಾರರು. ಹೀಗೆ ಅವರು ಬರೆದದ್ದು ಇಂಗ್ಲೀಷ್‌ನಲ್ಲಾದರೂ ಪ್ರಾದೇಶಿಕವಾಗಿಯೇ ಯೋಚಿಸಿದವರು, ನಮ್ಮಲ್ಲಿ ಎಷ್ಟೋ ತಮಿಳು ಮಾತೃಭಾಷೆಯಾಗುಳ್ಳ ಅನೇಕರು ಕನ್ನಡದ ಖ್ಯಾತ ಬರಹಗಾರರಾಗಿದ್ದಾರೆ. ಭಾರತೀಯ ಇಂಗ್ಲೀಷ್ ಬರಹಗಾರರು ಒಂದಲ್ಲ ಒಂದು



ಮನೆಯಲ್ಲಿ ಅಧ್ಯಯನ ಮಗ್ನ ಡಾ॥ ಆರ್. ಕೆ. ನಾರಾಯಣ್

ಪ್ರಾದೇಶಿಕ ಭಾಷಾ ಮೂಲದಿಂದಲೇ ಬೆಳೆದವರಲ್ಲವೇ? ಬಾಷೆ ಎನ್ನುವುದು ಅಭಿವ್ಯಕ್ತಿಯ ಮಾಧ್ಯಮ. ಅಂದಿನ ಬ್ರಿಟೀಷ್ ವಸಾಹತು ಭಾರತದಲ್ಲಿ ಅದರಲ್ಲೂ ಮೈಸೂರು ಪ್ರದೇಶ ತಮಿಳುನಾಡಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕೊಡುಕೊಳ್ಳುವಿಕೆಯಲ್ಲಿ ಅನನ್ಯ ಸಂಬಂಧ ಹೊಂದಿದ್ದನ್ನು ಮರೆಯಲಾದೀತೆ?

ಪುಟ 14 ಕ್ಕೆ

ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್ಸೆಫೈ ದಿಗ್ವಿಜಯ

ಹಿಮಾಚಲ ರಾಜಾಸ್ತಾನ:

ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಸರ್ಕಾರ ಇದ್ದರೂ, ಬಿಜೆಪಿ ಮತ್ತು ಸಂಘ ಪರಿವಾರದಿಂದ ಅಧಿಕಾರ ದುರುಪಯೋಗ ಎಗ್ಗಿಲ್ಲದಂತೆ ನಡೆದರೂ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್.ಎಫ್.ಐ. ಗಳಿಸಿರುವ ವಿಜಯ ಗಮನಾರ್ಹವಾದದ್ದು. ರಾಜಾಸ್ತಾನದಿಂದಲೂ ಇಂತಹದ್ದೇ ಸಂತಸದ ಸುದ್ದಿ ಬಂದಿರುವುದು ವಿಶೇಷ.

ಹಿಮಾಚಲ ಪ್ರದೇಶದ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ) ಅಗಸ್ಟ್ 2012 ರಲ್ಲಿ ನಡೆದ ವಿದ್ಯಾರ್ಥಿಗಳ ಕೇಂದ್ರಿಯ ಸಂಘಟನೆಯ (ಎಸ್‌ಸಿಎ) ಚುನಾವಣೆಯಲ್ಲಿ ಐತಿಹಾಸಿಕ ಜಯಗಳಿಸಿದೆ.

ರಾಜ್ಯಾದ್ಯಂತ ಒಟ್ಟು 300 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಅಭ್ಯರ್ಥಿಗಳು 102 ಸ್ಥಾನಗಳಲ್ಲಿ ಜಯಗಳಿಸಿದ್ದಾರೆ. ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯ ಮತ್ತೊಮ್ಮೆ ಭಾರತ ವಿದ್ಯಾರ್ಥಿ ಫೆಡರೆಷನ್‌ನ ಭದ್ರ ನೆಲೆ ಎಂಬುದು ಸಾಬೀತಾಗಿದೆ. ಒಟ್ಟು 49 ವಿಭಾಗೀಯ ಪ್ರತಿನಿಧಿಗಳ ಸ್ಥಾನಗಳಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಅಭ್ಯರ್ಥಿಗಳು 46ರಲ್ಲಿ ಗೆಲವು ಸಾಧಿಸಿದ್ದಾರೆ. ಬಿಜೆಪಿ ಆಡಳಿತವಿರುವ ರಾಜ್ಯದಲ್ಲಿ ಸಂಘ ಪರಿವಾರದ ಅಂಗವಾದ ಎಬಿವಿಪಿ ಕೇವಲ 2 ಸ್ಥಾನಗಳನ್ನು ಗೆದ್ದಿದೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆ–ಎನ್‌ಎಸ್‌ಯುಐ ಕೇವಲ 1 ಸ್ಥಾನ ಪಡೆದಿದೆ. ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕೇಂದ್ರಿಯ ಸಂಘಟನೆಯ ನಾಲ್ಕು ಮುಖ್ಯ ಸ್ಥಾನಗಳಾದ ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಸಹಕಾರ್ಯದರ್ಶಿ ಸ್ಥಾನಗಳಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಈ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದು ಭರ್ಜರಿ ಜಯವನ್ನು ದಾಖಲಿಸಿದೆ. ಅಧ್ಯಕ್ಷರಾಗಿ ರಾಹುಲ್ ಚವ್ಹಾನ್ 713 ಮತಗಳ ಅಂತರದಿಂದ, ಉಪಾಧ್ಯಕ್ಷರಾಗಿ ಪ್ರಿಯಾಂಕಾ ಚವ್ಹಾನ್ 570 ಮತಗಳ ಅಂತರದಿಂದ ಮತ್ತು ಕಾರ್ಯದರ್ಶಿ ಹಾಗೂ ಸಹಕಾರ್ಯದರ್ಶಿಯಾಗಿ ವಿಕ್ರಮ್ ಕಯೆತ್ ಮತ್ತು ಅಮೀತ್‌ಕುಮಾರ ತಲಾ 696 ಮತ್ತು 751 ಮತಗಳ ಅಂತರದಿಂದ ಜಯಗಳಿಸಿದ್ದಾರೆ.

ಎಸ್ಎಫ್ಐ ತಂಡ ಒಟ್ಟು 18 ಕಾಲೇಜುಗಳಲ್ಲಿ ಸಂಪೂರ್ಣ ಜಯ ಸಾಧಿಸಿದೆ. ಒಟ್ಟು 8 ಕಾಲೇಜುಗಳಲ್ಲಿ 4 ಮುಖ್ಯ ಸ್ಥಾನಗಳ ಪೈಕಿ 3 ಸ್ಥಾನಗಳಲ್ಲಿ ಜಯಗಳಿಸಲಾಗಿದೆ. ಶಿಮ್ಲಾ ಜಿಲ್ಲೆಯಲ್ಲಿ ಒಟ್ಟು 48 ಸ್ಥಾನಗಳಲ್ಲಿ 35 ಸ್ಥಾನಗಳಲ್ಲಿ ಜಯಗಳಿಸಿದೆ. ಶಿಮ್ಲಾ ಪಟ್ಟಣದ ನಾಲ್ಕು ಕಾಲೇಜುಗಳ ಎಲ್ಲ 16 ಸ್ಥಾನಗಳನ್ನೂ ಎಸ್ಎಫ್ಐ ಗೆದ್ದುಕೊಂಡಿದೆ.

ಬಿಜೆಪಿ ಅಧಿಕಾರದಲ್ಲಿರುವ ರಾಜ್ಯದಲ್ಲಿ ಈ ಐತಿಹಾಸಿಕ ಗೆಲವು ತುಂಬಾ ಮಹತ್ವದ್ದಾಗಿದೆ. ವಿಶ್ವವಿದ್ಯಾಲಯದ ಉಪಕುಲಪತಿಯಾದ ಪ್ರೊಫೆಸರ್ ಎ.ಡಿ.ಎನ್. ಬಾಜಪೇಯಿ ಅಧಿಕಾರದ ದುರ್ಬಳಕೆ ಮಾಡಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ವಿರುದ್ಧ ಅಪಪ್ರಚಾರ ನಡೆಸಿ ಎಬಿವಿಪಿಗೆ ಅನುಕೂಲ ಪರಿಸ್ಥಿತಿಯನ್ನು ಉಂಟು ಮಾಡಿದ್ದರು. ಆರ್.ಎಸ್.ಎಸ್.ನ ಅಚ್ಚುಮೆಚ್ಚಿನ ವ್ಯಕ್ತಿಯಾಗಿರುವ ಈ ಪ್ರೊ. ಬಾಜಪೆಯಿ ಸಂಘ ಪರಿವಾರ ಕಾರ್ಯಕ್ರಮದಲ್ಲಿ ಯಾವಾಗಲೂ ಭಾಗವಹಿಸುತ್ತಾರೆ. ಇತ್ತೀಚೆಗೆ 'ವಿಶ್ವ ಹಿಂದು ಪರಿಷತ್'ನ ಶಿಮ್ಲಾ ಕಚೇರಿಯನ್ನು ಉದ್ಘಾಟನೆ ಮಾಡಿದ್ದಾರೆ. ಇದಲ್ಲದೇ ಕಳೆದ ವರ್ಷ ಎಸ್ಎಫ್ಐನ ಜಯವನ್ನು ಅರಗಿಸಿಕೊಳ್ಳಲಾಗದೆ, ಚುನಾಯಿತ ಸದಸ್ಯರ ಪ್ರತಿಜ್ಞಾ ಸ್ವೀಕಾರ ಸಮಾರಂಭವನ್ನು 7 ತಿಂಗಳು ಮುಂದೆ ಹಾಕಿದ್ದರು. ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿಸಿ ಚುನಾಯಿತ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರೂ ಸೇರಿದಂತೆ 6 ಮಂದಿ ಎಸ್ಸೆಫೈ ಕಾರ್ಯಕರ್ತರನ್ನು 29 ದಿನಗಳ ಕಾಲ ಜೈಲಿಗೆ ಕಳಿಸಿದ್ದರು. ಆದರೆ ವಿದ್ಯಾರ್ಥಿ ಸಮುದಾಯ ಈ ಎಲ್ಲ ಕುತಂತ್ರಗಳಿಗೆ ಸರಿಯಾದ ಪಾಠ ಕಲಿಸಿದೆ.

ಹಿಮಾಚಲ ಪ್ರದೇಶದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್‌ನ ಈ ಐತಿಹಾಸಿಕ ಜಯ ಶಿಕ್ಷಣ ರಂಗದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸ್ಥಾಪಿಸ ಬಯಸುವ ಇಡೀ ದೇಶದ ಪ್ರಗತಿಪರ ವಿದ್ಯಾರ್ಥಿ ಚಳುವಳಿಗೆ ಸ್ಫೂರ್ತಿದಾಯಕವಾದ ವಿಚಾರವಾಗಿದೆ.

ರಾಜಾಸ್ತಾನದಲ್ಲೂ ವಿಜಯ

ಇದೆಲ್ಲ ನಡೆದಿರುವಾಗಲೇ ಇತ್ತ ರಾಜಸ್ಥಾನ ದಿಂದಲೂ ಸಂತಸದ ಸಮಾಚಾರ ಬಂದಿದೆ. ರಾಜಸ್ಥಾನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಭಾರತ ವಿದ್ಯಾರ್ಥಿ ಒಕ್ಕೂಟದ ವಿದ್ಯಾರ್ಥಿಗಳು ಉತ್ತಮವಾದ ಸ್ಪರ್ಧೆ ನೀಡಿ ಜಯ ಸಾಧಿಸಿದ್ದಾರೆ.

ಒಟ್ಟು 150 ಕಾಲೇಜುಗಳ ವಿದ್ಯಾರ್ಥಿ ಸಂಘಗಳ ಮತ್ತು 9 ವಿಶ್ವವಿದ್ಯಾಲಯದ ಚುನಾವಣೆ ಅಗಸ್ಟ್ ತಿಂಗಳಲ್ಲಿ ನಡೆಯಿತು.



ಎಸ್ಎಫ್ಐ ಒಟ್ಟು 84 ಕಾಲೇಜುಗಳು ಮತ್ತು 2 ವಿಶ್ವವಿದ್ಯಾಲಯಗಳಲ್ಲಿ (ರಾಜಸ್ಥಾನ ವಿಶ್ವವಿದ್ಯಾಲಯ, ಜೈಪೂರ್ ಮತ್ತು ಜೈ ನಾರಾಯಣ ವ್ಯಾಸ ವಿಶ್ವವಿದ್ಯಾಲಯ ಜೋಧಪುರ,) ಸ್ಪರ್ಧಿಸಿತ್ತು. ಅವುಗಳ ಪೈಕಿ 44 ಕಾಲೇಜುಗಳು ಮತ್ತು 1 ವಿಶ್ವವಿದ್ಯಾಲಯದಲ್ಲಿ ಗೆದ್ದು ದೊಡ್ಡ ಗೆಲುವು ದಾಖಲಿಸಿದೆ. ಜೋಧಪುರ್ ವಿ.ವಿ. ಎಸ್ಸೆಫೈ ಅಧ್ಯಕ್ಷೀಯ ಅಭ್ಯರ್ಥಿ 557 ಮತಗಳ ಅಂತರದಿಂದ ಮತ್ತು ಜಂಟಿ ಕಾರ್ಯದರ್ಶಿ ಅಭ್ಯರ್ಥಿ 2180 ಮತಗಳ ಅಂತರದಿಂದ ಎಬಿವಿಪಿ ಅಭ್ಯರ್ಥಿಗಳನ್ನು ಸೋಲಿಸಿದ್ದಾರೆ. 12,000 ವಿದ್ಯಾರ್ಥಿಗಳುಳ್ಳ ಸೀಕಾರ್‌ನಲ್ಲಿನ ಶ್ರೀ ಕಲ್ಯಾಣ ಕಾಲೇಜಿನ ನಾಲ್ಕೂ ಪ್ರಮುಖ ಪದಾಧಿಕಾರಿಗಳ ಸ್ಥಾನಗಳನ್ನೂ ಎಸ್ಎಫ್ಐ ಭಾರಿ ಅಂತರದೊಂದಿಗೆ ಗೆದ್ದು ಭರ್ಜರಿ ಗೆಲುವು ದಾಖಲಿಸಿದೆ. ಸೀಕಾರ್, ಹನುಮಾನ್ ಗಡ್ ಮತ್ತು ಶ್ರೀ ಗಂಗಾನಗರ ಜಿಲ್ಲೆಗಳಲ್ಲಿ ಶೇ. 70 ರಷ್ಟು ಸ್ಥಾನಗಳಲ್ಲಿ ಎಸ್ಎಫ್ಐ ವಿಜಯ ಸಾಧಿಸಿದೆ.

ರಾಜಸ್ಥಾನದ ವಿ.ವಿ.ಗಳು, ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿನ ವಸುಂದರೇ ರಾಜೇ ನೇತೃತ್ವದ ಬಿಜೆಪಿ ಸರ್ಕಾರ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಿಷೇಧಿಸಿತ್ತು. ಎಸ್ಎಫ್ಐ ನೇತೃತ್ವದಲ್ಲಿ ಈ ಪ್ರಜಾಸತ್ತಾತ್ಮಕ ಹಕ್ಕುಗಳ ಮರುಸ್ಥಾಪನೆಗಾಗಿ ದೊಡ್ಡ ಹೋರಾಟಗಳು ನಡೆದಿದ್ದವು. ಈಗಿನ ಕಾಂಗ್ರೆಸ್ ಮುಖ್ಯಮಂತ್ರಿ ಚುನಾವಣಾ ಸಮಯದಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸುವ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರುಸ್ಥಾಪಿಸುವ ಭರವಸೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದು ಮುಖ್ಯಮಂತ್ರಿಯಾದ ಮೇಲೆ ಮಾತು ತಪ್ಪಿದರು.

ವಿಷಾದದ ವಿಷಯ ಎಂದರೆ ಅಶೋಕ್ ಗೆಲ್ಹೋಟ್ ಇದೇ ಜೋದ್‌ಪುರ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಮುಖಂಡರಾಗಿ ಬೆಳೆದು ರಾಜಕೀಯವಾಗಿ ಮೇಲೇರಿ ಬಂದವರು. ಎಸ್ಎಫ್ಐ ಮತ್ತೆ ಹೋರಾಟದ ಬಾವುಟ ಎತ್ತಿತು. ಕೊನೆಗೆ ಸರಕಾರ ಮಣಿಯಿತು. ಪರಿಸ್ಥಿತಿಯ ವ್ಯಂಗ್ಯವೆಂದರೆ ಇದೇ ಅಶೋಕ್ ಗೆಲ್ಹೋಟ್ ಪ್ರತಿನಿಧಿಸುತ್ತಿರುವ ಜೋಧಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಇರುವ ಅದೇ ಜೋಧ್‌ಪುರ್ ವಿ.ವಿ.ಯಲ್ಲಿ ಈಗ ಎಸ್ಎಫ್ಐ ಬಾವುಟ ಹಾರುತ್ತಿದೆ.

ನಿವೇಶನ ಮತ್ತು ಭೂಮಿ ಚಳುವಳಿ – ಜೈಲ್‌ಭರೋ ನವೆಂಬರ್ 5ಕ್ಕೆ

ಮನೆ ನಿವೇಶನ ಮತ್ತು ಭೂಮಿಗಾಗಿ ಅಕ್ಟೋಬರ್ 5ರಂದು ನಡೆಯಲಿದ್ದ ಜೈಲ್‌ಭರೋ ಚಳುವಳಿಯನ್ನು ನವೆಂಬರ್ 5ಕ್ಕೆ ಮುಂದೂಡಲು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳು ನಿರ್ಧರಿಸಿವೆ.

ಗಣೇಶೋತ್ಸವ ದುರ್ಬಳಕೆ :

ಶಾಂತಿ ಸೌಹಾರ್ದತೆಗಾಗಿ ಸಿಪಿಐ(ಎಂ) ಮನವಿ.

ಕರ್ನಾಟಕದ ಪ್ರಮುಖ ರಾಜಕೀಯ ಬೆಳವಣಿಗೆಗಳ ಕುರಿತು ಸಿಪಿಐ(ಎಂ) ನ ರಾಜ್ಯ ಸೆಕ್ರೆಟಾರಿಯೇಟ್ ನಡೆಸಿದ ಅವಲೋಕನ

ಚಿಂತಾಮಣಿಯಲ್ಲಿ ಗಲಭೆ :

ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ನಗರದ ಅಗ್ರಹಾರದಲ್ಲಿ ಸೆ. 23ರ ರಾತ್ರಿ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ಎರಡು ಕೋಮುಗಳ ಗುಂಪುಗಳ ನಡುವೆ ಘರ್ಷಣೆ ಸಂಭವಿಸಿ ಅಂಗಡಿ, ಮನೆಗಳ ಮೇಲೆ ಕಲ್ಲು ತೂರಾಟ ನಡಸಿದ್ದಾರೆ. ನಗರದ ಪಟಾಲಮ್ಮ ದೇವಸ್ಥಾನದ ಬಳಿ ಕರೆಂಟ್ ಕೈ ಕೊಟ್ಟ ಹಿನ್ನೆಲೆಯಲ್ಲಿ ಕಾರ್ಯನಿರತ ಮುಖ್ಯ ಪೇದೆ, ಬಾಗೇಪಲ್ಲಿ ತಾಲ್ಲೂಕಿನ ಏಟಗಡಪಲ್ಲಿ ಗ್ರಾಮದ ನಿವಾಸಿ ಸುಧಾರಕ್‌ರೆಡ್ಡಿ ಮೇಲೆ ದುಷ್ಕರ್ಮಿಗಳು ಕಲ್ಲು ತೂರಿದ ಪರಿಣಾಮ ತಲೆಗೆ ತೀವ್ರ ಗಾಯವಾಗಿ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಪೋಲಿಸರು 144 ಸೆಕ್ಷನ್ ಜಾರಿಗೊಳಿಸಿದ್ದಾರೆ. ಗಲಭೆಗೆ ಕಾರಣವಾದ ಹಿಂದು ಸಂಘಟನೆಗಳೇ ಮರುದಿನ ಬಂದ್ ಕರೆ ನೀಡಿದ್ದಾರೆ. ಸಿಪಿಐ(ಎಂ) ಪಕ್ಷದ ನಿಯೋಗ ಕಾಂ. ಜಿ.ವಿ. ಶ್ರೀರಾಮರೆಡ್ಡಿ ನೇತೃತ್ವದಲ್ಲಿ ಸ್ಥಳಕ್ಕೆ ಬೇಟಿಕೊಟ್ಟಾಗ, ಘಟನೆ ನಡೆದ ಸ್ಥಳದ ಸುತ್ತಮುತ್ತಲಿನ ಮನೆಗಳ ಜನ ಪೋಲಿಸ್ ಭೀತಿಯಿಂದ ಮನೆಗಳಿಗೆ ಬೀಗ ಹಾಕಿ ಊರು ಬಿಟ್ಟು ಹೋಗಿದ್ದು ಕಂಡು ಬಂದಿದೆ.

ದೇವದುರ್ಗದಲ್ಲಿ ಗಲಭೆ : ರಾಯಚೂರು ಜಿಲ್ಲೆ ದೇವದುರ್ಗದಲ್ಲೂ ಅದೇ 23ರಂದು ರಾತ್ರಿ ಗಣೇಶ ವಿಸರ್ಜನೆ ಸಂದರ್ಭದಲ್ಲಿ ಎರಡು ಕೋಮಿನ ಗುಂಪುಗಳ ನಡುವೆ ಘರ್ಷಣೆ ಸಂಭವಿಸಿ ಕಲ್ಲು ತೂರಾಟ ನಡೆದಿದೆ. ಪೋಲಿಸರು ಲಾಠಿ ಪ್ರಹಾರ ಮಾಡಿ ಉದ್ರಿಕ್ತರನ್ನು ನಿಯಂತ್ರಿಸಲು ಯತ್ನಿಸಿದ್ದಾರೆ. ಮುರುದಿನವೂ ಉದ್ವಿಗ್ನ ಪರಿಸ್ಥಿತಿ ಮುಂದುವರೆದಿದ್ದ ಕಾರಣಕ್ಕಾಗಿ ತಹಸೀಲ್ದಾರ್ 144 ಸೆಕ್ಷನ್ ಅನ್ವಯ ನಿಷೇದಾಜ್ಞೆ ಜಾರಿ ಮಾಡಿದ್ದಾರೆ.

ಯಾದಗಿರಿ ಜಿಲ್ಲೆ: ಸುರಪುರ ತಾಲ್ಲೂಕಿನ ಕೆಂಬಾವಿಯಲ್ಲಿ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ಗಲಭೆಯಗಿದೆ. ಮರುದಿನ ಎಬಿವಿಪಿ ಬಂದ್‌ಗೆ ಕರೆ ನೀಡಿ ಅಂಗಡಿ ಮುಗಟ್ಟುಗಳನ್ನು ಮುಚ್ಚಿಸಿದೆ.

ಗಣೇಶ ವಿಸರ್ಜನೆಯ ಸಮಯದಲ್ಲಿ ಒಂದಲ್ಲ ಒಂದು ಕಡೆ ಗಲಭೆಗಳು ಸಂಭವಿಸುತ್ತಿರುವುದು ಸಾಮಾನ್ಯವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಗಣೇಶ ವಿಸರ್ಜನೆಯ ನೇತೃತ್ವವನ್ನು ಸಂಘ ಪರಿವಾರದ ಸಂಘಟನೆಗಳು ವಹಿಸಿಕೊಳ್ಳುತ್ತಿರುವುದು. ತಡ ರಾತ್ರಿವರೆಗೂ ಗಣೇಶ ವಿಗ್ರಹಗಳ ಮೆರವಣಿಗೆ ನಡೆಸುತ್ತಾರೆ. ಉದ್ದೇಶ ಪೂರ್ವಕವಾಗಿ ಮಸೀದಿಗಳ ಮುಂದೆ ವಾದ್ಯಗಳನ್ನು ಬಾರಿಸುತ್ತಾ ತಲೆಗೆ ಕೇಸರಿ ಪಟ್ಟಿಕಟ್ಟಿಕೊಂಡು, ಯುವಕರು ಅಸಹ್ಯವಾಗಿ ನರ್ತನ ಮಾಡುತ್ತಾ, ಅಲ್ಪ ಸಂಖ್ಯಾತರ ಕೋಮಿನನವರ ಮೇಲೆ, ಅವರ ಅಂಗಡಿ, ಮನೆಗಳ ಮೇಲೆ ಪಟಾಕಿಗಳನ್ನು ಸಿಡಿಸಿ ಕಾಲು ಕೆದರಿ ಜಗಳ ಮಾಡುತ್ತಾರೆ. ಇಂತಹ ಗಲಭೆಗಳು ಪೂರ್ವಯೋಜಿತವಾಗಿರುತ್ತವೆ ಗಣೇಶ ವಿಸರ್ಜನೆಗೆ ರಾತ್ರಿ ವೇಳೆ ಅನುಮತಿ ನೀಡದಂತೆ ಒತ್ತಾಯಿಸುವುದು ಅಗತ್ಯ. ಹಗಲು ಹೊತ್ತಿನಲ್ಲೇ ವಿಸರ್ಜನೆ ನಡೆದರೆ ಗಲಭೆಗಳ ನಿಯಂತ್ರಣ ಸುಲಭವಾಗಬಹುದು.

ಈ ನಡುವೆ ಕೋಮು ಗಲಭೆಯಿಂದ ನಲುಗಿದ ಬೆಳಗಾವಿ ನಗರದಲ್ಲಿ ಶಾಂತಿ ಮರಳುತ್ತಿದೆ. ಸಿಪಿಐ(ಎಂ) ಪಕ್ಷದ ಮುತುವರ್ಜಿಯಿಂದ ನಗರದಲ್ಲಿ ಶಾಂತಿ ಸೌಹಾರ್ದ ಸಮಾವೇಶ ವನ್ನು ಯಶಸ್ವಿಯಾಗಿ ನಡೆಸಲಾಗಿದೆ. ರಾಜ್ಯ ಬಿಜೆಪಿ ಸರ್ಕಾರದ ನೆರಳಿನಲ್ಲಿ ಸಂಘ ಪರಿವಾರದ ಶಕ್ತಿಗಳು ಚುನಾವಣೆಗಳು ಸಮೀಪಿಸುತ್ತಿದ್ದಂತೆ ಹೆಚ್ಚೆಚ್ಚು ಕ್ರಿಯಾ ಶೀಲವಾಗುತ್ತಿರುವುದನ್ನು ಗಮನಿಸಿ ಜನಸಮುದಾಯಗಳ ನಡುವೆ ತಡೆದು ಶಾಂತಿ ಸೌಹಾರ್ದತೆ ಕಾಪಾಡಲು ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ. ●

ಸಂಘಪರಿವಾರದ ಮುಖವಾಣಿಯಾಗುತ್ತಿರುವ ಕನ್ನಡಪ್ರಭ

ಒಂದು ಕಾಲದಲ್ಲಿ ಕನ್ನಡಿಗರ ಹೆಮ್ಮೆಯ ದಿನಪತ್ರಿಕೆಗಳಲ್ಲಿ ಒಂದಾಗಿದ್ದ ಕನ್ನಡಪ್ರಭ ದಿನಪತ್ರಿಕೆ ಈಗ ಅದು ಬಹುತೇಕವಾಗಿ ಆರೆಸ್ಸೆಸ್ ಸ್ವಾಧೀನವಾಗಿ ಸಂಘಪರಿವಾರದ ಮುಖ ಪತ್ರಿಕೆಯಾಗಿಬಿಟ್ಟಿದೆ. ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳ ಮತ್ತು ಸುದ್ದಿಗಳ ವೈಖರಿಯಿಂದ ಅಲ್ಪ ಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡಿಸಲಾಗುತ್ತಿದೆ. ಮಾತ್ರವಲ್ಲ ಕೋಮು ಗಲಭೆಗಳಿಗೆ ಪ್ರಚೋಧನೆ ನೀಡುತ್ತಿರುತ್ತದೆ. ಪತ್ರಿಕೆಯ ಈ ಧೋರಣೆ ಪ್ರತಿಭಟನಾರ್ಹ.

ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಮುಂದೆ ರೈತ ಮತ್ತು ಕೂಲಿಕಾರರ ಪ್ರತಿಭಟನೆ

ಟನ್ ಕಬ್ಬಿಗೆ 2,600 ರೂ. ಕೊಡಬೇಕು, ಬಾಕಿ ಇರುವ ಹಣವನ್ನು ಬಡ್ಡಿ ಸಹಿತ ಪಾವತಿ ಮಾಡಬೇಕು, ರೈತರಿಗೆ, ಕಟಾವುದಾರರಿಗೆ ಮತ್ತು ಗಾಡಿ ಹೊಡೆಯುವವರಿಗೆ ಅಪಘಾತ ವಿಮಾ ಸೌಲಭ್ಯವನ್ನು ಒದಗಿಸಬೇಕು, ಬೆಲೆ ಏರಿಕೆಗೆ ಅನುಗುನವಾಗಿ ಕಟಾವುದಾರರ ಕೂಲಿ ದರಗಳನ್ನು ಪರಿಷ್ಕರಿಸಬೇಕೆಂದು ಆಗ್ರಹಿಸಿ ಇತ್ತೀಚಿಗೆ ಮಳವಳ್ಳಿ ತಾಲ್ಲೂಕ್ ಭಾರತೀನಗರದ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಮುಂದೆ ಕಬ್ಬು ಬೆಳೆಗಾರರು ಮತ್ತು ಕಬ್ಬು ಕಟಾವುದಾರರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಇದಕ್ಕೂ ಮೊದಲು ಪ್ರತಿಭಟನಾಕಾರರು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಕಾರ್ಖಾನೆಯ ಆಡಳಿತ ವರ್ಗದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಕಾರ್ಖಾನೆಯ ಆಡಳಿತ ಮಂಡಳಿ ಕಛೇರಿಗೆ ಆಗಮಿಸಿ ಧರಣಿ ನಡೆಸಿದರು.

ಮಂಡ್ಯ ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ಸಕ್ಕರೆ ಕಾರ್ಖಾನೆಗಳ ಹೊಂದಿರುವ ಜಿಲ್ಲೆಗಳಲ್ಲಿ ಒಂದು. ಇಲ್ಲಿ 3 ಖಾಸಗಿ ಹಾಗೂ ಒಂದು ಸರ್ಕಾರಿ ಕಾರ್ಖಾನೆಯ ಜೊತೆಗೆ ಮೈಸೂರು ಜಿಲ್ಲೆಗೆ ಹೊಂದಿಕೊಂಡಂತೆ ಇನ್ನೊಂದು ಖಾಸಗಿ ಕಾರ್ಖಾನೆ ಇದೆ. ಕೃಷ್ಣರಾಜ ಸಾಗರ ಆಣೆಕಟ್ಟು ನಿರ್ಮಾಣವಾದ ನಂತರ ಕಾಲುವೆಗಳ ಮೂಲಕ ನೀರನ್ನು ಬಳಸಿಕೊಂಡು ರೈತರು ಅತಿ ಹೆಚ್ಚು ಕಬ್ಬನ್ನು ಬೆಳೆಯಲಾರಂಭಿಸಿದರು. ಆದರೆ ಸಕ್ಕರೆ ಕಾರ್ಖಾನೆಗಳ ಮಾಲೀಕರು ರೈತರು ಸರಬರಾಜು ಮಾಡಿದ ಕಬ್ಬಿನ ಹಣವನ್ನು ಒಂದು ವರ್ಷವೂ ಸರಿಯಾಗಿ ಪಾವತಿಮಾಡಿದ ಉದಾಹರಣೆಗಳಿಲ್ಲ ಎಂದು ರೈತರು ಹೇಳುತ್ತಾರೆ. "ಎದೆಯುದ್ದ ಸಾಲ, ಮಂಡಿಯುದ್ದ ಕಬ್ಬು" ಎಂಬ ಪ್ರಚಲಿತ ಗಾದೆ ಮಾತಿನಂತೆ ಕಷ್ಟಪಟ್ಟು ಕಬ್ಬು ಬೆಳೆದ ರೈತ ಸಾಲದ ಶೂಲಕ್ಕೆ ಬಲಿಯಾಗುತ್ತಿರುತ್ತಾನೆ. ಹೀಗಾಗಿ ಉತ್ಪಾದನೆಯಾಗುವ ಸಕ್ಕರೆಯ ಬೆಲೆ, ಇದರ ಉಪ ಉತ್ಪನ್ನಗಳಿಂದ ಬರುವ ಆದಾಯ ಮತ್ತು ಕೃಷಿ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಲೆಕ್ಕಹಾಕಿ ಕಬ್ಬಿಗೆ ದರ ನಿಗದಿ ಮಾಡಬೇಕೆಂಬುದು ರೈತರ ಮುಖ್ಯ ಬೇಡಿಕೆಯಾಗಿದೆ.

ಕಬ್ಬಿನ ದರ ನಿಗದಿ ಮಾಡುವ ಜೊತೆಯಲ್ಲೇ ಕಟಾವುದಾರರ ಕೂಲಿಯನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕು, ಹೊರ




ಜಿಲ್ಲೆಗಳಿಂದ ಬರುವ ಕಬ್ಬು ಕಟಾವುದಾರರಿಗೂ ಅಗತ್ಯ ಸೌಕರ್ಯಗಳನ್ನು ಒದಗಿಸಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಒತ್ತಾಯಿಸುತ್ತಾ ಬಂದಿದೆ.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷರಾದ ಎಂ. ಪುಟ್ಟಮಾದು, ಪ್ರಧಾನ ಕಾರ್ಯದರ್ಶಿ ಕೆ. ಬಸವರಾಜ ಅಲ್ಲದೇ ಮುಖಂಡರಾದ ಸುರೇಂದ್ರ, ಎನ್. ಚಂದ್ರಣ್ಣ, ಜೆ.ಎಂ.ಎಸ್. ಮುಖಂಡರಾದ ಸಿ.ಕುಮಾರಿ, ರೈತ ಸಂಘದ ಮುಖಂಡರಾದ ಟಿ.ಎಚ್.ಆನಂದ್, ಡಿ.ವೈ.ಎಫ್.ಐ. ನ ಕೃಷ್ಣ ಮಾತನಾಡಿದರು. ಕೆ. ಹನುಮೇಗೌಡ ಮನವಿಯನ್ನು ಓದಿ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸಿದರು. ಹನುಮೇಶ್ ಬಿ. ಕಾರ್ಯಕ್ರಮ ನಿರೂಪಿಸಿದರು.

ಮನವಿ ಪತ್ರವನ್ನು ಸ್ವೀಕರಿಸಿದ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ಎಂ. ನಾಗರಾಜು ಮಾತನಾಡಿ, ರೈತರ ಬೇಡಿಕೆಗಳ ಕುರಿತು ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಕೊಳ್ಳುವುದಾಗಿ ಭರವಸೆ ನೀಡಿದರು. ಬಿ. ನಾಗರಾಜು, ಮಹದೇವಮ್ಮ, ಹನುಮಂತೇಗೌಡ, ಶಿವಮಲ್ಲಯ್ಯ ಕೆಂಪಯ್ಯ, ಕುಮಾರ್ ಚೌಡೇಗೌಡ, ಪ್ರದೀಪ್ ಕುಮಾರ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

ಹನುಮೇಗೌಡ ಕೆ. ●

ಹರತಾಳಕ್ಕೆ ಕರಾವಳಿಯಲ್ಲಿ ವ್ಯಾಪಕ ಬೆಂಬಲ



ವರದಿ : ವಾ.ಉ.

ಡೀಸೆಲ್ ಬೆಲೆಯಲ್ಲಿ ಲೀಟರ್‌ಗೆ 5ರೂ.ಏರಿಕೆ, ಅಡಿಗೆ ಅನಿಲವನ್ನು ಒಂದು ವರ್ಷಕ್ಕೆ 6 ಸಿಲಿಂಡರ್‌ಗಳಿಗೆ ಮಿತಗೊಳಿಸುವಿಕೆ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ಹೂಡಿಕೆ, ವಿದೇಶೀ ನೇರ ಬಂಡವಾಳ ಹೂಡಿಕೆಯನ್ನು ವಿಮಾನಯಾನ, ಸಂಪರ್ಕ ಹಾಗೂ ತೈಲೋತ್ಪನ್ನ ಕ್ಷೇತ್ರಗಳಲ್ಲಿ ವಿಸ್ತರಿಸುವ ಕೇಂದ್ರ ಸರಕಾರದ ನೀತಿಯನ್ನು ವಿರೋಧಿಸಿ ರಾಷ್ಟ್ರಾದ್ಯಂತ ನಡೆದ ಸಪ್ಟೆಂಬರ್ 20ರ ಹರತಾಳವನ್ನು ಬೆಂಬಲಿಸಿ ಸಿಪಿಐ(ಎಂ), ಎಡ ಮತ್ತು ಕಾಂಗ್ರೇಸ್ಸೇತರ ಜಾತ್ಯಾತೀತ ಪಕ್ಷಗಳು, ಸಿಐಟಿಯು ಹಾಗೂ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಟನೆಗಳು ಕರಾವಳಿ ಜಿಲ್ಲೆಯಾದ್ಯಂತ ಅಲ್ಲಲ್ಲಿ ಪ್ರತಿಭಟನೆಗಳನ್ನು ನಡೆಸಿವೆ.



ಸಿಐಟಿಯು ದ.ಕ.ಜಿಲ್ಲಾ ಸಮಿತಿಯಿಂದ ಮಂಗಳೂರಿನಲ್ಲಿ ಪ್ರತಿಭಟನೆ:

ದೇಶದ ತೈಲ ಕಂಪೆನಿಗಳು ನಷ್ಟದಲ್ಲಿಲ್ಲ. ಸಾರ್ವಜನಿಕ ರಂಗದ ತೈಲ ಕಂಪೆನಿಗಳೂ ಖಾಸಗಿ ರಂಗದ ತೈಲ ಕಂಪೆನಿಗಳೂ ಸಾಕಷ್ಟು ಲಾಭದಲ್ಲಿ ನಡೆಯುತ್ತಿವೆ. ಆದರೆ ಖಾಸಗಿ ತೈಲ ಕಂಪೆನಿಗಳಿಗೆ ಅತ್ಯಧಿಕ ಲಾಭ ಒದಗಿಸಲು ಅವರ ಒತ್ತಡಕ್ಕೊಳಗಾಗಿ ತೈಲ ಬೆಲೆಯನ್ನು ಪದೇ ಪದೇ ಏರಿಸಲಾಗುತ್ತಿದ್ದು, ಡೀಸೆಲ್ ಬೆಲೆಯನ್ನು ಈ ನಿಟ್ಟಿನಲ್ಲಿ ಏರಿಸಲಾಗಿದೆ. ಅದೇ ರೀತಿ ಅನಿಲ ಸಿಲಿಂಡರ್‌ಗಳನ್ನು ಮಿತಿಗೊಳಪಡಿಸುವ ಮೂಲಕ ಹೆಚ್ಚುವರಿ ಸಿಲಿಂಡರ್‌ಗಳಿಗೆ ಸಾಮಾನ್ಯ ಜನ ಅಧಿಕ ದರ ತೆರುವಂತೆ ಮಾಡಲಾಗಿದೆ ಎಂಬುದಾಗಿ ಸಿಐಟಿಯು ರಾಜ್ಯ ಮುಖಂಡ ಬಿ.ಮಾಧವ ನುಡಿದರು. ಅವರು ಸಿಐಟಿಯು ದ.ಕ.ಜಿಲ್ಲಾ ಸಮಿತಿ ವತಿಯಿಂದ ಸಪ್ಟೆಂಬರ್ 17 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಹಿಂದೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಒತ್ತಡಕ್ಕೆ ಮಣಿದು ಪರಮಾಣು ಒಪ್ಪಂದವನ್ನು ಮಾಡಿಕೊಂಡಂತೆ, ಕೇಂದ್ರದ ಯುಪಿಎ ಸರಕಾರವು ಮತ್ತೊಮ್ಮೆ ವಿದೇಶೀ ನೇರ ಹೂಡಿಕೆಗೆ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿದೆ. ನಾಲ್ಕು ಮಿಲಿಯ ವ್ಯವಹಾರವುಳ್ಳ ಭಾರತದ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ 5 ಕೋಟಿ ಜನ ಜೀವನ ನಿರ್ವಹಣೆ ಮಾಡುತ್ತಿದ್ದರೆ, ಅಷ್ಟೇ ವ್ಯವಹಾರ ಮಾಡುವ ವಾಲ್ಮಾರ್ಟ್ ಕಂಪೆನಿ ಕೇವಲ 2 ಕೋಟಿ ಜನಕ್ಕೆ ಉದ್ಯೋಗ ನೀಡುತ್ತದೆ. ವಿದೇಶೀ ನೇರ ಹೂಡಿಕೆ ಚಿಲ್ಲರೆ ಮಾರಾಟ ಕ್ಷೇತ್ರಕ್ಕೆ ನಮ್ಮ ದೇಶಕ್ಕೆ ಬಂದದ್ದೇ ಆದರೆ ಕೋಟಿ ಸಂಖ್ಯೆಯ ಜನ ನಿರ್ಗತಿಕರಾಗುವವರು. ಅಲ್ಲದೆ ಸಾರ್ವಜನಿಕ ರಂಗದ ವಿಮಾನ ಯಾನ, ಸಂಪರ್ಕ ಹಾಗೂ ತೈಲೋತ್ಪನ್ನ ಕ್ಷೇತ್ರಗಳಲ್ಲಿ ವಿದೇಶೀ ಬಂಡವಾಳಕ್ಕೆ ಅವಕಾಶ ನೀಡಿದಲ್ಲಿ ನಮ್ಮ ದೇಶದ ಸ್ವಾವಲಂಬನೆ ಸ್ವಾಯತ್ತತೆಗಳನ್ನೇ ಬಹುರಾಷ್ಟ್ರೀಯ ಕಂಪೆನಿಗಳಿಗೆ ಒತ್ತೆಯಿಟ್ಟಂತೆ ಎಂಬುದಾಗಿ ಅವರು ಕೇಂದ್ರ ಸರಕಾರದ ನೀತಿಗಳನ್ನು ಟೀಕಿಸಿದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮುಖಂಡರುಗಳಾದ ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ,ಜಯಂತಿ ಬಿ.ಶೆಟ್ಟಿ, ಸದಾಶಿವ ದಾಸ್, ಶಶೀಂದ್ರ ಕುಕ್ಯಾನ್, ರೈತ ಮುಖಂಡರಾದ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್ ಮತ್ತಿತರರು ಭಾಗವಹಿಸಿದ್ದರು.

ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿಯಿಂದ ಪ್ರತಿಭಟನೆ:


ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿಯ ನೇತೃತ್ವದಲ್ಲಿ ತೊಕ್ಕೋಟು ಜಂಕ್ಷನ್ನಿನಲ್ಲಿ ಸಪೆಂಬರ್ 18 ರಂದು ಪ್ರತಿಭಟನೆ ನಡೆಯಿತು. ಡೀಸೆಲ್ ಬೆಲೆ ಏರಿಕೆ, ಅನಿಲ ಸಿಲಿಂಡರ್ ಕಡಿತ, ಚಿಲ್ಲರೆ ವ್ಯಾಪಾರ ಸೇರಿ ಸಾರ್ವಜನಿಕ ಉದ್ಯಮಗಳಲ್ಲಿ ವಿದೇಶೀ ನೇರ ಹೂಡಿಕೆಗೆ ಅವಕಾಶ ನೀಡಿದ ಕೇಂದ್ರದ ಯುಪಿಎ ಸರಕಾರದ ಜನವಿರೋಧೀ ನೀತಿಗಳನ್ನು ಖಂಡಿಸಿ ಪಕ್ಷದ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್ ಮಾತನಾಡಿದರು. ಪಕ್ಷದ ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಮುಖಂಡರಾದ ಪದ್ಮಾವತಿ ಶೆಟ್ಟಿ ಮತ್ತಿತರರು ಪ್ರತಭಟನೆಯ ನೇತೃತ್ವ ವಹಿಸಿದ್ದರು.

ಬೆಳ್ತಂಗಡಿಯಲ್ಲಿ ಆಟೋ ಚಾಲಕರ ಪ್ರತಿಭಟನೆ:

ಫೆಡರೇಶನ್ ಆಫ್ ಕರ್ನಾಟಕ ಆಟೋ ಡ್ರೈವರ್ಸ್ ಯೂನಿಯನ್ (ಸಿಐಟಿಯು) ಬೆಳ್ತಂಗಡಿ ತಾಲೂಕು ಸಮಿತಿ ನೇತೃತ್ವದಲ್ಲಿ ಸಪ್ಟೆಂಬರ್ 18 ರಂದು ಡೀಸೆಲ್ ದರ ಏರಿಕೆ ವಿರುದ್ಧ ಪ್ರತಿಭಟನೆ ನಡೆಯಿತು.

ಬೆಳ್ತಂಗಡಿ ಸಂತೆಕಟ್ಟೆಯಿಂದ ತಾಲೂಕು ಕಚೇರಿ ವರೆಗೆ ಆಟೋ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ಪ್ರತಿಭಟನೆ ಬಳಿಕ ತಹಶೀಲ್ದಾರರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ರೈತ ಮುಖಂಡರಾದ ಹರಿದಾಸ್, ಕಾರ್ಮಿಕ ಮುಖಂಡರಾದ ಶಿವಕುಮಾರ್, ಬಿ.ಎಂ.ಭಟ್ ಮಾತನಾಡಿದರು. ಕಾರ್ಮಿಕ ಮುಖಂಡರಾದ ನೀಲೇಶ್ ಪೆರಿಂಜೆ, ವಸಂತ ನಡ, ಜಯರಾಮ ಮಯ್ಯ, ದಾಮೋದರ ಭಟ್, ಆಟೋ ಸಂಘಟನೆಯ

ಪುಟ 12 ಕ್ಕೆ



ರಾಜ್ಯಾದ್ಯಂತ ಚಳುವಳಿ : ಬೆಳ್ತಂಗಡಿಯ ನಿವೇಶನ ರಹಿತರ ಹೋರಾಟದಲ್ಲಿ ಜಿ.ವಿ.ಎಸ್. ಎಚ್ಚರಿಕೆ

ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ವತಿಯಿಂದ ನಿವೇಶನ ರಹಿತರಿಗೆ ನಿವೇಶನ ಒದಗಿಸಬೇಕೆಂದು, ಸರಕಾರಿ ಜಾಗದಲ್ಲಿ ಮನೆಕಟ್ಟಿ ವಾಸಿಸಿದವರಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಏಳುನೂರಕ್ಕೂ ಮಿಕ್ಕಿ ನಾಗರಿಕರು ಬೆಳ್ತಂಗಡಿ ತಾಲೂಕು ಕಚೇರಿಯ ಎದುರು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿದರು. ಸರಕಾರ ಈ ವಿಷಯ ಸಂಬಂಧ ಶೀಘ್ರವೇ ಕ್ರಮ ಕೈಗೊಳ್ಳದಿದ್ದಲ್ಲಿ ರಾಜ್ಯದಾದ್ಯಂತ ಉಗ್ರ ಹೋರಾಟಕ್ಕೆ ಇಳಿಯುವುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮ ರೆಡ್ಡಿ ಈ ಸಂದರ್ಭದಲ್ಲಿ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ 12 ಲಕ್ಷ ಎಕ್ರೆ ಭೂಮಿ ಒತ್ತುವರಿಯಾಗಿರುವುದಾಗಿ ಬಾಲಸುಬ್ರಹ್ಮಣ್ಯಂ ಸಮಿತಿ ವರದಿ ನೀಡಿದೆ; ಒತ್ತುವರಿಯಾಗಿರುವ ಜಮೀನನ್ನು ಕೂಡಲೇ ಸರಕಾರ ವಶಕ್ಕೆ ತೆಗೆದುಕೊಂಡು ಬಡವರಿಗೆ ಹಂಚಬೇಕು ಎಂದು ಅವರು ಒತ್ತಾಯಿಸಿದರು. ಬರಗಾಲ ಪೀಡಿತ ಪ್ರದೇಶದಲ್ಲಿ ನೀರು, ಮೇವಿಲ್ಲದೆ ದನಕರುಗಳು ಸಾಯುತ್ತಿವೆ; ಅವುಗಳ ಸಂರಕ್ಷಣೆಯ ಕ್ರಮ ಕೈಗೊಳ್ಳದೆ ಸರಕಾರ ಗೋಸಂರಕ್ಷಣಾ ಮಸೂದೆ ತರುತ್ತಿರುವುದು ದುರಂತವಾಗಿದೆ ಎಂದು ಶ್ರೀರಾಮ ರೆಡ್ಡಿ ನುಡಿದರು.



ಪ್ರತಿಭಟನೆಯ ನೇತೃತ್ವವನ್ನು ಪಕ್ಷದ ತಾಲೂಕು ಸಮಿತಿ ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್, ಮುಖಂಡರುಗಳಾದ ಬಿ.ಎಂ.ಭಟ್, ಹರಿದಾಸ್, ಸುಕನ್ಯಾ, ಜಯರಾಮ್, ಶೇಖರ ಲಾಯಿಲ, ವಸಂತ ನಡ, ನೆಬಿಸ ಮತ್ತಿತರರು ವಹಿಸಿದ್ದರು. ಪ್ರದರ್ಶನಕ್ಕೆ ಮೊದಲು ನಗರ ಮುಖ್ಯ ರಸ್ತೆಯಲ್ಲಿ ತಾಲೂಕು ಕಚೇರಿವರೆಗೆ ಪ್ರತಿಭಟನಾಕಾರರು ಮೆರವಣಿಗೆ ನಡೆಸಿದರು.

ಡೀಸೆಲ್ ಬೆಲೆಯೇರಿಕೆ ಜನತೆಯ ಒಳಿತಿಗೇ ಎಂಬ ಈ ಸೋಗಾದರೂ ಏಕೆ, ಪ್ರಧಾನಿಗಳೇ?

ಹಣಕಾಸಿನ ಜಾಗತೀಕರಣ ಈಗ ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ, ನಾವು ಅದರೊಡನೆ ಹೊಂದಾಣಿಕೆ ಮಾಡಿಕೊಳ್ಳದೇ ವಿಧಿಯಿಲ್ಲ ಎಂದು ಹೇಳುತ್ತಲೇ, ದೇಶದ ಮೇಲೆ ಬಲವಂತದಿಂದ ಹೇರಿರುವುದನ್ನು ಜನತೆಗೆ ಒಳಿತು ಮಾಡುವಂತ ಕ್ರಮಗಳು ಎಂದು ಸೋಗು ಹಾಕುವ ಅಗತ್ಯವೇನೂ ಇಲ್ಲವಲ್ಲ. ಇಂತಹ ಸೋಗು ಹಾಕಿಸುವ 'ಸುಧಾರಣೆಗಳು' ನಿಜವಾಗಿಯೂ ಬೇಕೇ? ಜೂಜುಕೋರರ ಒಂದು ಸಣ್ಣ ಗುಂಪಿನ 'ವಿಶ್ವಾಸ' ಗಳಿಸಿ, ಉಳಿಸುವುದೇ ಪರಮೋಚ್ಚ, ಕೋಟ್ಯಂತರ ಜನತೆಯ ಹಿತಗಳು ಗೌಣ ಎಂದು ಭಾವಿಸುವ, ಹಣಕಾಸಿನ ಜಾಗತೀಕರಣಕ್ಕೆ ಪರ್ಯಾಯವೇ ಇಲ್ಲದಿರುವ ಒಂದು ವ್ಯವಸ್ಥೆಯಲ್ಲಿ ಜನತೆಯ ಹಕ್ಕುಗಳನ್ನು, ಅವರ ಜೀವನಾಧಾರಗಳನ್ನು ಅತಿಕ್ರಮಿಸಲೇ ಬೇಕಾಗಿದೆ, ಇದಕ್ಕಾಗಿ ನಮ್ಮ ಸಂವಿಧಾನದ ಕಣ್ಣೋಟವನ್ನು ಉಲ್ಲಂಘಿಸುವದಲ್ಲದೆ ಬೇರೆ ದಾರಿಯಿಲ್ಲ ಎಂದು ನಂಬಿರುವ ಸರಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯಲು ಯಾವ ನೈತಿಕ ಹಕ್ಕೂ ಇಲ್ಲ.

ಸೀತಾರಾಂ ಯೆಚೂರಿ

1991ರಲ್ಲಿ ಭಾರತದಲ್ಲಿ ನವ-ಉದಾರವಾದಿ 'ಸುಧಾರಣೆ'ಗಳ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಆಗ ಅದು ಪ್ರಜಾಪ್ರಭುತ್ವವನ್ನು, ಸಮಾನತೆಯನ್ನು ನಿರಾಕರಿಸುವ ಕ್ರಮ ಎಂದು ಹಲವರು ವಿರೋಧಿಸಿದರು. ಏಕೆಂದರೆ ಈ 'ಸುಧಾರಣೆ'ಗಳ ಪ್ರಕಾರ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸರಕುಗಳು, ಸೇವೆಗಳು ಮತ್ತು ಬಂಡವಾಳ ಯಾವುದೇ ನಿಯಂತ್ರಣಗಳಿಲ್ಲದೆ ಮುಕ್ತವಾಗಿ ಹರಿದಾಡಲು ಬಿಡಬೇಕು, ಅದರಿಂದ ಭಾರತದ ಕೋಟ್ಯಂತರ ದುಡಿಯುವ ಜನತೆಯ ಜೀವನ ಮಟ್ಟ ಅಂತರ್ರಾಷ್ಟ್ರೀಯ ಜೂಜುಕೋರರ ಮರ್ಜಿಗಳಿಗೆ, ದುರಾಸೆಗಳಿಗೆ ಪಕ್ಕಾಗಬೇಕಾಗುತ್ತದೆ ಎಂಬುದು ಆ ಟೀಕಾಕಾರರ ವಾದವಾಗಿತ್ತು. ಆ ಜೂಜುಕೋರರಿಗೆ ನಮ್ಮ ಆರ್ಥಿಕದಲ್ಲಿ 'ವಿಶ್ವಾಸ' ಕುಂದಿದರೆ, ಅದರಿಂದಾಗಿ ಅವರು ತಮ್ಮ ಹಣವನ್ನು ಹಿಂತೆಗೆದುಕೊಂಡರೆ, ಆಗ ಆ 'ವಿಶ್ವಾಸ'ವನ್ನು ಮರಳಿ ಪಡೆಯಲು ಕ್ರಮಗಳನ್ನು ಕೈಗೊಳ್ಳಲೇ ಬೇಕಾಗುತ್ತದೆ. ಆದರೆ ಇಂತಹ 'ವಿಶ್ವಾಸ'ವನ್ನು ಪುನರುಜ್ಜೀವನಗೊಳಿಸುವ ಕ್ರಮಗಳು ಅನಿವಾರ್ಯವಾಗಿಯೇ ಜನಗಳಿಗೆ ಯಾತನೆ ತರುವ ಕ್ರಮಗಳೇ ಆಗಿರಬೇಕಾಗುತ್ತದೆ. ಏಕೆಂದರೆ, ಬೇರೆ ಯಾವುದೇ ಕ್ರಮಗಳಿಂದ ಅವರ 'ವಿಶ್ವಾಸ'ವನ್ನು ಗಳಿಸಲು ಸಾಧ್ಯವಾಗುವುದಿಲ್ಲ. ಬೇರೆ ಯಾವುದೇ ಕ್ರಮಗಳು, ಅಂದರೆ ಸಿರಿವಂತರ, ಕಾರ್ಪೊರೇಟುಗಳ ಮತ್ತು ಹಣಕಾಸಿನ ಮಂದಿಗಳ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಕ್ರಮಗಳಂತೂ ಅವರ 'ವಿಶ್ವಾಸ' ಗಳಿಸಿಕೊಳ್ಳುವ ಬದಲು ತದ್ವಿರುದ್ಧ ಪರಿಣಾಮವನ್ನೇ ಉಂಟು ಮಾಡಬಹುದು.

ಹೀಗೆ ಬಾಲವೇ ನಾಯಿಯನ್ನು ಅಲ್ಲಾಡಿಸುವಂತಹ ಸನ್ನಿವೇಶ ಉಂಟಾಗುತ್ತದೆ- ಅಂತರ್ರಾಷ್ಟ್ರೀಯ ಜೂಜುಕೋರರ ಒಂದು ಸಣ್ಣ ಗುಂಪಿನ ಮರ್ಜಿಗಳು ಕೋಟ್ಯಂತರ ಜನಗಳ ಬದುಕನ್ನು ನಿರ್ಧರಿಸುವಂತಾಗುತ್ತದೆ. ಇದು ಪ್ರಜಾಪ್ರಭುತ್ವದ, ಸಮಾನತೆಯ ಮತ್ತು ಸಾರ್ವಭೌಮತೆಯ ನಿರಾಕರಣೆಯಲ್ಲದೆ ಬೇರೇನೂ ಅಲ್ಲ.

ತಪ್ಪೊಪ್ಪಿಗೆಯ ಭಾಷಣ!


ಆಗ ಹಣಕಾಸು ಮಂತ್ರಿಗಳಾಗಿದ್ದ ಮನಮೋಹನ ಸಿಂಗ್ ಮತ್ತು ನವ-ಉದಾರವಾದದ ಇತರ ಪ್ರತಿಪಾದಕರು ಈ ವಾದವನ್ನು ಗೇಲಿ ಮಾಡಿದರು, ಎಲ್ಲದರಲ್ಲೂ ಕೇಡನ್ನೇ ಕಾಣುವುದು ಈ ಟೀಕಾಕಾರರ ಛಾಯಮಾನ ಎಂದು ಹೀಗಳೆದರು. ಆರ್ಥಿಕ ವ್ಯವಸ್ಥೆಯನ್ನು ಮುಕ್ತಗೊಳಿಸಿದರೆ ಅದು ಎಷ್ಟು ಬಲಿಷ್ಟವಾಗುತ್ತದೆ, 'ದಕ್ಷ'ವಾಗುತ್ತದೆ ಮತ್ತು ಅಂತರ್ರಾಷ್ಟ್ರೀಯವಾಗಿ ಸ್ಪರ್ಧಾತ್ಮಕವಾಗುತ್ತದೆಂದರೆ, ಭಾರತ ಒಂದು ಯಶಸ್ವಿ ರಫ್ತುಗಾರ ದೇಶವಾಗಿ ಹೊರಹೊಮ್ಮುತ್ತದೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅತ್ಯಂತ ಪ್ರಿಯ ತಾಣವಾಗುತ್ತದೆ ಎಂದೆಲ್ಲ ಅವರು ತರ್ಕ ಹೂಡಿದರು. 1991ರಲ್ಲಿ ದೇಶವನ್ನು ತಟ್ಟಿದಂತಹ 'ಪಾವತಿ ಬಾಕಿ'ಯ ಬಿಕ್ಕಟ್ಟು ಈ 'ಸುಧಾರಣೆ'ಗಳನ್ನು ತರುವ ಮೊದಲಿನ 'ಅಂತರ್ಮುಖಿ' ವ್ಯವಸ್ಥೆಯ ಬಳುವಳಿಯಾಗಿ ಬಂದಿರುವ 'ಅದಕ್ಷತೆ'ಗಳ ಫಲಿತಾಂಶ, ಈ 'ಅದಕ್ಷತೆ'ಗಳಿಂದಾಗಿಯೇ ಇಂತಹ 'ಸುಧಾರಣೆ'ಗಳನ್ನು ತರಬೇಕಾಗಿ ಬಂದಿದೆ. ಈ 'ಸುಧಾರಣೆ'ಗಳು ಆ ಬಳುವಳಿಯನ್ನು ನಿವಾರಿಸಿದ ಮೇಲೆ ಇಂತಹ ಪಾವತಿ ಬಿಕ್ಕಟ್ಟುಗಳು ಮತ್ತೆಂದೂ ಸಂಭವಿಸುವುದೇ ಇಲ್ಲ. ಅವು ಗತಕಾಲದ ಸಂಗತಿಗಳಾಗಿ ಬಿಡುತ್ತವೆ ಎಂಬುದು ಅವರ ವಾದವಾಗಿತ್ತು.

ಮನಮೋಹನ್ ಸಿಂಗ್ ಅವರು ಸಪ್ಟಂಬರ್ 21ರಂದು ದೇಶವನ್ನುದ್ದೇಶಿಸಿ ಮಾಡಿದ ಟೆಲಿವಿಶನ್ ಪ್ರಸಾರ ಭಾಷಣ, ತಮ್ಮ ಈ ನವ-ಉದಾರವಾದಿ ತರ್ಕಗಳೆಲ್ಲ ತಪ್ಪು, ತಾವು ಗೇಲಿಮಾಡಿದ್ದ ಟೀಕಾಕಾರರು ಸರಿಯಾಗಿಯೇ ಹೇಳಿದ್ದರು ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಂತಹ ಭಾಷಣ. ಅವರು ತಮ್ಮ ಈ ಭಾಷಣದಲ್ಲಿ 1991ರ ಬಿಕ್ಕಟ್ಟು ಮತ್ತು ಈಗಿನದನ್ನು ಹೋಲಿಸಿ ನೋಡಿದ್ದಾರೆ. ಆದರೆ ಅವರು ಆಗ ಹೇಳಿದ್ದಂತಹ 1991ರ ಮೊದಲಿನ 'ಅಂತರ್ಮುಖಿ' ಕಾರ್ಯತಂತ್ರವನ್ನು ಹೂತು ಹಾಕಿದ ಎರಡು ದಶಕಗಳ ನಂತರವೂ 1991ರ ಮಾದರಿಯ ಬಿಕ್ಕಟ್ಟು 2012ರಲ್ಲಿ ನಮ್ಮ ಆರ್ಥಿಕವನ್ನು ಮತ್ತೆ ತಟ್ಟಿದೆಯೆಂದರೆ, ದೋಷ ಆ ಕಾರ್ಯತಂತ್ರದ್ದಲ್ಲ, ಆ ಬಿಕ್ಕಟ್ಟನ್ನು ತಂದದ್ದು ಆ 'ಅಂತರ್ಮುಖಿ' ಕಾರ್ಯತಂತ್ರವಲ್ಲ ಎಂದಾಗುವುದಿಲ್ಲವೇ? ವಾಸ್ತವವಾಗಿ ಆ ಬಿಕ್ಕಟ್ಟು ಬಂದದ್ದು 1980ರ ದಶಕದಿಂದ ಆರಂಭಿಸಿ ಆ 'ಅಂತರ್ಮುಖಿ' ಕಾರ್ಯತಂತ್ರವನ್ನು ಕ್ರಮೇಣ ಕೈಬಿಡಲಾರಂಭಿಸಿ, ನಮ್ಮ ಆರ್ಥಿಕವನ್ನು ಮನಬಂದಂತೆ ಹರಿದಾಡುವ, ಚಂಚಲವಾದ ಅನಿವಾಸಿ ಠೇವಣಿಗಳ ಸ್ವರೂಪದಲ್ಲಿ ಹರಿದು ಬಂದ ಜಾಗತಿಕ ಹಣಕಾಸಿಗೆ ತೆರೆದು ಕೊಟ್ಟಿದ್ದರಿಂದಲೇ ಎಂದು ಟೀಕಾಕಾರು ಆಗಲೇ ಉತ್ತರ ಕೊಟ್ಟಿದ್ದರು. ಅದೀಗ ನಿಜವೆಂದು ಸಾಬೀತಾಗುತ್ತಿದೆ.

ಅದೇ ರೀತಿ, ನವ-ಉದಾರವಾದಿ ವ್ಯವಸ್ಥೆಯ ಅಡಿಯಲ್ಲಿ ಭಾರತದ ರಫ್ತುಗಳು ಭಾರೀ ಯಶಸ್ಸು ಗಳಿಸಿವೆ, ಭಾರತ 'ಆರ್ಥಿಕ ಮಹಾಶಕ್ತಿ'ಯಾಗಿ ಮೂಡಿ ಬರುತ್ತಿದೆ ಎಂದೆಲ್ಲ ಹೇಳಿಕೊಂಡರೂ, ಅದು ಇದ್ದಕ್ಕಿದ್ದಂತೆ ಜೂಜುಕೋರರ 'ವಿಶ್ವಾಸ'ವನ್ನು ಕಳಕೊಳ್ಳುವ ಭಯವನ್ನು ಏಕೆ ಎದುರಿಸಬೇಕಾಗಿ ಬಂದಿದೆ, ನವ-ಉದಾರವಾದಿ ಧೋರಣೆಗಳ ಟೀಕಾಕಾರರು ಹೇಳಿದ ರೀತಿಯಲ್ಲಿಯೇ, ಸರಕಾರ ಆ ಅಂತರ್ರಾಷ್ಟ್ರೀಯ ಜೂಜುಕೋರರ ಎದುರು ಮೊಣಕಾಲೂರಿ, ಜನಗಳ ಯಾತನೆಗಳನ್ನು ಉಲ್ಬಣಗೊಳಿಸುವ ಹತಾಶ ಕ್ರಮಗಳನ್ನು ಕೈಗೊಳ್ಳಬೇಕಾದ ಪರಿಸ್ಥಿತಿ ಏಕೆ ಬಂದಿದೆ? ಸಂಕ್ಷಿಪ್ತವಾಗಿ ಹೇಳುವುದಾದರೆ, ದೇಶದ ಆರ್ಥಿಕವನ್ನು ಹಣಕಾಸಿನ ಮುಕ್ತ ಹರಿದಾಟಕ್ಕೆ ತೆರೆದು ಇಟ್ಟಿರುವುದರಿಂದ ಅದರಿಂದ ಉಂಟಾಗುವ ಹಣಕಾಸು ಬಿಕ್ಕಟ್ಟುಗಳಿಗೂ ಅದು ತಲೆ ಕೊಡಬೇಕಾಗುತ್ತದೆ. ಎಷ್ಟೆಂದರೆ, ಅದಕ್ಕೆ 'ಜೂಜುಕೋರರ ವಿಶ್ವಾಸ'ವೇ ಪರಮೋಚ್ಚವಾಗುತ್ತದೆ, ಅದನ್ನು ಉಳಿಸಿಕೊಳ್ಳುವ ಪ್ರಕ್ರಿಯೆಗೆ ಜನಗಳ ಬದುಕನ್ನು ಒಗ್ಗಿಸಬೇಕಾಗುತ್ತದೆ.

ಜನಗಳ ಹಿಂಡುತ್ತಲೇ ಇರಬೇಕು!

ಮನಮೋಹನ್ ಸಿಂಗ್ ಈಗಾಗಲೇ ಪ್ರಕಟಿಸಿರುವ ಮತ್ತು ಅವರ ಸರಕಾರ ಮುಂದೆ ತರಬೇಕೆಂದಿರುವ ಜನ-ವಿರೋದಿ ಕ್ರಮಗಳು, ಜನತೆಯ ಹಣದಿಂದ ನಿರ್ಮಿಸಿರುವ ಸಾರ್ವಜನಿಕ ವಲಯದ ಆಸ್ತಿಗಳನ್ನು ದೇಶಿ-ವಿದೇಶಿ ಬಂಡವಾಳಿಗರಿಗೆ ವಹಿಸಿಕೊಡುವ ಅವರ ಯೋಜನೆಗಳು ನಮ್ಮ ದೇಶದ ಆರ್ಥಿಕದಿಂದ ಹಣಕಾಸು ಹೊರಗೆ ಹರಿದು ಹೋಗುವುದನ್ನು, ಆ ಮೂಲಕ ರೂಪಾಯಿಯ ಮೌಲ್ಯದ ಕುಸಿತವನ್ನು ತಡೆಯುತ್ತವೆ ಎಂದೇ ಇಟ್ಟುಕೊಳ್ಳೋಣ. ಅಷ್ಟೇ ಅಲ್ಲ, ಹಣಕಾಸು ದೇಶದೊಳಕ್ಕೆ ಹರಿದು ಬಂದು ಹೊಸದೊಂದು 'ಗುಳ್ಳೆ'ಯನ್ನು ಹುಟ್ಟಿಸಿ ಮತ್ತೆ ಜಿಡಿಪಿ ಬೆಳವಣಿಗೆ ಶುರುವಾಗುತ್ತದೆ ಎಂದೂ ಇಟ್ಟುಕೊಳ್ಳೋಣ. ಆದರೆ ಕೆಲಸಮಯದ ನಂತರ, ಆಗಾಗ ಸಂಭವಿಸುವಂತೆ, ಜಾಗತಿಕ ಮತ್ತು ಆಂತರಿಕ ಬೆಳವಣಿಗೆಗಳಿಂದಾಗಿ ಈ ಜೂಜುಕೋರರ 'ವಿಶ್ವಾಸ' ಕುಸಿದಾಗ, ಈ 'ಗುಳ್ಳೆ' ,ಈ ಜಿಡಿಪಿ ಬೆಳವಣಿಗೆ ಎಲ್ಲವೂ ಮತ್ತೊಮ್ಮೆ ಕುಸಿದರೆ, ಅದನ್ನು ಮತ್ತೊಮ್ಮೆ ಕುದುರಿಸಲು ಜನಗಳ ಬದುಕನ್ನು ಇನ್ನಷ್ಟು ಹಿಂಡುವ ಕ್ರಮಗಳನ್ನು ಪ್ರಕಟಿಸಬೇಕಾಗುತ್ತದೆ. ಅಂದರೆ ಈ ಹಿಡಿಯಷ್ಟು ಜೂಜುಕೋರರ 'ವಿಶ್ವಾಸ'ಕ್ಕೆ ತಿದಿಯೊತ್ತುತ್ತಲೇ ಇರಲು, ಆರ್ಥಿಕ ಬೆಳವಣಿಗೆ ಸಂಭವಿಸುವಾಗಲೂ ಅದರಿಂದ ಏನೂ ಪ್ರಯೋಜನ ಪಡೆಯದ, ಬದಲಿಗೆ ಇನ್ನಷ್ಟು ದಾರಿದ್ರ್ಯವನ್ನು ಅನುಭವಿಸುವ ಜನಸಾಮಾನ್ಯರನ್ನು ಮತ್ತೆ-ಮತ್ತೆ ಹಿಂಡುತ್ತಲೇ ಇರಬೇಕಾಗುತ್ತದೆ. ದೇಶದಲ್ಲಿ ಇಂತಹ ಒಂದು ಆರ್ಥಿಕ ದಿಕ್ಕನ್ನು ಹಿಡಿದಿರುವುದು ನಿಜವಾಗಿಯೂ ನಮ್ಮ ಸಂವಿಧಾನ ನೀಡಿರುವ ಭರವಸೆಗಳನ್ನು ನಗೆಪಾಟಲು ಮಾಡಿದೆ.



ಏನು ಮಾಡುವುದು, ಇಂತಹ ಒಂದು ದಾರಿಗೆ ಪರ್ಯಾಯವೇ ಇಲ್ಲ, 'ಜಾಗತೀಕರಣ, ಎಲ್ಲಕ್ಕೂ ಮಿಗಿಲಾಗಿ ಹಣಕಾಸಿನ ಜಾಗತೀಕರಣ ಈಗ ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ, ನಾವು ಅದರೊಡನೆ ಹೊಂದಾಣಿಕೆ ಮಾಡಿಕೊಳ್ಳದೇ ವಿಧಿಯಿಲ್ಲ ಎಂದು ನವ-ಉದಾರವಾದದ

ಪುಟ 14 ಕ್ಕೆ

'ಸಮರಶೀಲ ವಿದ್ಯಾರ್ಥಿ ಚಳುವಳಿ ಕಟ್ಟಿ'

ಎಸ್.ಎಫ್.ಐ 14ನೇ ಅಖಿಲ ಭಾರತ ಸಮ್ಮೇಳನದ ಕರೆ

ವರದಿ : ಹುಳ್ಳಿ ಉಮೇಶ್

ಸರ್ವರಿಗೂ ಸಮಾನ ಶಿಕ್ಷಣಕ್ಕಾಗಿ, ಶಿಕ್ಷಣದ ವ್ಯಾಪಾರೀಕರಣ, ಕೇಂದ್ರೀಕರಣ ನೀತಿಗಳ ವಿರುದ್ಧ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹಾಗೂ ಪ್ರಗತಿಪರ ವಿದ್ಯಾರ್ಥಿ ಚಳುವಳಿ ಮೇಲೆ ನಡೆಯುತ್ತಿರುವ ಧಾಳಿಗಳನ್ನು ಹಿಮ್ಮೆಟ್ಟಿಸಲು ದೇಶದಲ್ಲಿ ಸಮರಶೀಲ ವಿದ್ಯಾರ್ಥಿ ಚಳುವಳಿಯನ್ನು ಕಟ್ಟಲು ಎಸ್.ಎಫ್.ಐ ನ 14ನೇ ಅಖಿಲ ಭಾರತ ಸಮ್ಮೇಳನ ಕರೆ ನೀಡಿದೆ.

ತಮಿಳುನಾಡಿನ ಹುತಾತ್ಮ ಸಂಗಾತಿಗಳಾದ ಸೋಮುಸುಂದರಂ ಹಾಗೂ ಸೆಂಬುಲಿಂಗಂ ನಗರದಲ್ಲಿ ಎಸ್.ಎಫ್.ಐ ಅಖಿಲ ಭಾರತ ಸಂಸ್ಥಾಪಕ ಅಧ್ಯಕ್ಷರಾದ ಕಾಮ್ರೆಡ್ ಸಿ. ಭಾಸ್ಕರನ್ ಹಾಗೂ ಎಸ್.ಎಫ್.ಐ ಅಖಿಲ ಭಾರತ ಮಾಜಿ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸುಭಾಷ್ ಚಕ್ರವರ್ತಿ ಸಭಾಂಗಣದಲ್ಲಿ 2012 ಸೆಪ್ಟಂಬರ್ 4-7ರವರೆಗೆ ತಮಿಳುನಾಡಿನ ಐತಿಹಾಸಿಕ ನಗರ ಮಧುರೈನಲ್ಲಿ ಎಸ್.ಎಫ್.ಐ ನ 14ನೇ ಅಖಿಲ ಭಾರತ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ದೇಶದ 23 ರಾಜ್ಯಗಳಿಂದ 40 ಲಕ್ಷ ಸದಸ್ಯತ್ವವನ್ನು ಪ್ರತಿನಿಧಿಸಿ 750 ವಿದ್ಯಾರ್ಥಿ ನಾಯಕರುಗಳು ಪ್ರತಿನಿಧಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕರ್ನಾಟಕದಿಂದ ಮೂರು ಜನ ಕೇಂದ್ರ ಸಮಿತಿ ಸದಸ್ಯರನ್ನೊಳಗೊಂಡಂತೆ ಒಟ್ಟು 26 ಜನ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಆಕರ್ಷಕ ರ್‍ಯಾಲಿ ಮತ್ತು ಬಹಿರಂಗ ಸಭೆ


4ರಂದು ಸಂಜೆ ಸಾವಿರಾರು ವಿದ್ಯಾರ್ಥಿಗಳ ಆಕರ್ಷಕ ರ್‍ಯಾಲಿಯನ್ನು ಪಶ್ಚಿಮ ಮಧುರೈನ ಸಿ.ಪಿ.ಐ(ಎಂ) ಶಾಸಕರಾದ ಆರ್.ದೋರೈರಾಜುರವರು ರ್‍ಯಾಲಿಯನ್ನು ಉದ್ಘಾಟಿಸಿದರು. ಮಧುರೈನ ಬೀದಿಗಳಲ್ಲಿ ಹೊರಟ ರ್‍ಯಾಲಿ ನಂತರ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಜನಪರ ಪರ್ಯಾಯ ನೀತಿಗಳಿಗಾಗಿ. . . .

ಎಸ್.ಎಫ್.ಐನ ಅಖಿಲ ಭಾರತ ಮಾಜಿ ಅಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರಾದ ಕಾಮ್ರೇಡ್ ಸೀತಾರಾಮ್ ಯೆಚೂರಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ದೇಶದಲ್ಲಿ ಶೇ 54ರಷ್ಟು(ಅಂದರೆ ದೇಶದ ಒಟ್ಟು ಜನಸಂಖ್ಯೆಯ ಅರ್ಧದಷ್ಟು) ಯುವಜನರಿದ್ದಾರೆ. ಉತ್ತಮ ಭಾರತವನ್ನು ಕಟ್ಟಲು ಯಾವುದೇ ಒಂದು ಸರ್ಕಾರವನ್ನು ಅಥವಾ ಆಳ್ವಿಕೆ ನಡೆಸುತ್ತಿರುವ ಪಕ್ಷವನ್ನು ಬದಲಿಸಿದರೆ ಸಾಕಾಗುವುದಿಲ್ಲ ಬದಲಾಗಿ ಜನಪರ ಪರ್ಯಾಯ ನೀತಿಗಳನ್ನು ಜಾರಿಗೊಳಿಸುವ ಸರ್ಕಾರಗಳನ್ನು ಅಧಿಕಾರಕ್ಕೆ ತರಬೇಕಿದೆ. ಉತ್ತಮ ಸಾಮರ್ಥ್ಯವುಳ್ಳ ಈ ದೇಶದ ಯುವಜನತೆಗೆ ಎಡಪಕ್ಷಗಳಿಂದ ಮಾತ್ರ ಅಂತಹ ಜನಪರ ನೀತಿಗಳನ್ನು ನೀಡಲು ಸಾಧ್ಯ ಎಂದರು.

ದೇಶದಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರ ಪ್ರಕರಣಗಳು ನೈತಿಕತೆಯನ್ನು ಕುಗ್ಗಿಸುವುದಷ್ಟೇ ಅಲ್ಲ ದೇಶದ ಅಭಿವೃದ್ಧಿಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ತಡೆಯುತ್ತಿದೆ. ಇತ್ತೀಚಿನ ದೊಡ್ಡ ಮೊತ್ತದ ಕಲ್ಲಿದ್ದಲು ಹಗರಣ ಕುರಿತು ಪ್ರಸ್ತಾಪಿಸುತ್ತಾ ಕೇಂದ್ರದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರ ಹಾಗೂ ಬಿಜೆಪಿ ಪಕ್ಷಗಳೆರಡೂ ಈ ಹಗರಣದಲ್ಲಿ ಭಾಗಿಯಾಗಿವೆ. ಆದ್ದರಿಂದಲೇ ಪಾರ್ಲಿಮೆಂಟ್‌ನಲ್ಲಿ ಈ ವಿಷಯವನ್ನು ಚರ್ಚಿಸದೇ ಅಧಿವೇಶನ ನಡೆಯದಂತೆ ಅಡ್ಡಿಪಡಿಸುತ್ತಿವೆ. 2ಜಿ ತರಂಗಾಂತರ ಹಗರಣದಲ್ಲಿ 1.76 ಲಕ್ಷಕೋಟಿ ಹಣವನ್ನು ಲೂಟಿ ಹೊಡೆಯಲಾಗಿದೆ. ಈ ಹಣದಲ್ಲಿ ದೇಶದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ 3 ವರ್ಷ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬಹುದಾಗಿತ್ತು. ಅಗತ್ಯ ಮೂಲ ಸೌಕರ್ಯ ಹಾಗೂ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬಹುದಿತ್ತು. ಅದೇರೀತಿ ಇತ್ತೀಚೆಗೆ ಕಲ್ಲಿದ್ದಲು ಹಗರಣದಲ್ಲಿ 1.86 ಕೋಟಿ ಹಣವನ್ನು ಲೂಟಿ ಹೊಡೆದಿದ್ದು, ಈ ಹಣದಲ್ಲಿ ದೇಶದ ಜನತೆಗೆ ಆಹಾರ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಪ್ರತಿ ಕುಟುಂಬಕ್ಕೆ 35 ಕೆ.ಜಿ ಅಕ್ಕಿಯನ್ನು ರೂ 2ರಂತೆ ವಿತರಿಸಬಹುದಿತ್ತು. ಆಹಾರ ಭದ್ರತೆಗಾಗಿ ಎಡಪಕ್ಷಗಳು ನಿರಂತರವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಾ ಹಾಗೂ ಹೋರಾಟ ನಡೆಸುತ್ತಾ ಬಂದಿವೆ. ಆದರೆ ಕೇಂದ್ರ ಸರ್ಕಾರ ದೇಶದಲ್ಲಿ ಇನ್ನಷ್ಟು ಆಹಾರ ಬಿಕ್ಕಟ್ಟನ್ನು ಸೃಷ್ಟಿಸಲು ಮುಂದಾಗಿದೆ.

ಇಂತಹ ಸಂದರ್ಭದಲ್ಲಿ ಎಸ್.ಎಫ್.ಐನ 14ನೇ ಅಖಿಲ ಭಾರತ ಸಮ್ಮೇಳನ ನಡೆಯುತ್ತಿದ್ದು ದೇಶದಲ್ಲಿ ಜನಪರ ಪರ್ಯಾಯ ನೀತಿಗಳಿಗಾಗಿ ಹೋರಾಟ ನಡೆಸಬೇಕಿದೆ. ಅಂತಹ ಒಂದು ಜವಾಬ್ದಾರಿಯನ್ನು ನಿರ್ವಹಿಸಲು ಮುಂದಾಗಬೇಕೆಂದು ಎಸ್.ಎಫ್.ಐ ಕಾರ್ಯಕರ್ತರಿಗೆ ಕರೆ ನೀಡಿದರು.



ಈ ಸಂದರ್ಭದಲ್ಲಿ ಎಸ್.ಎಫ್.ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ರಿತೊಬ್ರತೊ ಬ್ಯಾನರ್ಜಿ ಮಾತನಾಡುತ್ತಾ ಕೇಂದ್ರದ ಯು.ಪಿ.ಎ ಸರ್ಕಾರ ಶಿಕ್ಷಣ ಕ್ಷೇತ್ರದ ಮೇಲೆ ಅತ್ಯಂತ ಅಪಾಯಕಾರಿ ಧಾಳಿಗಳನ್ನು ನಡೆಸುತ್ತಿದೆ. ವಿದೇಶಿ ವಿಶ್ವವಿದ್ಯಾಲಯಗಳಿಗೆ ಪ್ರವೇಶ ಕಲ್ಪಿಸುವ ಹಾಗೂ ಇಡೀ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಿಸುವ ನೀತಿಗಳನ್ನು ಜಾರಿಗೊಳಿಸಲು ಹೊರಟಿದೆ. ಇದರ ವಿರುದ್ಧ ದೇಶದಲ್ಲಿ ನಮ್ಮ ಹೋರಾಟ ಇನ್ನಷ್ಟು ತೀವ್ರಗೊಳಸಬೇಕಿದೆ ಎಂದರು. ಸ್ವಾತಂತ್ರ್ಯ ಹೋರಾಟಗಾರರು ಹಾಗು 1940ರ ದಶಕದ ವಿದ್ಯಾರ್ಥಿ ಸಂಘಟನೆಯ ಸಂಸ್ಥಾಪಕ ಮುಖಂಡರಲ್ಲೊಬ್ಬರಾದ ಕಾಂ.ಎನ್.ಶಂಕರಯ್ಯ, ಸಿ.ಪಿ.ಐ(ಎಂ) ಸಂಸದರಾದ ಟಿ.ಕೆ.ರಂಗರಾಜನ್, ಶಾಸಕರಾದ ಬಾಲಭಾರತಿ ಮಾತನಾಡಿದರು. ಎಸ್.ಎಫ್.ಐ ಅಖಿಲ ಭಾರತ ಅಧ್ಯಕ್ಷರು ಹಾಗೂ ಸಂಸದರಾದ ಪಿ.ಕೆ.ಬಿಜು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರತಿನಿಧಿ ಅಧಿವೇಶನ

ಸಾರ್ವತ್ರಿಕ ಶಿಕ್ಷಣ ಜಾರಿಯಾಗಲಿ– ಸಿ.ಪಿ.ಸಿ

ಸೆಪ್ಟಂಬರ್ 5ರಂದು ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಹೆಸರಾಂತ ಅರ್ಥಶಾಸ್ತ್ರಜ್ಞರಾದ ಸಿ.ಪಿ.ಚಂದ್ರಶೇಖರ್‌ರವರು ಉದ್ಘಾಟಿಸಿ ಮಾತನಾಡುತ್ತಾ ಜಗತ್ತಿನಲ್ಲಿ ನವ ಉದಾರವಾದಿ ನೀತಿಗಳನ್ನು ಪೋಷಿಸುತ್ತಿರುವ ಹಾಗೂ ಬಡ, ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಅವುಗಳನ್ನು ಹೇರುತ್ತಿರುವ ಬೃಹತ್ ಬಂಡವಾಳಶಾಹಿ ದೇಶಗಳಾದ ಅಮೇರಿಕಾ ಸೇರಿದಂತೆ ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರಗೊಂಡಿದೆ. ಉದಾರವಾದಿ ನೀತಿಗಳನ್ನು ಜಾರಿಗೊಳಿಸುತ್ತಿದ್ದ ಯೂರೋಪಿನ ಅನೇಕ ರಾಷ್ಟ್ರಗಳನ್ನು ಅಲ್ಲಿನ ಜನತೆ ಬದಲಾಯಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಭಾರತದಲ್ಲಿ ಜನತೆಯನ್ನು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿಸುವ ಮತ್ತದೇ ಉದ್ಧಾರೀಕರಣ ನೀತಿಗಳನ್ನು ಕೇಂದ್ರ ಸರ್ಕಾರ ಜಾರಿಗೊಳಿಸುತ್ತಿದೆ. ಇಂತಹ ನೀತಿಗಳು ಶಿಕ್ಷಣ ಕ್ಷೇತ್ರವನ್ನು ಇನ್ನಷ್ಟು ಅವಸಾನದ ಅಂಚಿಗೆ ಕೊಂಡೊಯ್ಯುತ್ತಿವೆ. 2009-10 ರಲ್ಲಿ ಭಾರತದಲ್ಲಿ 18-23 ವಯಸ್ಸಿನೊಳಗಿನವರಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರು ಕೇವಲ ಶೇ 15 ಮಾತ್ರ, ಕೆಲ ರಾಜ್ಯಗಳಲ್ಲಿ ಶಿಕ್ಷಣದ ಸೌಲಭ್ಯ ಕಡಿತಗೊಳ್ಳುತ್ತಿದ್ದು 18-23 ವಯಸ್ಸಿನ 1 ಲಕ್ಷ ಜನಸಂಖ್ಯೆಗೆ ಕೇವಲ 5 ಕಾಲೇಜುಗಳಿವೆ. ಅಲ್ಲದೆ ಅಂತಹ ಕಡೆ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಕೇವಲ 10.

1990-91 ಮತ್ತು 2007-08 ರಲ್ಲಿ ದೇಶದಲ್ಲಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ವ್ಯಾಪಕವಾಗಿ ಹೆಚ್ಚಿವೆ. ಕಾಲೇಜುಗಳು 4900 ರಿಂದ 13400ರವರೆಗೆ ಹಾಗೂ ವೃತ್ತಿಶಿಕ್ಷಣ ಸಂಸ್ಥೆಗಳು 900 ರಿಂದ 6900ರವರೆಗೆ ಹೆಚ್ಚಾಗಿವೆ. ಇವುಗಳಲ್ಲಿ ಬಹುಪಾಲು ಖಾಸಗೀ ಶಿಕ್ಷಣ ಸಂಸ್ಥೆಗಳಾಗಿವೆ. ಜಾಗತೀಕರಣ ನೀತಿಗಳ ಪರಿಣಾಮ ಶಿಕ್ಷಣ ರಂಗದಲ್ಲಿ ಖಾಸಗಿಯವರಿಗೆ ಹೂಡಿಕೆ ಮಾಡಲು ಅವಕಾಶ ನೀಡಿದ್ದರಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಬೆಳೆಯಲು ಕಾರಣವಾಗಿದೆ ಎಂದು ವಿಶ್ಲೇಷಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಹಾಗೂ ವಿದೇಶಿ ಶಕ್ತಿಗಳ ಪ್ರವೇಶವನ್ನು ನಿಯಂತ್ರಿಸದ ಹೊರತು ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ಎಸ್.ಎಫ್.ಐನ ಈ ಸಮ್ಮೇಳನ ದೇಶದ ಶಿಕ್ಷಣ ರಂಗ ಉಳಿವಿಗಾಗಿ ದೃಢ ತೀರ್ಮಾನಗಳನ್ನು ಕೈಗೊಳ್ಳಲಿ ಎಂಬ ಆಶಯ ವ್ಯಕ್ತಪಡಿಸಿದರು.

ನಂತರ ಎಸ್.ಎಫ್.ಐ ಅಖಿಲಭಾರತ ಪ್ರಧಾನ ಕಾರ್ಯದರ್ಶಿಗಳಾದ ರಿತೊಬ್ರತ ಬ್ಯಾನರ್ಜಿ ಕರಡು ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಒಟ್ಟು 9 ಗಂಟೆಗಳ ಕಾಲ ಪ್ರತಿನಿಧಿಗಳು ಚರ್ಚೆ ನಡೆಸಿದರು. ಕರ್ನಾಟಕದಿಂದ ಕಾಂ.ನಾರಾಯಣ ಕಾಳೆ, ಗುರುರಾಜ್ ದೇಸಾಯಿ ಹಾಗೂ ಜಗದೀಶ್ ಸೂರ್ಯ ವರದಿ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.



ಕೆಲವರ ಕಪಿಮುಷ್ಠಿಯಲ್ಲಿ ಶಿಕ್ಷಣ

ಭಾರತದ ಇತಿಹಾಸದಲ್ಲಿ ಶಿಕ್ಷಣ ಉಳ್ಳವರಿಗೆ ಹಾಗೂ ಮೇಲ್ವರ್ಗದವರಿಗೆ ಮಾತ್ರ ನೀಡಲ್ಪಟ್ಟಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಾರ್ವತ್ರಿಕ ಶಿಕ್ಷಣವನ್ನು ಇಂದಿಗೂ ಜಾರಿಗೊಳಿಸಲಾಗಲಿಲ್ಲ. ಮನುಸ್ಮೃತಿ ವಿಧಿಸಿದ ಶಾಸನದಿಂದಾಗಿ ಮಹಾಭಾರತದಲ್ಲಿ ಏಕಲವ್ಯನನ್ನು ; ತದನಂತರದಲ್ಲಿ ಶೋಷಿತ ವರ್ಗದವರನ್ನು ಹಾಗೂ ಮಹಿಳೆಯರನ್ನು ಶಿಕ್ಷಣದಿಂದ ವಂಚಿಸಲಾಗಿದೆ. ಆಧುನಿಕ ಭಾರತದಲ್ಲಿ ಬ್ರಿಟೀಷ್ ವಸಾಹತುಶಾಹಿಯ ಗುಲಾಮಗಿರಿ ಶಿಕ್ಷಣ ಪದ್ಧತಿ ಇಂದಿಗೂ ಮುಂದುವರಿದಿದೆ. ಆರ್.ಎಸ್.ಎಸ್ ಹಾಗೂ ಬಿ.ಜೆ.ಪಿ ಪ್ರಾಯೋಜಿತ ಶಿಕ್ಷಣದ ಕೇಸರೀಕರಣ ಪ್ರಕ್ರಿಯೆ ತೀವ್ರಗೊಳ್ಳುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಇವೆಲ್ಲವೂ ಸೈದ್ಧಾಂತಿಕ ಚರ್ಚೆಯ ವಿಷಯಗಳಾಗಿವೆ.

ಒಂದೆಡೆ ದೇಶದ ಆರ್ಥಿಕ ಬೆಳವಣಿಗೆಯ ದರ ಏರುತ್ತಿರುವಾಗಲೇ ಶಿಕ್ಷಣದ ಕೆಟ್ಟ ಪರಿಸ್ಥಿತಿ ಮುಂದುವರಿದಿದೆ. ಕೇಂದ್ರದ ಕಾಂಗ್ರೇಸ್ ನೇತೃತ್ವದ ಯು.ಪಿ.ಎ–2 ಸರಕಾರ ಶಿಕ್ಷಣ ಕ್ಷೇತ್ರಕ್ಕೆ ಸಂಪನ್ಮೂಲ ಸಂಗ್ರಹಿಸದೇ ನಿರ್ಲಕ್ಷಿಸಿರುವುದೇ ಇಂತಹ ಪರಿಸ್ಥಿತಿಗೆ ಕಾರಣವಾಗಿದೆ. ಯು.ಪಿ.ಎ ಸರಕಾರವೂ ಈ ಪರಿಸ್ಥಿತಿಯನ್ನು ಬದಲಾಯಿಸುವಲ್ಲಿ ವಿಫಲವಾಗಿದೆ. ಎಡಪಕ್ಷಗಳ ಒತ್ತಡದಿಂದಾಗಿ ಸಣ್ಣ ಪ್ರಮಾಣದಲ್ಲಿ ಬಜೆಟ್ ಹೆಚ್ಚಳ ಮಾಡಿತಾದರೂ ಕೇಂದ್ರ ಬಜೆಟ್‌ನಲ್ಲಿ ಶೇ 10 ರಷ್ಟು ಹಣ ಹಾಗೂ ಜೆ.ಡಿ.ಪಿಯಲ್ಲಿ ಶೇ6 ರಷ್ಟು ಹಣವನ್ನು ಶಿಕ್ಷಣ ಕ್ಷೇತ್ರಕ್ಕೆ ಮಿಸಲಿಡಬೇಕೆಂಬ ರಾಷ್ಟ್ರದ ವಿದ್ಯಾರ್ಥಿ ಸಮುದಾಯದ ಹಾಗೂ ಶೈಕ್ಷಣಿಕ ಕ್ಷೇತ್ರದ ಬೇಡಿಕೆಯು ಈಡೇರಿಕೆಗೆ ಗಂಭೀರ ಪ್ರಯತ್ನ ನಡೆಯಲಿಲ್ಲ. ಇದರ ಪರಿಣಾಮವೇ ಇಂದು ದೇಶದಲ್ಲಿ 17 ರಿಂದ 23 ರ ವಯಸ್ಸಿನ ಶೇ90 ರಷ್ಟು ಯುವಜನ ಉನ್ನತ. ಶಿಕ್ಷಣ ಪಡೆಯಲು ಆಗುತ್ತಿಲ್ಲ. ಆದರೆ ಇದಕ್ಕೆ ವಿರೋಧವೆಂಬಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶೇ.45 ರಿಂದ 85 ರಷ್ಟು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಶೇ 65.38 ರಷ್ಟಿದೆ.(ಮಹಿಳೆ 54.28%, ಪುರುಷ ಸಾಕ್ಷರತೆ 75.96%)ಪ್ರೊ. ಯಶಪಾಲ್ ಸಮಿತಿ ವರದಿ ಪ್ರಕಾರ ದೇಶದಲ್ಲಿ 1ನೇ ತರಗತಿಗೆ ದಾಖಲಾದ ಒಟ್ಟು ವಿದ್ಯಾರ್ಥಿಗಳಲ್ಲಿ 12 ನೇ ತರಗತಿ ವರೆಗೆ ಪ್ರವೇಶ ಪಡೆಯುತ್ತಿರುವವರು ಕೇವಲ ಶೇ.16.6 ರಷ್ಟು ಮಾತ್ರ. ಸರಕಾರದ ತಪ್ಪುನೀತಿಗಳಿಂದಾಗಿ ಬಡವರು, ದಲಿತರು, ಅಲ್ಪಸಂಖ್ಯಾತರು. ಹಿಂದುಳಿದ ವರ್ಗದವರು, ಮಹಿಳೆಯರು ಆದಿವಾಸಿಗಳು ಸಮಸ್ಯೆ ಅನುಭವಿಸುತ್ತಿದ್ದಾರೆ. ದಲಿತರ ಸಾಕ್ಷರತೆಯ ಪ್ರಮಾಣ 52.2%, ಮುಸ್ಲಿಂ ಅಲ್ಪಸಂಖ್ಯಾತರ ಸಾಕ್ಷರತೆಯ ಪ್ರಮಾಣ 59.1%, ಹಾಗೂ ಓಬಿಸಿ 65% ನಷ್ಟು ಮಾತ್ರ ಇದೆ.

ನವ ಉದಾರೀಕರಣದ ನೀತಿಗಳು.

ನವ ಉದಾರೀಕರಣ ನೀತಿಗಳ ಪರಿಣಾಮ ಶಿಕ್ಷಣ. ಕ್ಷೇತ್ರ ಇನ್ನಷ್ಟು ವೇಗವಾಗಿ ವ್ಯಾಪಾರೀಕರಣಗೊಳ್ಳುತ್ತಿದೆ. ಕೇಂದ್ರದ ಯುಪಿಎ–2 ಸರಕಾರ ಶಿಕ್ಷಣ ಕೇತ್ರದ ಮೇಲೆ ಹೊಸ ದಾಳಿಗಳನ್ನು ಹೇರುತ್ತಿದೆ. ಈಗ ಎರಡು ರೀತಿಯ ದಾಳಿಗಳು ಶಿಕ್ಷಣದ ವ್ಯಾಪಾರೀಕರಣ ಮತ್ತು ಕೇಂದ್ರೀಕರಣವನ್ನು ತೀವ್ರಗೊಳಿಸುತ್ತಿವೆ. ದೇಶದ ಶಿಕ್ಷಣ ವ್ಯವಸ್ಥೆಯನ್ನು ಬುಡ ಮೇಲು ಮಾಡಿ ಹೆಚ್ಚೆಚ್ಚು ವ್ಯಾಪಾರೀಕರಣಕ್ಕೆ ಅವಕಾಶ ನೀಡಿ ವಿದೇಶಿ ಶಿಕ್ಷಣ ಸಂಸ್ಥೆಗಳಿಗೆ ದೇಶದ ಶಿಕ್ಷಣವನ್ನು ಒತ್ತೆಯಿಡುವ ಕೆಲಸ ನಡೆಯುತ್ತಿದೆ.ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡಿ ಮಾರುಕಟ್ಟೆ ಆಧಾರಿತ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸುವ ಅಪಾಯಕಾರಿ ನೀತಿಗಳನ್ನು ರೂಪಿಸಲು ಸರಕಾರ ಮುಂದಾಗಿದೆ. ಅತ್ಯಂತ ಅಪಾಯಕಾರಿ ಅಂಶಗಳಿರುವ **ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಮಸೂದೆ 2012** ನ್ನು ಪಾರ್ಲಿಮೆಂಟ್‌ನಲ್ಲಿ ಅಂಗೀಕರಿಸಲು ತುದಿಗಾಲಿನ ಮೇಲೆ ನಿಂತಿವೆ. ಒಂದು ವೇಳೆ ಈ ಕಾಯ್ದೆ ಜಾರಿಗೊಂಡರೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಗೊಂಡ ಪಾರ್ಲಿಮೆಂಟ್ ಹಾಗೂ ಶಾಸನ ಸಭೆಗಳು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದೇ ತೀರ್ಮಾನಗಳನ್ನು ಕೈಗೊಳ್ಳುವ ಹಕ್ಕನ್ನು ಕಳೆದು ಕೊಳ್ಳುತ್ತದೆ. ಹಾಗೂ ಅಂತಹ ಎಲ್ಲಾ ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರವನ್ನು ಏಳು ಜನರ ಸಮಿತಿಗೆ ನೀಡಲಾಗುತ್ತದೆ. ಅದೇ ರೀತಿಯಲ್ಲಿ ಏಕರೂಪ ಪಠ್ಯಕ್ರಮವನ್ನು ರೂಪಿಸುವ ಹೆಸರಿನಲ್ಲಿ ಶಾಲಾ ಶಿಕ್ಷಣವನ್ನು ದುರ್ಬಲಗೊಳಿಸುವ ಹುನ್ನಾರಗಳು ನಡೆಯುತ್ತಿವೆ.

ಈ ಎಲ್ಲಾ ಬೆಳವಣಿಗೆಗಳು ದೇಶದ ಶಿಕ್ಷಣ ಕ್ಷೇತ್ರದ ಸುಧಾರಣೆ ಹೆಸರಿನಲ್ಲಿ ನಡೆಯುತ್ತಿವೆ. ಸಮರ್ಪಕ ಮತ್ತು ಸಮರ್ಥ ಶಿಕ್ಷಣ ವ್ಯವಸ್ಥೆಗಾಗಿ ಈ ಎಲ್ಲಾ ಬದಲಾವಣೆಗಳನ್ನು ಮಾಡಲಾಗುತ್ತಿದೆ ಎಂದು ಸರಕಾರ ಸುಳ್ಳು ಪ್ರಚಾರ ನಡೆಸುತ್ತಿದೆ. ಕೇಂದ್ರ ಸರಕಾರ ಶಿಕ್ಷಣ ಕ್ಷೇತ್ರಕ್ಕೆ ಅನುದಾನ ಹೆಚ್ಚಿಸುವ ಬದಲಾಗಿ ರಾಜ್ಯ ಸರಕಾರಗಳ ಅಧಿಕಾರವನ್ನು ಕಿತ್ತುಕೊಂಡು ಎಲ್ಲಾ ಅಧಿಕಾರಗಳನ್ನು ತನ್ನಲ್ಲಿಯೇ ಇಟ್ಟುಕೊಳ್ಳಲು ಹವಣಿಸುತ್ತಿದೆ.

ವಿಶೇಷವಾಗಿ ಹಲವು ವೈವಿಧ್ಯತೆಗಳಿರುವ ನಮ್ಮಂತಹ ದೇಶದಲ್ಲಿ ಶಿಕ್ಷಣ ಏಕರೂಪದಲ್ಲಿರಬಾರದು. ಬದಲಾಗಿ ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ರಾಜ್ಯ ರಾಜ್ಯಗಳ ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸುವ ಸಹಭಾಗಿತ್ವ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿರಬೇಕು. ದೇಶದ ಈಶಾನ್ಯ ರಾಜ್ಯಗಳ ಕುಗ್ರಾಮದಲ್ಲಿರುವ ಹಾಗೂ ದೊಡ್ಡ ದೊಡ್ಡ ನಗರ ಪ್ರದೇಶಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮತ್ತು ಅವರುಗಳಿಗೆ ಗುಣಮಟ್ಟದ ಶಿಕ್ಷಣ ಸಿಗುವ ನಿಟ್ಟಿನಲ್ಲಿ ನೀತಿಗಳು ರೂಪುಗೊಳ್ಳಬೇಕೆಂಬುದು ದೆಹಲಿಯಲ್ಲಿ ಕುಳಿತು ತೀರ್ಮಾನ ಕೈಗೊಳ್ಳುವವರಿಗೆ ಅರ್ಥೈಸಬೇಕಿದೆ.

ಮಾರುಕಟ್ಟೆಯ ಸರಕಾಗುತ್ತಿರುವ ಶಿಕ್ಷಣ

ಶಿಕ್ಷಣದಲ್ಲಿ ಪ್ರಗತಿಪರ ಅಂಶಗಳನ್ನು ಕಡೆಗಣಿಸಿ ಮಾರುಕಟ್ಟೆಯ ಅವಶ್ಯಕತೆಗಳನ್ನು ಪೂರೈಸುವ ಶಿಕ್ಷಣ ಪದ್ದತಿಯನ್ನು ಮಾತ್ರ ಜಾರಿಗೊಳಿಸುವಂತೆ ಮಾರುಕಟ್ಟೆ ಶಕ್ತಿಗಳು ಪ್ರಯತ್ನಿಸುತ್ತಿವೆ. ಪ್ರೌಢ ಶಿಕ್ಷಣದಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಗೆ ಪ್ರತ್ಯೇಕವಾಗಿ ಒಂದೇ ರೀತಿಯ ಪಠ್ಯಕ್ರಮ ಜಾರಿಗೊಳಿಸುಂತೆ ಎಲ್ಲಾ ರಾಜ್ಯಗಳಿಗೆ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ(HRD) ಸಚಿವಾಲಯ ತಿಳಿಸಿದೆ. ಯಾಕೆಂದರೆ ಮಾರುಕಟ್ಟೆ ಅವಶ್ಯಕತೆಗಳನ್ನು ಪೂರೈಸಲು ಈ ಕೋರ್ಸ್‌ಗಳು ನೇರ ಸಂಬಂಧ ಹೊಂದಿವೆ. ಭಾರತದ ಆಳುವ ವರ್ಗಗಳಿಗೆ ತಾವು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚು ಲಾಭ ಗಳಿಸಲು ನೈಪುಣ್ಯತೆ ಹೊಂದಿರುವ ಕಾರ್ಮಿಕರು ಬೇಕಿರುವುದರಿಂದ ಈ ಕೋರ್ಸುಗಳಿಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಸಮಾಜ ವಿಜ್ಞಾನ, ಕಲೆ, ಇತಿಹಾಸ ವಿಭಾಗಗಳನ್ನು ಕಡೆಗಣಿಸಲಾಗುತ್ತಿದೆ. ಅಲ್ಲದೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ನಮ್ಮ ಸಮಾಜದ ಬದಲಾವಣೆಗೆ ಹಾಗೂ ಉನ್ನತೀಕರಣಕ್ಕೆ ಪೂರಕವಾಗಿ ರೂಪಿಸುವ ಪ್ರಯತ್ನಗಳಿಗೆ ಸಾಮ್ರಾಜ್ಯಶಾಹಿ ಶಕ್ತಿಗಳು ಅಡ್ಡಿಯಾಗಿವೆ. ನಮ್ಮ ದೇಶದ ಒಟ್ಟು ಶಿಕ್ಷಣ ವ್ಯವಸ್ಥೆಯ ಮೇಲೆ ಕೇಂದ್ರೀಕೃತ ಧಾಳಿ ನಡೆಯುತ್ತಿದೆ.

ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕೆಂಬ ಶಿಕ್ಷಣ ತಜ್ಞರ ಶಿಫಾರಸ್ಸುಗಳಿಗೆ ವಿರುದ್ಧವಾಗಿ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಶಿಕ್ಷಣದ ವ್ಯಾಪಾರೀಕರಣ–ಕೇಂದ್ರೀಕರಣ ನೀತಿಗಳನ್ನು ಹಾಗೂ ಎಲ್ಲಾ ರೀತಿಯ ಧಾಳಿಗಳನ್ನು ಹಿಮ್ಮೆಟ್ಟಿಸಬೇಕಿದೆ. ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಮಸೂದೆ 2012 ಹಾಗೂ ಶೈಕ್ಷಣಿಕ ನೀತಿ ನಿರೂಪಣಾ ಸಂಸ್ಥೆಗಳಾದ ಎ.ಐ.ಸಿ.ಟಿ.ಇ ಮತ್ತು ಯು.ಜಿ.ಸಿ ಗಳನ್ನು ನಿರ್ವೀರ್ಯಗೊಳಿಸುವ ಎಲ್ಲಾ ರೀತಿಯ ಪ್ರಯತ್ನಗಳನ್ನು ಸೋಲಿಸಬೇಕಿದೆ. ಈ ಧಾಳಿಗಳನ್ನು ಹಿಮ್ಮೆಟ್ಟಿಸಲು ವಿದ್ಯಾರ್ಥಿ ಸಮುದಾಯ ಹಾಗೂ ಇತರೆ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ದೊಡ್ಡ ಸಂಖ್ಯೆಯಲ್ಲಿ ತುರ್ತಾಗಿ ಅಣಿನೆರೆಸಬೇಕಿದೆ.

ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ವಿದ್ಯಾರ್ಥಿ ಸಂಘಗಳ ಚುನಾವಣೆಗಳು

ನವ ಉದಾರವಾದಿ ಜಾಗತೀಕರಣ ನೀತಿಗಳು ಜಾರಿಯಾದ ನಂತರ ಜಗತ್ತಿನಾದ್ಯಂತ ಸಾಮಾನ್ಯ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ತೀವ್ರ ಧಾಳಿಗಳು ಪ್ರಾರಂಭವಾದವು. ವಿದ್ಯಾರ್ಥಿಗಳೂ ಇದರಿಂದ ಹೊರತಾಗಿಲ್ಲ. ವಿದ್ಯಾರ್ಥಿಗಳನ್ನು ಅರಾಜಕೀಯಗೊಳಿಸುವ ಹಾಗೂ ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡುವ ಎರಡು ರೀತಿಯ ಧಾಳಿಗಳು ನಡೆಯುತ್ತಿವೆ. ವಿದ್ಯಾರ್ಥಿ ಸಂಘಗಳು ಇಂತಹ ದೊಡ್ಡ ಧಾಳಿಗಳನ್ನು ಎದುರಿಸುತ್ತಿವೆ. ಭಾರತದ ಕೇಂದ್ರೀಯ ವಿಶ್ವವಿದ್ಯಾಯಗಳೂ ಸೇರಿದಂತೆ ಬಹುತೇಕ ಶಿಕ್ಷಣ ಸಂಸ್ಥೆಗಳಲ್ಲಿ ಚುನಾಯಿತ ವಿದ್ಯಾರ್ಥಿ ಸಂಘಗಳಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಓದುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಇದಕ್ಕಿಂತ ಕೆಟ್ಟ ಪರಿಸ್ಥಿತಿ ಇದೆ.

ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಮತ್ತು ಅವುಗಳ ರಕ್ಷಣೆಗಾಗಿ ಎಸ್.ಎಫ್.ಐ ಮುಂಚೂಣಿಯಲ್ಲಿದೆ. ರಾಜಸ್ಥಾನದಲ್ಲಿ ಸತತ 5 ವರ್ಷಗಳಿಂದ ವಿದ್ಯಾರ್ಥಿ ಸಂಘಗಳ ಚುನಾವಣೆಗಾಗಿ ಎಸ್.ಎಫ್.ಐ ಹೋರಾಟ ನಡೆಸಿದ ಪರಿಣಾಮ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಎಸ್.ಎಫ್.ಐ ಅಭ್ಯರ್ಥಿಗಳಿಗೆ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಮತ ನೀಡಿದ್ದಾರೆ. ಕೋಮುವಾದಿ ಶಕ್ತಿಗಳ ಧಾಳಿಗಳನ್ನು ಎದುರಿಸಿ ಹಿಮಾಚಲ್ ಪ್ರದೇಶದಲ್ಲಿ ಎಸ್.ಎಫ್.ಐ ಜಯಭೇರಿ ಬಾರಿಸಿದೆ. ಕೇರಳ, ತ್ರಿಪುರ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ ಉತ್ತಮ ಜಯ ಗಳಿಸಿದೆ. ಮಹಾರಾಷ್ಟ್ರ, ಅಸ್ಸಾಂ, ಒರಿಸ್ಸಾ ರಾಜ್ಯಗಳ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಜಯಿಸಿದೆ.

ಪಶ್ಚಿಮಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ವಿದ್ಯಾರ್ಥಿ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಬರ್ಬರ ಧಾಳಿಗಳು ನಡೆಯುತ್ತಿವೆ. ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಯ ಕಾರ್ಯಕರ್ತರು ಹಾಗೂ ಬೆಂಬಲಿಗರ ಮೇಲೆ ದೈಹಿಕ ಹಲ್ಲೆಗಳನ್ನು ನಡೆಸಿ ಅವರು ಕಾಲೇಜಿಗಳಿಗೆ ಬರುವುದನ್ನು ಹಾಗೂ ಪರೀಕ್ಷೆಗಳನ್ನು ಬರೆಯುವುದನ್ನು ತಡೆಯಲಾಗಿದೆ. ಟಿ.ಎಂ.ಸಿ ಅಧಿಕಾರಕ್ಕೆ ಬಂದ ನಂತರ ಎಸ್.ಎಫ್.ಐ ನ 120 ಕಾರ್ಯಕರ್ತರ ಮೇಲೆ ಬರ್ಬರ ಹಲ್ಲೆ ನಡೆಸಲಾಗಿದೆ. ಶಿಕ್ಷಕರ ಮೇಲಿನ ಧಾಳಿಗಳು ನಿರಂತರವಾಗಿ ನಡೆಯುತ್ತಿವೆ. ಒಟ್ಟು 103 ಚುನಾಯಿತ ವಿದ್ಯಾರ್ಥಿ ಸಂಘಗಳ ಸ್ಥಾನಗಳನ್ನು ಬಲವಂತವಾಗಿ ಆಕ್ರಮಿಸಿಕೊಳ್ಳಲಾಗಿದೆ. 63 ಕಡೆ ನಡೆದ ಚುನಾವಣೆಗಳಲ್ಲಿ 53ರಲ್ಲಿ ಎಸ್.ಎಫ್.ಐ ಜಯಿಸಿದೆ. ರಾಜ್ಯದ ಆಡಳಿತ ಸಂಪೂರ್ಣವಾಗಿ ಇಂತಹ ಧಾಳಿಗಳನ್ನು

ಪುಟ 14ಕ್ಕೆ


ಅನಂತ ನಾಯ್ಕ
ಕಾರ್ಯದರ್ಶಿ ಮಂಡಳಿ ಸದಸ್ಯರು


ಹುಳ್ಳಿ ಉಮೇಶ್
ಕೇಂದ್ರ ಕಾರ್ಯಕಾರಿ ಸದಸ್ಯರು


ಗುರುರಾಜ್ ದೇಸಾಯಿ
ಕೇಂದ್ರ ಕಾರ್ಯಕಾರಿ ಸದಸ್ಯರು


ರೇಣುಕಾ
ಕೇಂದ್ರ ಕಾರ್ಯಕಾರಿ ಸದಸ್ಯರು


ಜಗದೀಶ್ ಸೂರ್ಯ
ಕೇಂದ್ರ ಕಾರ್ಯಕಾರಿ ಸದಸ್ಯರು



ಬೆಳಗಾವಿಯಲ್ಲಿ ಶಾಂತಿ ಸೌಹಾರ್ದ ಸಮಾವೇಶ

ಇತ್ತೀಚೆಗೆ ಬೆಳಗಾವಿ ನಗರದಲ್ಲಿ ಸಂಭವಿಸಿದ ಕೋಮು ಗಲಭೆಯ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಯ ಮುತುವರ್ಜಿಯಿಂದ ಸೆ. 16 ರಂದು ಒಂದು ಶಾಂತಿ ಸೌಹಾರ್ದ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಯಿತು. ಸಿಪಿಐನ ಹಿರಿಯ ಮುಖಂಡರಾದ ಕಾ. ಕೃಷ್ಣಾ ಮೆಣಸೆ ಸಮಾವೇಶದ ಅಧ್ಯಕ್ಷತೆವಹಿಸಿದ್ದರು. ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ. ಮಾರುತಿ ಮಾನ್ಪಡೆ " ಭಾರತದಲ್ಲಿ ಬಹುಭಾಷಾ ಮತ್ತು ಬಹು ಸಂಸ್ಕೃತಿಗಳ ಸಮ್ಮಿಲನವಿದೆ. ಆದರೆ ಬಂಡವಾಳಶಾಹಿ ಪಕ್ಷಗಳ ರಾಜಕಾರಣಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕೋಮು ಗಲಭೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ'' ಎಂದು ಟೀಕಿಸಿದರಲ್ಲದೆ ಜಾಗತಿಕ ಹಣಕಾಸು ಸಂಸ್ಥೆಗಳಾದ ವಿಶ್ವ ಬ್ಯಾಂಕ್, ಐಎಂಎಫ್, ಮತ್ತು ಡಬ್ಲ್ಯೂಟಿಓ ತಮ್ಮ ಹಿತಸಾಧನೆಗಾಗಿ ಜನಾಂಗೀಯ ದ್ವೇಷವನ್ನು ಹೆಚ್ಚಿಸುತ್ತಿವೆ. ಇದರ ಭಾಗವಾಗಿಯೇ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ದ್ವೇಷದ ಬೀಜವನ್ನು ಬಿತ್ತಲಾಯಿತು. ಇದನ್ನೇ ಚುನಾವಣಾ ಪ್ರಣಾಳಿಕೆ ಮಾಡಿಕೊಂಡು ಎರಡೂ ಧರ್ಮಿಯರ ನಡುವೆ ಭಯೋತ್ಪಾದನೆಯನ್ನು ಬೆಳಸಲಾಗುತ್ತಿದೆ. ಹೀಗಾಗಿ ದೇಶಪ್ರೇಮಿಗಳೆಲ್ಲರೂ ಒಗ್ಗಟ್ಟಾಗಿ ಹಿಂದು ಮತ್ತು ಮುಸ್ಲಿಂ ಭಯೋತ್ಪಾದನೆಯನ್ನು ತಡೆಗಟ್ಟಬೇಕು" ಎಂದರು.

ಸಿಪಿಐನ ಕಾಂ. ಆನಂದ ಮೆಣಸೆ ಮಾತನಾಡಿ ಹಿಂದೂ–ಮುಸ್ಲಿಂ ಭಯೋತ್ಪಾದನೆಯನ್ನು ಬೆಳೆಯಲು ಬಿಟ್ಟರೆ ಇಡೀ ದೇಶಕ್ಕೆ ಮಾರಕವಾಗಲಿದೆ. ಬೆಳಗಾವಿ ನಗರದ ಜನತೆ ಶಾಂತಿಪ್ರಿಯರಾಗಿದ್ದು ಕೆಲ ಸಮಾಜ ಘಾತಕ ಶಕ್ತಿಗಳು ಹಿಂದೂ ಮುಸ್ಲಿಂ ಹಬ್ಬಗಳ ಸಂದರ್ಭದಲ್ಲಿ ಕೋಮು ಗಲಭೆ ಸೃಷ್ಟಿಸಲು ಪ್ರಯತ್ನಿಸುತ್ತಿವೆ. ಆ ದುಷ್ಟ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ ಎಂದರು.

ಮುಸ್ಲಿಂ ಸಮಾಜದ ಧಾರ್ಮಿಕ ಮುಖಂಡರಾದ ಮುಕ್ತಿ ಅಬ್ದುಲ್ ಅಜೀಜ್ ಮಾತನಾಡಿ " ದೇಶದ ಸ್ವಾತಂತ್ರ್ಯಕ್ಕಾಗಿ ಹಿಂದು, ಮುಸ್ಲಿಂ ಸೇರಿದಂತೆ ಎಲ್ಲ ಧರ್ಮದವರೂ ಒಟ್ಟಾಗಿ ಹೋರಾಡಿ ಬ್ರಿಟೀಷ್‌ರನ್ನು ಹೊಡೆದೋಡಿಸಿದ್ದು ಇದೆ. ಅದೇ ರೀತಿ ಇಂದು ಸಮಾಜದಲ್ಲಿ ಶಾಂತಿ ಸಾಮರಸ್ಯವನ್ನು ಹಾಳು ಮಾಡುತ್ತಿರುವ ದುಷ್ಟ ಶಕ್ತಿಗಳನ್ನು ಮಟ್ಟಹಾಕಬೇಕಾಗಿದೆ. ನಿಜವಾದ ಮುಸ್ಲಿಂ ಧರ್ಮದ ಅನುಯಾಯಿ ಸಮಾಜದ ಶಾಂತಿ ಸೌಹಾರ್ದತೆಗೆ ಧಕ್ಕೆಯುಂಟುಮಾಡುವುದಿಲ್ಲ. ಅಂತಹ ಕೃತ್ಯಗಳಲ್ಲಿ ತೊಡಗಿರುವ ವ್ಯಕ್ತಿ ಮುಸಲ್ಮಾನನೇ ಅಲ್ಲ" ಎಂದರು. ಕ್ರೈಸ್ತಧರ್ಮ ಗುರು ರೆವರೆಂಡ್ ಪೀಟರ್ ಮಚಾದೊ ಭಾಗವಹಿಸಿ "ವಿವಿಧ ಧರ್ಮಗಳ ಅನುಯಾಯಿಗಳಾಗಿರುವ ನಾವೆಲ್ಲರೂ ಸಹೋದರರೇ ಆಗಿದ್ದು ಸಮಾಜದ ಶಾಂತಿಗಾಗಿ ಒಂದಾಗಿ ದುಡಿಯೋಣ" ಎಂದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ಎಸ್. ಪ್ರಸನ್ನಕುಮಾರ್ ಸಮಾವೇಶವನ್ನು ಉದ್ದೇಶಿಸಿ "ಇಂದು ದೇಶದಲ್ಲಿ ಕೋಟ್ಯಾಂತರ ವಿದ್ಯಾವಂತರು ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಲೆ ಏರಿಕೆ ನೀತಿಗಳಿಂದ ಜನಸಾಮಾನ್ಯರು ತತ್ತರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಜನರ ನೆರವಿಗೆ ಧಾವಿಸುವ ಬದಲಾಗಿ, ತಮ್ಮ ಓಟಿನ ಆಸೆಗಾಗಿ, ಜನರನ್ನು ಜಾತಿ–ದರ್ಮಗಳ ಆಧಾರದಲ್ಲಿ ವಿಭಜಿಸುತ್ತಾರೆ. ಇಂತಹ ಶಕ್ತಿಗಳನ್ನು ಪ್ರಗತಿಪರ ಶಕ್ತಿಗಳು ಒಂದಾಗಿ ಬಗ್ಗು ಬಡಿಯಬೇಕಾಗಿದೆ" ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಮುಖಂಡ ಕಾಂ. ವಿ.ಪಿ.ಕುಲಕರ್ಣಿ "ಭಾರತವು ಹಲವು ಸಂಸ್ಕೃತಿಗಳ ನಾಡು. ಈ ನಾಡಿನ ಸ್ವಾತಂತ್ರ್ಯಕ್ಕಾಗಿ ಹಿಂದುಗಳು, ಮುಸಲ್ಮಾನರು ಪ್ರಾಣಾರ್ಪಣೆ ಮಾಡಿ ಹತಾತ್ಮರಾಗಿದ್ದಾರೆ" ಎಂದರು. ಸಿಪಿಐನ ಕಾಂ. ನಾಗೇಶ್ ಸಾತೇರಿಯವರು ಸಹ ಮಾತನಾಡಿದರು. ಸ್ವಾತಂತ್ರ್ಯ ಹೋರಾಟಗಾರ ಸದಾಶಿವ ಭೋಸಲೆ ಅಲ್ಲದೆ ವಿಠಲ ರಾವ್ ಯಾಳಗಿ, ಜನಾರ್ಧನ, ಶೌಕತ್ ಆಲೂರ, ರಾಮ ಆಪ್ಟೆ ಅವರು ಕೋಮು ಸೌಹಾರ್ದತೆ ಕಾಪಾಡಲು ಮನವಿ ಮಾಡಿದರು. ಸಿಪಿಐ(ಎಂ) ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಎಲ್.ಎಸ್.ನಾಯಕ್, ಸಮಿತಿಯ ಸದಸ್ಯರಾದ ಗೈಬು ಜೈನೇಖಾನ್, ನಾಗಪ್ಪ ಸಂಗೊಳ್ಳಿ, ಎಸ್.ಬಿ.ಹಳ್ಳಿ, ಜಿ.ವಿ.ಕುಲಕರ್ಣಿ, ಅಂಗನವಾಡಿ ಮತ್ತು ಅಕ್ಷರ ದಾಸೋಹ ಕಾರ್ಯಕರ್ತೆಯರು, ಗ್ರಾಮ ಪಂಚಾಯತ್ ಮತ್ತು ಜೀವ ವಿಮಾ ನೌಕರರು, ಶಾಂತಿಪ್ರಿಯ ನಾಗರಿಕರು, ವಿದ್ಯಾರ್ಥಿ ಯುವಜನರು ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶದ ಕೊನೆಗೆ ಅನಸೂಯಾ ಶಿಂಗಾರಿ ರಚಿಸಿರುವ ಬೀದಿ ನಾಟಕದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಗಲಭೆ ಮತ್ತು ಅದರ ಹಿನ್ನೆಲೆ:


ಬೆಳಗಾವಿ ನಗರದ ಹೊರವಲಯದ ಪೀರನವಾಡಿಯಲ್ಲಿ ಎರಡು ವರ್ಷಗಳ ಹಿಂದೆ ಮುಸ್ಲಿಂ ಸಮಾಜ ಬಾಂಧವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಲ್ಲಿ ಮದರಸವೊಂದನ್ನು ಸ್ಥಾಪಿಸಲು ನಿರ್ಧರಿಸಿ ನೊಂದಣಿ ಮಾಡಿಸಿದ್ದರು. ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಲು ಸಾಧ್ಯವಾಗದೆ ಕಳೆದ ಕೆಲವು ತಿಂಗಳುಗಳಿಂದ ಬಿದಿರಿನ ಚಾಪೆಯಿಂದ ನಿರ್ಮಿಸಲಾದ ತಾತ್ಕಾಲಿಕ ಶೆಡ್‌ನಲ್ಲಿ ಮದರಸ ಕಾರ್ಯನಿರ್ವಹಿಸುತಿತ್ತು. ಆದರೆ ಪೀರನವಾಡಿಯ ಕೆಲವು ಜನ ಅಲ್ಲಿ ಮದರಸ ಆರಂಭಿಸುವುದನ್ನು ವಿರೋಧಿಸಿದ್ದರು. ಕಳೆದ ಅಗಸ್ಟ 24ರ ರಾತ್ರಿ ಕೆಲವು ಜನ ದುಷ್ಕರ್ಮಿಗಳು ಮದರಸ ಶೆಡ್ಡನ್ನು ಧ್ವಂಸಗೊಳಿಸಿದರು. ಮರುದಿನ ಬೆಳಿಗ್ಗೆ ಈ ವಿಷಯ ತಿಳಿದು ಬಂದಾಗ ಆ ಪ್ರದೇಶದಲ್ಲಿ ಪ್ರಕ್ಷುಬ್ದ ಪರಿಸ್ಥಿತಿ ಉಂಟಾಯಿತು. ಪೊಲೀಸರು ಕಾರ್ಯಪ್ರವರ್ತರಾಗಿ ಪರಿಸ್ಥಿತಿಯನ್ನು ನಿಯಂತ್ರಿಸಿದರು. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಫಿರೋಜ್ ಶೇಠ್ ಮದರಸ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ನೆರವು ನೀಡುವುದಾಗಿ ಭರವಸೆ ನೀಡಿ ಸಮಾಜ ಬಾಂಧವರಿಗೆ ಸಮಾಧಾನ ಹೇಳಿದ್ದಾರೆ.

ಅಗಸ್ಟ 25 ರಂದು ಬೆಳಗಾವಿ ತಾಲ್ಲೂಕಿನ ಪಂತಬಾಳೆಕುಂದ್ರಿ ಗ್ರಾಮದಲ್ಲಿ ಬಿಜೆಪಿ ಯುವ ಮೋರ್ಚಾದ 2 ದಿನಗಳ ರಾಜ್ಯ ಕಾರ್ಯಕಾರಣಿ ಸಭೆ ನಡೆದಿದೆ. ಪಕ್ಷದ ಯುವ ಮೋರ್ಚಾದ ಕಾರ್ಯಕರ್ತರಿಗೆ ಸಂಘ ಪರಿವಾರದ ಶಿಸ್ತು ಬದ್ಧತೆಯನ್ನು ಅಳವಡಿಸಿಕೊಳ್ಳಲು ಆರೆಸ್ಸೆಸ್ ನಾಯಕರು ಕರೆ ನೀಡಿದ್ದಾರೆ. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿಯೂ ರಾಜ್ಯದ ಆಡಳಿತ ಚುಕ್ಕಾಣಿಯನ್ನು ಹಿಡಿಯಲಿದೆ ಎಂದು ಹೇಳಿದ್ದಾರೆ. ಇದೇ ಸಭೆಯಲ್ಲಿ ಬಾಂಗ್ಲಾ ನುಸುಳುಕೋರರ ಬಗ್ಗೆಯೂ ರಾಷ್ಟ್ರೀಯ ನಾಯಕರು ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ.

ಅಗಸ್ಟ 26 ರ ಸಂಜೆ ನಗರದ ಮರಾಠಾ ಮಂದಿರದಲ್ಲಿ ಶಿವಾಜಿ ಜಯಂತಿ ಸ್ಥಬ್ದ ಚಿತ್ರ ಸ್ಪರ್ಧೆಯಲ್ಲಿ ವಿಜೇತರಾದ ಯುವಕ ಮಂಡಳಿಗಳಿಗೆ ಬಹುಮಾನ ವಿತರಣಾ ಸಮಾರಂಭ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಬಹುಮಾನ ಪಡೆದ ವಿಷ್ಣುಗಲ್ಲಿಯ ಯುವಕ ಮಂಡಳದ ಕಾರ್ಯಕರ್ತರು ಮೆರವಣಿಗೆಯ ಮೂಲಕ ಸಾಗುವಾಗ ಮಸೀದಿ ಎದುರು ಪಟಾಕಿ ಸಿಡಿಸಿ ಕೂಗಾಡಿದ್ದಾರೆ. ಆಗ ಕೆಲವು ಮುಸ್ಲಿಂ ಕೋಮಿನ ಯುವಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಎರಡೂ ಕೋಮಿನ ಯುವಕರ ನಡುವೆ ಮಾತಿನ ಚಕಮಕಿ ನಡೆಯುತ್ತಿದ್ದಾಗ, ಒಂದು ಕೋಮಿನ ಯುವಕರು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಪರಿಣಾಮವಾಗಿ ಆಶಿಫ್ ಮನಗಾಂವಕರ್ ಮೃತಪಟ್ಟಿದ್ದಾನೆ. ಇದಕ್ಕೆ ಪ್ರತಿಯಾಗಿ ಮನೆಗಳ ಮೇಲೆ, ವಾಹನಗಳ ಮೇಲೆ ಕಲ್ಲು ತೂರಾಟ ನಡೆದಿದೆ. ಅದೇ ದಿನ ಮಧ್ಯ ರಾತ್ರಿ ಕೊಲ್ಲಾಪುರ ಜಿಲ್ಲೆಯ ನಿವಾಸಿ ಚೇತನ್ ಪಾಟೀಲ್ ಎಂಬ ಯುವಕನನ್ನು ಇರಿದು ಕೊಲೆ ಮಾಡಲಾಗಿದೆ. ಆತ ರಾತ್ರಿ ಚಲನಚಿತ್ರ ವೀಕ್ಷಿಸಿ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದಾಗ ಆತನ ಮೇಲೆ ಹಲ್ಲೆ ನಡೆದಿದೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜಂಟಿ ನಿಯೋಗ ಜಿಲ್ಲಾಧಿಕಾರಿಗಳನ್ನು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಕಂಡು ನಗರದಲ್ಲಿ ಗಲಭೆಗೆ ಕಾರಣರಾದವರನ್ನು ಬಂಧಿಸಿ ಕಠಿಣ ಕ್ರಮ ಜರಗಿಸಬೇಕೆಂದೂ ಮತ್ತು ಗಲಭೆ ತಡೆಗಟ್ಟಲು ಆಡಳಿತ ಯಂತ್ರವನ್ನು ಬಿಗಿಗೊಳಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಸಲ್ಲಿಸಲಾಯಿತು. ನಗರದಲ್ಲಿ ಒಂದು ಶಾಂತಿ ಸೌಹಾರ್ದ ಸಮಾವೇಶವನ್ನು ಏರ್ಪಡಿಸುವುದೆಂದು ಸಹ ಎರಡೂ ಪಕ್ಷಗಳು ಜಂಟಿಯಾಗಿ ನಿರ್ಧರಿಸಿದವು. ಸಮಾವೇಶದ ಸಿದ್ಧತೆಗಾಗಿ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಜಂಟಿ ಸಭೆಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಯೋಧರು ಹಾಗೂ ಮಾಜಿ ಶಾಸಕರೂ ಆಗಿರುವ ಪರಶುರಾಮ ನಂದಿಹಳ್ಳಿ ಅವರು ಸಮಾವೇಶದ ಸಹಾಯಾರ್ಥ ರೂ. 2500/– ನೀಡಿ ಬೆಂಬಲ ವ್ಯಕ್ತಪಡಿಸಿದರು.

ಎಲ್.ಎಸ್.ನಾಯಕ್.



ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ

ಶಿಕ್ಷಣ–ರಸ್ತೆ–ರಾಜ್ಯ

ಶೆಟ್ಟರ್ ದರ್ಬಾರಿನಲ್ಲಿ ತಿಪ್ಪೆ ಗುಂಡಿಗಳೇ ಗುಂಡಿಗಳು!

ಕರ್ನಾಟಕ ರಾಜ್ಯಕ್ಕೆ ಮೂರನೇ ಮುಖ್ಯಮಂತ್ರಿ ಬಂದಾದ ಮೇಲಾದರೂ ಕೊಂಚ ಜನಪರವಾದ ಕೆಲಸಗಳು ನಡೆಯುತ್ತವೆ ಅಂತ ಜನ ನಿರೀಕ್ಷಿಸಿ ಕಾಯುತ್ತಿದ್ದರೆ ಈ 'ಬಿಜೆಪಿ ದರ್ಬಾರ್' ಯಾವ ರೀತಿಯಲ್ಲೂ ಜನಪರವಾಗಿ ಕೆಲಸ ಮಾಡುವುದು ಸಾಧ್ಯವೇ ಇಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ಏಕೆಂದರೆ ಈ ಆಳುವ ಜನರಿಗೆ ಜನರ ಹಿತಾಸಕ್ತಿಯ ಪ್ರಶ್ನೆ ಎಂದಿಗೂ ಆದ್ಯತೆ ವಿಷಯವಾಗಿ ಕಾಡಿಯೇ ಇಲ್ಲ. ಮುಂದೆಯೂ ಜನರ ಬದುಕಿನ ಸಂಕಟಗಳ ಪರಿಹಾರ ಈ ಸರ್ಕಾರದ ಆದ್ಯತೆಯಾಗುವುದು ಸಾಧ್ಯವಿಲ್ಲ. ಯಾಕೆಂದು ನೀವೇ ನೋಡಿ.

ಮುಖ್ಯಮಂತ್ರಿಯನ್ನು ನಾನೇ ಅಲ್ಲಿ ಕೂರಿಸಿದ್ದು ಅಂತ ಆಗಾಗ ಗುಟುರು ಹಾಕುತ್ತಿರುವ ಬಿ.ಎಸ್. ಯಡಿಯೂರಪ್ಪ ಪಕ್ಷದ ರಾಜ್ಯಾಧ್ಯಕ್ಷ ಹುದ್ದೆ ಮೇಲೆ ಕಣ್ಣಿಟ್ಟು ಹೊಸ ವರಾತ ಶುರು ಮಾಡಿಕೊಂಡಿದ್ದಾರೆ. ಈ ಒತ್ತಡಕ್ಕೆ ಮಣಿಯಲಾರೆವು ಅಂತ ತೋರಿಸುವ ಸಲುವಾಗಿ ಯಡಿಯೂರಪ್ಪ ಆಪ್ತರಿಬ್ಬರ ವಿಕೆಟ್ ಬೀಳಿಸಲಾಗಿದೆ. ಕುರ್ಚಿ ಕಾದಾಟ ಕುರ್ಚಿ ಕದನ ಯಾವ ಘಟ್ಟ ಮುಟ್ಟುತ್ತದೋ ನೋಡಬೇಕಾಗಿದೆ. ಅದಕ್ಕಿಂತ ಮುಖ್ಯವಾಗಿ ರಾಜ್ಯದಲ್ಲಿ ಆಡಳಿತ ಎನ್ನುವುದು ಏನಾಗಿದೆ ಎಂಬ ಕಡೆ ನೋಡಿದರೆ ತಲೆ ತಿರುಗುತ್ತದೆ.

ಭ್ರಷ್ಟ ಅಧಿಕಾರಿಗಳು ಲಜ್ಜೆಯಿಲ್ಲದೇ ಜನರನ್ನು ಸುಲಿಯುತ್ತಿದ್ದಾರೆ. ಪ್ರಕರಣವೊಂದರ ಸಂಬಂಧ ಎರಡು ಲಕ್ಷ ರೂ. ಪಡೆದುಕೊಳ್ಳುವಾಗ ಬೆಂಗಳೂರಿನ ರಾಜರಾಜೇಶ್ವರಿ ನಗರದ ಪೋಲಿಸ್ ಇನ್ಸ್‌ಪೆಕ್ಟರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಕಂದಾಯ ಇಲಾಖೆ ಪೋಡಿ ಮಾಡುವುದರಿಂದ ಹಿಡಿದು ಯಾವ ಕೆಲಸವೂ ಲಂಚವಿಲ್ಲದೇ ನಡೆಯುವುದಿಲ್ಲ ಎಂಬ ಪರಿಸ್ಥಿತಿ ಇದೆ ಅಂತ ಜನರು ದೂರುತ್ತಿದ್ದಾರೆ. ರಾಜ್ಯದಲ್ಲಿ ಉದ್ಯೋಗ ಖಾತ್ರಿ ಸರಿಯಾಗಿ ಜಾರಿಯಾಗುತ್ತಿಲ್ಲ ಎಂದು ಎಷ್ಟೆಲ್ಲಾ ಬೊಬ್ಬೆ ಗದ್ದಲ ನಡೆದರೂ ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯೂ ಇಲ್ಲ. ಹೈದರಾಬಾದ್ ಕರ್ನಾಟಕದ ಜನ ಉದ್ಯೋಗ ಹುಡುಕುತ್ತಾ ಮಲೆನಾಡಿಗೂ ಹೊರ ರಾಜ್ಯಗಳಿಗೂ ಗುಳೇ ಹೋಗುವುದು ನಿಂತಿಲ್ಲ.

ಇನ್ನು ರಾಜ್ಯದ ಶಿಕ್ಷಣ ರಂಗದಲ್ಲಿ ಏನು ನಡೆದಿದೆ ಎಂದು ನೋಡುವ ಭಾಗ್ಯ ಮತ್ತು ಬೆಂಗಳೂರು ನಗರದ ರಸ್ತೆಗಳು, ಜನರು ಬದುಕುವ ಬಡಾವಣೆಗಳು ಏನಾಗಿವೆ ಎಂದು ನೋಡುವುದಕ್ಕೂ ಎರಡು ಕಣ್ಣು ಸಾಲದು. ಒಂದು ಮೂಗಂತೂ ಖಂಡಿತ ಸಾಲದು. ಮತ್ತು ಈ ಎಲ್ಲವೂ ಬಿಜೆಪಿ ದರ್ಬಾರ್ ಎಂಬುದರಲ್ಲಂತೂ ಅನುಮಾನವೇ ಇಲ್ಲ.

★

ಕಸದ ಕುಪ್ಪೆಯೂ ವಿಷದ ತಿಪ್ಪೆಯೂ

ಅಲ್ಲಿ ಕೊಪ್ಪಳದಲ್ಲಿ ಕುವೆಂಪು ಮುಕ್ತ ವಿಶ್ವ ವಿದ್ಯಾಲಯದ ದೂರ ಶಿಕ್ಷಣ ಕೇಂದ್ರವೊಂದರಲ್ಲಿ ಸಾಮೂಹಿಕ ನಕಲಿಗೆ ಮುಕ್ತ ಅವಕಾಶವಂತೆ. ಕಾಪಿ ಹೊಡೆಯುವುದೇನು ಬಂತು ಏಳೆಂಟು ಸಾವಿರ ರೂಪಾಯಿ 'ಶುಲ್ಕ' ಕೊಟ್ಟು ಬಿಟ್ಟರೆ ನಿಮಗೆ ಪದವಿ ತರಗತಿಯ 'ಉತ್ತಮ ಅಂಕಪಟ್ಟಿ'ಯೇ ದೊರಕುವುದಂತೆ. ಇತ್ತ ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿನ ಕುಲಪತಿ ಮತ್ತು ಕುಲ ಸಚಿವರ ಬೀದಿ ಕಚ್ಚಾಟಕ್ಕೆ ಕೊನೆ ಯಾವಾಗ ಬೀಳುತ್ತದೋ ಎಂದು ಶಿಕ್ಷಣ ಪ್ರೇಮಿಗಳು ಕಾಯುತ್ತಿದ್ದರೆ ಅತ್ತ ತುಮಕೂರು ವಿ.ವಿ. ಕಡೆಯಿಂದ ಸುದ್ದಿ- ಇತ್ತೀಚೆಗೆ ತುಮಕೂರು ವಿಶ್ವ ವಿದ್ಯಾಲಯ ಕೇಂದ್ರದಲ್ಲಿ ಡಿ.ವಿ.ಜಿ.ಯವರ ಪುತ್ಥಳಿ ಅನಾವರಣ ಏರ್ಪಡಿಸಿ ಸಮಾರಂಭಕ್ಕೆ ಒಬ್ಬ 'ಹಿರಿಯ ಸಂಸ್ಕೃತಿ ಚಿಂತಕ'ರನ್ನು ಅಥಿತಿಗಳಾಗಿ ಕರೆಸಲಾಯಿತಂತೆ. ಮಹಾನ್ ಸಂಸ್ಕೃತಿ ಚಿಂತಕರು ಯಾರಪ್ಪ ಅಂದರೆ ! ಅವರೇ 'ಕೇಶವ ಕೃಪ' ಎಂಬ ಗರಡಿ ಮನೆಯ ಮೈ.ಚ. ಮಹದೇವ. ಭಾರತೀಯ ಸಂಸ್ಕೃತಿಗೆ ಬಂದಿರುವ ಅಪಾಯದ ಬಗೆಗೆ ಭಾಷಣ ಕುಟ್ಟೇ ಕುಟ್ಟಿದರಂತೆ ಅವರು. ಇಂತದ್ದೆಲ್ಲ ಘನ ಕಾರ್ಯಗಳು ಈ ತುಮಕೂರು ವಿ.ವಿ.ಯೊಳಗೆ ನಡೆಯುತ್ತಿದ್ದರೆ ಮತ್ತೊಂದೆಡೆ ವಿಶ್ವ ವಿದ್ಯಾಲಯವು ಜೋಪಾನವಾಗಿ ಕಾಪಾಡಬೇಕಾಗಿದ್ದ, ವಿಲೇವಾರಿ ಮಾಡಬೇಕಾಗಿದ್ದ ಪಿಎಚ್‌ಡಿ ಅಭ್ಯರ್ಥಿಗಳ ಅರ್ಜಿಗಳು ಹೊರಗೆ ಕಸದ ತೊಟ್ಟಿಯಲ್ಲಿ ಚೆಲ್ಲಾಡುತ್ತಿವೆಯಂತೆ. ಪಾಪ ವಿ.ವಿ.ಯವರು ಯಾವ ಯಾವ ಕೆಲಸ ತಾನೇ ಮಾಡಿಯಾರು. ಎಷ್ಟೊಂದು ಪ್ರತಿಮೆ ಸ್ಥಾಪಿಸಿ, ಸ್ಥಾಪಿಸಿ ಸುಸ್ತಾಗಿದೆ. ಮದನ ಮೋಹನ ಮಾಳವೀಯ, ವಿ.ಎಸ್. ಆಚಾರ್ಯ, ವಿಶ್ವೇಶ್ವರಯ್ಯ, ಎಂ.ಎಸ್. ಸುಬ್ಬ ಲಕ್ಷ್ಮಿ, ಡಿ.ವಿ.ಜಿ., ಕುಮಾರ ವ್ಯಾಸ ...ಮುಂತಾದವರ ಪ್ರತಿಮೆಗಳು ಈಗಾಗಲೇ ತಲೆ ಎತ್ತಿವೆ.(ಪ್ರತಿಮೆಗಳೆಲ್ಲವೂ ಒಂದೇ ಜಾತಿ ಹಿನ್ನೆಲೆಯ ಸಾಧಕರವು ಅಂತ ಕೆಲವರು ಹುಯಿಲೆಬ್ಬಿಸಿದ್ದು ಅದರ ಸತ್ಯಾಸತ್ಯತೆ.. ಮತ್ತು ಅದು ಯಾಕೆ ಹಾಗಾಗಿದೆ ಅಂತ ಕೂಡ ಪರಿಶೀಲಿಸಬೇಕಾಗಿದೆ.)

ಇರಲಿ ಇತ್ತ ಬೆಂಗಳೂರಿನ ಯುವಿಸಿಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಿಮ ಬಿ.ಇ.ತರಗತಿಗೆ ಸದ್ದೇ ಇಲ್ಲದೇ ಎರಡನೇ ಬಾರಿ ಪರೀಕ್ಷೆ ನಡೆದಿದೆಯಂತೆ. ಈ ಮರು ಪರೀಕ್ಷೆಗಳ ಭರಾಟೆಯಲ್ಲಿ ವಿದ್ಯಾರ್ಥಿಯೊಬ್ಬನ ಅಂಕಪಟ್ಟಿ 'ತಿದ್ದುಪಡಿ'ಯಾಗಿ ನೆಟ್ಟಗಾಗಿ ಹೋಗಿದೆಯಂತೆ. ಆಹಾ ! ಪವಾಡವೇ !! ಅತ್ತ ಕಡೆ ಕೊಪ್ಪಳದಲ್ಲಿ ಬಿಜೆಪಿ ಶಾಸಕರಾದ ಸಂಗಣ್ಣ ಕರಡಿಯವರೇ ಕಾಲೇಜುಗಳ ಅತಿಥಿ ಉಪನ್ಯಾಸಕರ ಪರವಾಗಿ ಬಿಜೆಪಿ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಹಸಿರು ಬಾವುಟ ತೋರಿಸಿಕೊಂಡು ನಿಂತಿದ್ದಾರಂತೆ. ಇಷ್ಟೆಲ್ಲಾ ಆಗುತ್ತಿರುವಾಗ ನಮ್ಮ ರಾಜ್ಯದ ಶಿಕ್ಷಣ ಸಚಿವರು ಏನು ಮಾಡುತ್ತಿದ್ದಾರೆ.

ಉನ್ನತ ಶಿಕ್ಷಣ ಸಚಿವರಾದ ಸಿ.ಟಿ. ರವಿಯವರು ಊರೂರು ತಿರುಗುತ್ತ " ಪ್ರಾಚೀನ ಭಾರತದಲ್ಲಿ ವಿಜ್ಞಾನ ತಂತ್ರಜ್ಞಾನ ಭಾರಿ ಮುಂದುವರಿದಿತ್ತು. ಆ ಕಾಲದಲ್ಲೇ ನಮ್ಮವರು ಮಿಸೈಲ್ ತಂತ್ರಜ್ಞಾನ ಬಲ್ಲವರಾಗಿದ್ದರು. ಬೇಟೆಯ ಪ್ರಾಣಿ ಕಾಣದಿದ್ದರೂ ಅದರ ಶಬ್ದವನ್ನು ಗ್ರಹಿಸಿಯೇ ಅದಕ್ಕೆ ಬಾಣ ಬಿಡುವ ಕಲೆ ನಮಗೆ ಗೊತ್ತಿತ್ತು. ಇದನ್ನು ನೋಡಿಕೊಂಡೇ ಈಗ ಯೂರೋಪ್‌ನವರು ಆಧುನಿಕ ಮಿಸೈಲ್ ರೂಪಿಸಿದ್ದಾರೆ ಅಂತ ವಿದ್ಯಾರ್ಥಿಗಳ ಕಿವಿಯಲ್ಲಿ ಸೀಟಿ ಊದಿದರಂತೆ.

ಭೂಮಿ ಗುಂಡಗಿದೆ ಎಂಬುದು ನಮ್ಮವರಿಗೆ ಗೊತ್ತಿತ್ತು. ಪುರಾಣಗಳಲ್ಲಿ ಈ ಬಗೆಗೆ ಪ್ರಸ್ತಾಪವಿದೆ. ಅಂತೆಲ್ಲಾ 'ಸ್ಕಡ್' ಹಾರಿಸಿದರಂತೆ ರವಿಯವರು. ಆಹಾ ! ಏನು ಜ್ಞಾನ !! ಏನು ಆಧ್ಯಯನ. !! ಎರಡು ಚಕ್ರದ ಬೈಸಿಕಲ್ ಎಂಬುದನ್ನು ಭಾರತದಲ್ಲಿಯೇ ಕಂಡು ಹಿಡಿಯಲಾಯಿತೋ ? ಅಥವಾ ಯುರೋಪ್‌ನಿಂದ ಬಂತೋ ಅಂತ ತಮ್ಮ ಅಧ್ಯಯನ ವ್ಯಾಪ್ತಿಗೆ ಸೇರಿಸಿಕೊಳ್ಳಿ ಅಂತ ಯಾರಾದರೂ ಸಚಿವರಿಗೆ ಸಲಹೆ ಕೊಡಬೇಕು, ಸಲಹೆ ಕೇಳಿಕೊಳ್ಳುವ ತಾಳ್ಮೆ ಅವರಿಗೇನಾದರೂ ಇದ್ದರೆ.



ಇನ್ನು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಬಗೆಗೆ ಹೇಳುವುದೇ ಬೇಡ. ಬೆಂಗಳೂರಿನಿಂದ ಬೀದರ್‌ವರೆಗೆ ಹಾಡುಹಗಲೇ ರಾಜಕಾರಣಿಗಳ ಕೊಲೆಗಳು, ರೌಡಿ ಗುಂಪುಗಳ ಬಡಿದಾಟ ಹತ್ಯೆಗಳು...ದರೋಡೆ ಕಳ್ಳತನಗಳು ಎಗ್ಗಿಲ್ಲದೇ ಸಾಗಿವೆ.

ರಾಜ್ಯದ ಜನರ ಬದುಕಿನಲ್ಲಿ ಏನೇನೋ ಆಗುತ್ತಿರುವಾಗ ಶಿವಮೊಗ್ಗದಲ್ಲಿ ಸಂಘ ಪರಿವಾರದ ಮುಖಂಡರು ಬಿಜೆಪಿ ಮುಖಂಡರು ಸೇರಿ ಏನೋ ಗುಸು ಗುಸು ಪಿಸು ಪಿಸು ಮಾಡುತ್ತಾರೆ. ಅದೇನೆಂದು ಕುತೂಹಲಕ್ಕೆ ಮಾಧ್ಯಮದವರು ಕೇಳಿದರೆ ರಾಜ್ಯದ ಉಪ ಮುಖ್ಯಮಂತ್ರಿಯಾದ ಸನ್ಮಾನ್ಯ ಈಶ್ವರಪ್ಪನವರು ಮಾಧ್ಯಮದವರ ಮೇಲೆ ಬಿದ್ದು ಚೇಳು ಕುಟುಕಿದಂತೆ ಅವರನ್ನು ಕುಟುಕಿದರಂತೆ. ಸದ್ಯ ಪತ್ರಕರ್ತರ ನಾಲಿಗೆ ಕತ್ತರಿಸಿ ಮೂಗು ಕತ್ತರಿಸಿ ಅಂತ ಯಾರಿಗೂ ಆದೇಶ ನೀಡಿಲ್ಲ. ಪುಣ್ಯ.

ಸಭೆಯಲ್ಲಿ ಈಶ್ವರಪ್ಪ, ಸಿ.ಟಿ.ರವಿ. ಜೀವರಾಜ್, ಆಯನೂರು ಮಂಜುನಾಥ, ಮುಂತಾದವರಲ್ಲದೇ ಸಂಘ ಪರಿವಾರದ ಪಟ್ಟಾಭೀರಾಮ್, ಕುಜಂಪಾಡಿ ಸುಬ್ರಮಣ್ಯ, ಗಿರೀಶ ಕಾರಂತ್, ಸಚ್ಚಿದಾನಂದ ಮುಂತಾದವರೆಲ್ಲ ಇದ್ದರಂತೆ.

ಈ ಬಿಜೆಪಿ ಸರ್ಕಾರವನ್ನು ನಡೆಸುವವರು ಯಾರು ? ಈ ಸಚಿವರು, ಶಾಸಕರುಗಳನ್ನು ಹೀಗೆ ಸಂಘ ಪರಿವಾರದ ಜನ ನಾಲ್ಕು ಗೋಡೆಗಳ ಒಳಗೆ ಕೂಡಿ ಹಾಕಿಕೊಂಡು ತಲೆಗೆ ಏನು ತಿಕ್ಕುತ್ತಾರೆಂಬುದರ ಅರಿವು ನಾಡಿನ ಪ್ರಜ್ಞಾವಂತರಿಗೆ ಇದೆ.

★

ಬಿಬಿಎಂಪಿಯ ದಂಡದ ಬೆದರಿಕೆಯೂ ಬೆಂಗಳೂರಿಗರ ದುರ್ಭರ ಬದುಕು

ಬೆಂಗಳೂರು ನಗರದ ಜನ ಜೀವನ ಬಿಬಿಎಂಪಿ ಕಡೆಯಿಂದ ಇಲ್ಲಿನ ನಾಗರೀಕ ಸೌಲಭ್ಯಗಳ ನಿರ್ವಹಣೆಯ ಪ್ರಶ್ನೆಯ ಕುರಿತು ಹೇಳುವುದೇ ಬೇಡ. ಬೆಂಗಳೂರಿನಲ್ಲಿ ಬೀದಿ ಬೀದಿಗಳಲ್ಲಿ ರಾಶಿ ರಾಶಿ ಬಿದ್ದಿರುವ ಕಸಕ್ಕೆ ಬಿಬಿಎಂಪಿಗೆ ಮುಕ್ತಿ ತೋರಿಸುವ ಸಮರ್ಥ್ಯವಿರಲಿ ಬೆಂಗಳೂರಿನ ರಸ್ತೆ ಬೀದಿಗಳಲ್ಲಿ ಯಾವ ಅಗಾಧ ಪ್ರಮಾಣದ ಕಸ ರಾಶಿ ಬಿದ್ದಿದೆ ಎಂಬ ಸರ್ವೇ ಮಾಡುವ ಸಾಮರ್ಥ್ಯವೂ ಇದ್ದ ಹಾಗೇ ಕಾಣುತ್ತಿಲ್ಲ. ಇನ್ನು ಬೆಂಗಳೂರಿನ ಕಸವನ್ನು ತೆಗೆದು ಸಮಸ್ಯೆ ನಿವಾರಿಸುವ ಉದ್ದೇಶವಂತೂ ಬಿಬಿಎಂಪಿಗೆ ಇಲ್ಲವೇ ಇಲ್ಲ ಎಂಬುದು ಸ್ಪಷ್ಟ.

ಹುಣಸೂರಿನಲ್ಲಿ ನಿವೇಶನಕ್ಕೆ ಆಗ್ರಹಿಸಿ ಡಿ.ವೈ.ಎಫ್.ಐ. ನಿಂದ ಪ್ರತಿಭಟನಾ ಧರಣಿ

ಮೈಸೂರು ಜಿಲ್ಲೆಯಲ್ಲಿ ಹುಣಸೂರು ಒಂದು ಉಪವಿಭಾಗ ಕೇಂದ್ರವಾಗಿದ್ದು, ಜಿಲ್ಲೆಯ ಪ್ರಮುಖ ತಾಲ್ಲೂಕಾಗಿದೆ. ಹುಣಸೂರು ಪಟ್ಟಣ ಜಿಲ್ಲೆಯಲ್ಲೇ ದೊಡ್ಡ ಪಟ್ಟಣವಾಗಿದ್ದು ನಿರಂತರವಾಗಿ ಬೆಳೆಯುತ್ತಿದೆ. ಪಟ್ಟಣದಲ್ಲಿ ಕೂಲಿಕಾರರು, ಕೃಷಿ ಕೂಲಿಕಾರರು ಹೆಚ್ಚಾಗಿದ್ದು ಪುರಸಭೆ ಇವರ ಅಭಿವೃದ್ಧಿಯತ್ತ ಯಾವುದೇ ಗಮನ ಹರಿಸುತ್ತಿಲ್ಲ. ಪಟ್ಟಣದಲ್ಲಿ 28 ವಾರ್ಡುಗಳಿದ್ದು ಪ್ರತಿ ವಾರ್ಡುಗಳಲ್ಲಿ 600ಕ್ಕೂ ಹೆಚ್ಚು ಜನ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಈ ಜನರಿಗೆ ಪುರಸಭೆ ಕಳೆದ 20ವರ್ಷಗಳಿಂದ ಮನೆ ನಿವೇಶನ ನೀಡಿಲ್ಲ. ಚುನಾವಣೆ ಸಂದರ್ಭದಲ್ಲಿ ಜನರ ಕಣ್ಣೊರೆಸುವ ನೆಪದಲ್ಲಿ ಏಳೆಂಟು ವರ್ಷಗಳ ಹಿಂದೆ ಹಕ್ಕುಪತ್ರ ನೀಡಿದ್ದು ಬಿಟ್ಟರೆ ಜಾಗ ಗುರುತು ಮಾಡಿಲ್ಲ. ಈ ಸಮಸ್ಯೆಯ ಅಧ್ಯಯನ ನಡೆಸಿ ಹೋರಾಟ ಕೈಗೊಂಡ ಡಿ.ವೈ.ಎಫ್.ಐ. ಮನೆ ನಿವೇಶನ ರಹಿತರನ್ನು ಸಂಘಟಿಸಿ ಹೋರಾಟ ನಡೆಸುತ್ತಿದೆ. ಇದರ ಭಾಗವಾಗಿ ಪಟ್ಟಣದಲ್ಲಿರುವ ವಸತಿರಹಿತರಿಗೆ ಮನೆ, ನಿವೇಶನ ನೀಡಬೇಕೆಂದು ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಹಾಗೂ ಮನೆ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಮೇ.8 ರಂದು ಪುರಸಭಾ ಕಛೇರಿ ಮುತ್ತಿಗೆ ನಡೆಸಲಾಗಿತ್ತು. ಇದರ ಮುಂದುವರೆದ ಭಾಗವಾಗಿ ಎರಡನೇ ಹಂತದ ಹೋರಾಟವನ್ನು ಸೆ.24 ರಂದು ಹುಣಸೂರು ಪಟ್ಟಣದಲ್ಲಿ ಆಯೋಜಿಸಲಾಯಿತು.

ಈ ಹೋರಾಟದ ಪೂರ್ವಭಾವಿಯಾಗಿ ಬೀದಿ ಬೀದಿಗಳಲ್ಲಿ ಪ್ರಚಾರ ಪ್ರಕ್ಷೋಭೆ ನಡೆಸಿದ ಜಾಥಾವು ಜನರ ಗಮನ ಸೆಳೆಯಿತು.

ಪಟ್ಟಣದ ರಂಗನಾಥ ಬಡಾವಣೆಯಿಂದ ಮೆರವಣಿಗೆ ಹೊರಟು ಶ್ವೇತ ಪತಾಕೆ ಹಿಡಿದ



ಸೂರಿಲ್ಲದ ನೂರಾರು ಜನರು ಸೂರು ನೀಡದ ಪುರಸಭಾ ಅಧಿಕಾರಿ ಜನಪ್ರತಿನಿಧಿಗಳ ವಿರುದ್ಧ ಧಿಕ್ಕಾರ ಕೂಗುತ್ತ ಸೂರು ಒದಗಿಸದ ಪುರಸಭೆ ಬೇಡವೇ ಬೇಡ ಎಂಬ ಆಕ್ರೋಶದ ನುಡಿಗಳು ಘೋಷಣೆಯಾಗಿ ಮೊಳಗಿದವು. ನಂತರ ಪುರಸಭಾ ಮೈದಾನದಲ್ಲಿ ಬೆ.11 ರಿಂದ 3 ರವರೆಗೆ ಪ್ರತಿಭಟನಾ ಧರಣಿ ನಡೆಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಕಾರ್ಯದರ್ಶಿಗಳಾದ ಕೆ.ಕೆ. ಬಸವರಾಜುರವರು ಧರಣಿಯನ್ನು ಉದ್ಘಾಟಿಸಿ ಮಾತನಾಡಿ ಸೂರಿಲ್ಲದ ಸಾವಿರಾರು ಜನರಿಗೆ ಸೂರು ಒದಗಿಸದೆ ಪುರಸಭೆಯು ಭ್ರಷ್ಟಾಚಾರದಲ್ಲಿ ಮುಳುಗಿದೆ. ಸಾವಿರಾರು ಮಂದಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಪುರಸಭೆಯು ಜನಪ್ರತಿನಿಧಿಗಳಾಗಲೀ ಆಶ್ರಯ ಸಮಿತಿ ಅಧ್ಯಕ್ಷರಾದ ಶಾಸಕರಾಗಲೀ ಇತ್ತ ಗಮನ ಹರಿಸದೆ ಜನರ ಹೋರಾಟದ ದಿಕ್ಕು ತಪ್ಪಿಸಲು ಮುಂದಾಗುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಶಾಸಕರ ಮನೆ ಮುಂದೆ ಹೋರಾಟ ನಡೆಸಲು ಮುಂದಾಗಬೇಕು. ನಮ್ಮ ಒಗ್ಗಟ್ಟನ್ನು ಜಾತಿ ಆಧಾರದಲ್ಲಿ ಒಡೆಯುವ ಪ್ರಯತ್ನಗಳು ನಡೆಯುತ್ತಿದ್ದು ಜನರು ಅದಕ್ಕೆ ಬಲಿಯಾಗಬಾರದು ಎಂದರು.

ಮನೆ ನಿವೇಶದ ರಹಿತರ ಹೋರಾಟ ಸಮಿತಿಯ ಗೌರವಾಧ್ಯಕ್ಷರಾದ ವಿ. ಬಸವರಾಜು ಮಾತನಾಡಿ ಜನರ ಸಮಸ್ಯೆಗಳನ್ನು ಈಡೇರಿಸುವುದಾಗಿ ಅಧಿಕಾರಕ್ಕೆ ಬಂದ ಪುರಸಭೆ ತಾಲ್ಲೂಕಿನ ಶಾಸಕರು ಬಡವರಿಗೆ ಸೂರು ಕಲ್ಪಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಜನಪರ ಕೆಲಸ ಮಾಡಲು ಸಾಧ್ಯವಿಲ್ಲದಿದ್ದರೆ ಅಧಿಕಾರ ಬಿಟ್ಟು ತೊಲಗಿ ಎಂದು ಆಗ್ರಹಿಸಿದರು. ಇಂತಹ ಜನವಿರೋಧಿ ಆಡಳಿತದ ವಿರುದ್ಧ ತೀವ್ರ ಚಳುವಳಿಗೆ ಸೂರಿಲ್ಲದ ಬಡವರು ಸಿದ್ಧರಾಗಬೇಕೆಂದರು. ನಂತರ ಎಸ್.ಎಫ್.ಐ. ನ ಜಿಲ್ಲಾಧ್ಯಕ್ಷ ಎಲ್. ಜಗದೀಶ್ ಸೂರ್ಯ ಮಾತನಾಡಿ ಆಶ್ರಯ ಸಮಿತಿ ಕೂಡಲೇ ಸಭೆ ಸೇರಿ ಸೂರಿಲ್ಲದವರ ಪಟ್ಟಿ ತಯಾರಿಸಿ ನಿವೇಶನ ನೀಡುವ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಕಳುಹಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. ನಂತರ ಪುರಸಭಾ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಜನರ ಆಕ್ರೋಶ ಎಷ್ಟಿತ್ತೆಂದರೆ, ನಿವೇಶನ ನೀಡದಿದ್ದರೆ ಪುರಸಭೆ ಮೈದಾನದಲ್ಲಿ ಒಲೆ ಹಚ್ಚಿಸಿ ಜೀವನ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಧರಣಿಯಲ್ಲಿ ಡಿ.ವೈ.ಎಫ್.ಐ. ಕಲ್ಕುಣಿಕೆ ಘಟಕದ ಅಧ್ಯಕ್ಷ ಕೋಗಿಲೆ ನರಸಿಂಹ, ಕಾರ್ಯದರ್ಶಿ ಅಶ್ವಥನಾಯ್ಕ, ವಸತಿ ರಹಿತರ ಹೋರಾಟ ಸಮಿತಿ ಅಧ್ಯಕ್ಷ ಉಮರ್ ಖಾನ್, ಕಾರ್ಯದರ್ಶಿ ಬೆಳ್ತೂರು ವೆಂಕಟೇಶ್, ಎಸ್.ಎಫ್.ಐ.ನ ಜಿಲ್ಲಾ ಕಾರ್ಯದರ್ಶಿ ಮಹೇಶ್ ಕುಮಾರ್, ರಘು, ಡಿ.ವೈ.ಎಫ್.ಐ. ನ ಸೋಮು, ಮೆಕಾನಿಕ್ ಸೂರಿ, ಮಹೇಶ್, ಮಹದೇವ ಸೇರಿದಂತೆ ಹಲವರು ನೇತೃತ್ವ ವಹಿಸಿದ್ದರು.

ಹರತಾಳಕ್ಕೆ ಕರಾವಳಿಯಲ್ಲಿ ವ್ಯಾಪಕ ಬೆಂಬಲ....

ಪುಟ 6 ರಿಂದ

ಅಬೂಬಕರ್, ರಝಾಕ್ ಮತ್ತಿತರರು ಉಪಸ್ಥಿತರಿದ್ದರು.

ಹರತಾಳದ ಯಶಸ್ಸಿಗೆ ಮಂಗಳೂರಿನಲ್ಲಿ ಪಾದಯಾತ್ರೆ:

ಸಪ್ಟೆಂಬರ್ 20 ರಂದು ನಡೆಯಲಿದ್ದ ಎಡ, ಕಾಂಗ್ರೆಸ್ಸೇತರ ಜಾತ್ಯಾತೀತ ಪಕ್ಷಗಳ ನೇತೃತ್ವದ ಅಖಿಲ ಭಾರತ ಹರತಾಳವನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಸಪ್ಟೆಂಬರ್ 18 ರಂದು ಪಾದಯಾತ್ರೆಯನ್ನು ಏರ್ಪಡಿಸಲಾಗಿತ್ತು. ಘೋಷಣೆಗಳೊಂದಿಗೆ ಮಂಗಳೂರು ಮೈದಾನ್ ರಸ್ತೆಯ ಸಿಪಿಐ(ಎಂ) ಕಚೇರಿಯಿಂದ ಆರಂಭವಾದ ಪಾದಯಾತ್ರೆ ಮಾರ್ಕೆಟು, ಕಾರ್ನಾಡು ರಸ್ತೆ, ಪಿವಿಎಸ್ ರಸ್ತೆ, ಕುದ್ಮಾಲ್ ರಂಗರಾವ್ ರಸ್ತೆ, ಬಂಟ್ಸ್ ಹಾಸ್ಟೆಲ್ ವೃತ್ತ, ಜ್ಯೋತಿ ಅಂಬೇಡ್ಕರ್ ವೃತ್ತ, ಶಿವರಾಮ ಕಾರಂತ ರಸ್ತೆ, ಮಿಲಾಗ್ರಿಸ್ ಚರ್ಚ್, ಹಂಪನ್‌ಕಟ್ಟಾ, ಜಿಲ್ಲಾಧಿಕಾರಿ ಕಚೇರಿ ಬಳಸಿ ಮೈದಾನ್ ರಸ್ತೆ ಬಸ್ಸು ನಿಲ್ದಾಣದಲ್ಲಿ ಕೊನೆಗೊಂಡಿತು.

ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಪಾದಯಾತ್ರೆಯನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಸಮಾರೋಪ ನೆರವೇರಿಸಿದರು. ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಮಿತಿಯ ಸದಸ್ಯರಾದ ಕೃಷ್ಣಪ್ಪ ಕೊಂಚಾಡಿ, ಶಶಿಧರ ಶಕ್ತಿನಗರ, ದಯಾನಂದ ಶೆಟ್ಟಿ, ವಾಸುದೇವ ಉಚ್ಚಿಲ ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

ಕರಾವಳಿ ಜಿಲ್ಲೆಗಳಲ್ಲಿ ಸಪ್ಟೆಂಬರ್ 20 ರಂದು ಯಶಸ್ವಿ ಹರತಾಳ:


ಉಡುಪಿ ಮತ್ತು ದ.ಕ.ಜಿಲ್ಲೆಗಳಲ್ಲಿ ರಾಷ್ಟ್ರ ಮಟ್ಟದ ಹರತಾಳದ ಕರೆಗೆ ಬಂದ್ ಆಚರಿಸಿ ಜನ ವ್ಯಾಪಕ ಬೆಂಬಲ ನೀಡಿದರು. ರಾಜ್ಯ ಸಾರಿಗೆ ಬಸ್ಸುಗಳ ಜೊತೆ ಖಾಸಗಿ ಬಸ್ಸುಗಳೂ ನಿಲುಗಡೆಯಾದುದಲ್ಲದೆ, ಎರಡೂ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚಿದ್ದವು.

ಕುಂದಾಪುರದಲ್ಲಿ ಶಾಸ್ತ್ರಿ ವೃತ್ತದಲ್ಲಿ ಸಿಪಿಐ(ಎಂ) ಪಕ್ಷದ ಬೆಂಬಲಿಗರು ಪ್ರತಿಭಟನಾ ಪ್ರದರ್ಶನ ನೀಡಿದರು.

ಮಂಗಳೂರಿನಲ್ಲಿ ಸಿಪಿಐ(ಎಂ) ನಗರ ಸಮಿತಿ ನೇತೃತ್ವದಲ್ಲಿ ಪಕ್ಷದ ಮೈದಾನ ಕಚೇರಿಯಿಂದ ಕಾರ್ಯಕರ್ತರು ದ.ಕ.ಜಿಲ್ಲಾಧಿಕಾರಿ ಕಚೇರಿ ವರೆಗೆ ಜಾಥಾ ನಡೆಸಿ, ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಅಲ್ಲಿ ಜನತಾದಳ (ಎಸ್) ಕಾರ್ಯಕರ್ತರೂ ಬಂದು ಸೇರಿಕೊಂಡು ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದರು.

ಸಿಪಿಐ(ಎಂ ದ.ಕ.ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಸಮಿತಿಯ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ವಾಸುದೇವ ಉಚ್ಚಿಲ್, ಮುನೀರ್ ಕಾಟಿಪಳ್ಳ ಹಾಗೂ ಯಶವಂತ ಮರೋಳಿ, ದಯಾನಂದ ಶೆಟ್ಟಿ, ಶಶಿಧರ ಶಕ್ತಿನಗರ, ಸುರೇಶ್ ಬಜಾಲ್, ಬಿ.ಕೆ.ಇಮ್ತಿಯಾಜ್ ಮತ್ತಿತರರು ಭಾಗವಹಿಸಿದ್ದರು.

ದಾವಣಗೆರೆಯಲ್ಲಿ ಜೆಡಿಎಸ್, ಸಿಪಿಐ(ಎಂ) ಮತ್ತು ಸಿಪಿಐ ಜಂಟಿ ಪ್ರತಿಭಟನೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ವಿದ್ಯುತ್ ದರಗಳನ್ನು ಏರಿಸಿದರೆ ಮಾತ್ರ ವಿದ್ಯುತ್ ಮಂಡಳಿಗಳಿಗೆ ಸಾಲದ 'ನೆರವು'!

ಇದು ಯುಪಿಎ-2 ಸರಕಾರದ ಈ ವಾರದ ಒಂದು ನಿರ್ಧಾರ. ಅಂದರೆ 'ದೇಶದ ಹಿತದೃಷ್ಟಿಯಿಂದ' ಮತ್ತು 'ದೇಶೀ ಮತ್ತು ವಿದೇಶಿ ಹೂಡಿಕೆದಾರರ ವಿಶ್ವಾಸ ಗಳಿಸಲು'(ದೇಶೀ ಹೂಡಿಕೆದಾರರು 'ದೇಶ'ದ ಭಾಗ ಅಲ್ಲ!) ಡೀಸೆಲ್ ದರ ಏರಿಕೆ, ಅಡುಗೆ ಅನಿಲ ಸಿಲಿಂಡರುಗಳ ಕಡಿತ, ಎಫ್‌ಡಿಐ ಇತ್ಯಾದಿಗಳ ನಂತರ ಯುಪಿಎ-2 'ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ' (ಸಿಸಿಇಎ) ರಾಜ್ಯ ವಿದ್ಯುತ್ ಮಂಡಳಿಗಳು ತಮ್ಮ ವಿದ್ಯುತ್ ವಿತರಣಾ ಕಂಪನಿಗಳ ಸಾಲಭಾರವನ್ನು ಕಡಿಮೆ ಮಾಡಲು 1.90ಲಕ್ಷ ಕೋಟಿ ರೂ.ಗಳ 'ಸಾಲ ಮರು ರಚನೆ' ಪ್ಯಾಕೇಜನ್ನು ಮಂಜೂರು ಮಾಡಿದೆ. ಇದು ಕೂಡ ಜನಗಳ ಹಿತದೃಷ್ಟಿಯಿಂದ ಕೈಗೊಂಡಿರುವ ನಿರ್ಧಾರ ಎಂಬುದರಲ್ಲಿ ಸಂದೇಹವಿದೆಯೇ?

ಆದರೆ ಈ ಪ್ಯಾಕೇಜಿನ ಶರತ್ತನ್ನು ನೋಡಿ-'ರಾಜ್ಯ ಸರಕಾರಗಳು/ವಿದ್ಯುತ್ ವಿತರಣಾ ಕಂಪನಿ(ಡಿಸ್ಕಾಂ)ಗಳು ಪೂರೈಕೆಯ ಸರಾಸರಿ ವೆಚ್ಚ ಮತ್ತು ಗಳಿಸಿದ ಸರಾಸರಿ ಆದಾಯದ ನಡುವಿನ ಅಂತರವನ್ನು ತುಂಬಿಸುವ ಶರತ್ತನ್ನು ಈಡೇರಿಸಲು ಬದ್ಧರಾಗಬೇಕು.' ಈ ಹಣಕಾಸು ಪುನರ್ರಚನಾ ಪ್ಯಾಕೇಜು ಮಂಜೂರಾಗಲು 2012-13ರ ಪರಿಷ್ಕೃತ ವಿದ್ಯುತ್ ದರಪಟ್ಟಿಯನ್ನು ಪ್ರಕಟಿಸಬೇಕು, ಮತ್ತು ಮುಂದೆ ಪ್ರತೀ ವರ್ಷ ಎಪ್ರಿಲ್ ತಿಂಗಳಲ್ಲಿ ದರಪಟ್ಟಿಯನ್ನು ಪ್ರಕಟಿಸಬೇಕು.

ನೇರ ಮಾತುಗಳಲ್ಲಿ ಹೇಳಬೇಕಾದರೆ, ನಿಯಮಿತವಾಗಿ ವಿದ್ಯುತ್ ದರಗಳನ್ನು ಏರಿಸಬೇಕು! ನಿಜ, ಮತ್ತೆ ಅದೇ 'ದೇಶದ ಆರ್ಥಿಕ ಹಿತದೃಷ್ಟಿಯಿಂದ'!


ನಿಮಗೆ ನೆನಪಿದೆಯೇ? ಕಲ್ಲಿದ್ದಲು ಗಣಿ ಹಂಚಿಕೆ ಕುರಿತ ಸಿಎಜಿ ವರದಿಯ ಹಿನ್ನೆಲೆಯಲ್ಲಿ ಎದ್ದ ಬಿರುಗಾಳಿಯ ನಡುವೆ ಮೌನವೇ ಲೇಸು ಎಂದಿದ್ದ ಪ್ರಧಾನ ಮಂತ್ರಿಗಳು ಕೊನೆಗೂ ಮೌನ ಮುರಿದು ಸಂಸತ್ತಿನಲ್ಲಿ ನೀಡಿದ್ದ ಹೇಳಿಕೆಯಲ್ಲಿ ಎರಡು ಅಂಶಗಳಿದ್ದವು. ಒಂದು, ಈ ಹಂಚಿಕೆಯಲ್ಲಿ ರಾಷ್ಟ್ರೀಯ ಖಜಾನೆಗೆ ನಷ್ಟ ಆಗಿರಬಹುದು, ಆದರೆ "ಖಾಸಗಿ ಕಂಪನಿಗಳಿಗೆ ಲಾಭವಾಗಿದೆ ಎಂಬ ಸಿಎಜಿ ವಾದವನ್ನು ಒಪ್ಪಿಕೊಂಡರೂ, ಅದರ ಲೆಕ್ಕಾಚಾರವನ್ನು ಹಲವು ತಾಂತ್ರಿಕ ಅಂಶಗಳಲ್ಲಿ ಪ್ರಶ್ನಿಸಬಹುದು" ಎಂದಿದ್ದರು. ಈ ರೀತಿ ಹಂಚಿಕೆ ಮಾಡಿರದಿದ್ದರೆ ವಿದ್ಯುತ್ ವಲಯಕ್ಕೆ ಬಹಳ ತೊಂದರೆಯಾಗುತ್ತಿತ್ತು, ವಿದ್ಯುತ್ ದರಗಳ ಮೇಲೆ ನಿಯಂತ್ರಣವಿರುವಾಗ ನಷ್ಟದ ಪ್ರಶ್ನೆಯೆಲ್ಲಿದೆ ಎಂಬುದು ಅವರ ಇನ್ನೊಂದು ಪ್ರಶ್ನೆ.

ಯುಪಿಎ-2 ಸರಕಾರದ ಇಂಧನ ಮಂತ್ರಾಲಯವೂ ನಂತರ ಪ್ರಧಾನ ಮಂತ್ರಿಗಳ ಇದೇ ತರ್ಕ ಮುಂದುವರೆಸಿದೆ. ವಿದ್ಯುತ್ ದರಗಳನ್ನು ನಿಯಂತ್ರಿಸಿರುವುದು ಕಲಿದ್ದಲು ಬೆಲೆಗಳನ್ನು ಗಮನದಲ್ಲಿಟ್ಟುಕೊಂಡು. ಆದ್ದರಿಂದ ಕಲ್ಲಿದ್ದಲು ಹಂಚಿಕೆಯಿಂದ ಖಾಸಗಿ ವಿದ್ಯುತ್ ಉತ್ಪಾದಕರಿಗೆ ಅಗ್ಗದಲ್ಲಿ ಕಲಿದ್ದಲು ದಕ್ಕಿದ್ದರೆ, ಅದರಿಂದ ವಿದ್ಯುತ್ ದರಗಳು ನಿಯಂತ್ರಣದಲ್ಲಿ ಉಳಿಯುವಂತಾಗಿದೆ; ಹೀಗಿರುವಾಗ ದೇಶಕ್ಕೆ ಅಥವ ಜನರಿಗೆ ನಷ್ಟದ ಪ್ರಶ್ನೆಯೆಲ್ಲಿದೆ?

ಆದರೆ, ಒಬ್ಬ ಆರ್ಥಿಕ ತಜ್ಞರೂ ಎಂದೆನಿಸಿಕೊಂಡ ದೇಶದ ಪ್ರಧಾನ ಮಂತ್ರಿಗಳಿಂದ ಬಂದಿರುವ ಈ ಪ್ರಶ್ನೆ ಕೂಡ ಪ್ರಶ್ನಾರ್ಹ ಎಂಬುದು ವಿದ್ಯುತ್ ಕ್ಷೇತ್ರದಲ್ಲಿನ ಪರಿಣತರ ಅಭಿಪ್ರಾಯ. ಸಂಪುಟ ಸಮಿತಿಯ ಈ ವಾರದ ಪ್ಯಾಕೇಜ್ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದೆ.

ನವ-ಉದಾರವಾದಿ ಯುಗಕ್ಕೆ ಅನುಗುಣವೆನಿಸುವ ವಿದ್ಯುತ್ ಕಾನೂನು, 2003 ಬಂದದ್ದು ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ-ಅದಕ್ಕೆ ಕಾಂಗ್ರೆಸ್‌ನ ಸಂಪೂರ್ಣ ಬೆಂಬಲವಿತ್ತು! ಆ ಬೆಂಬಲವಿಲ್ಲದಿದ್ದರೆ ಈ ಕಾನೂನೇ ಬರುತ್ತಿರಲಿಲ್ಲ. ಈ ಕಾನೂನು ದೇಶದಲ್ಲಿ ಒಂದು 'ವಿದ್ಯುತ್ ಮಾರುಕಟ್ಟೆ'ಯನ್ನು ಸೃಷ್ಟಿಸಿ, ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗಳು ತಮ್ಮ ಉತ್ಪಾದನೆಯನ್ನು ಈ ಮಾರುಕಟ್ಟೆಯಲ್ಲಿ ಅನಿಯಂತ್ರಿತ ಬೆಲೆಗಳಲ್ಲಿ ಮಾರಲು, ಆಮೂಲಕ ವಿದ್ಯುತ್ ಕೂಡ ಅನಿಯಂತ್ರಿತಗೊಳ್ಳುವಂತೆ ಅವಕಾಶ ಕಲ್ಪಿಸಿತು. ಯುಪಿಎ ಸರಕಾರ ಅಧಿಕಾರ ವಹಿಸಿಕೊಂಡ ಮೇಲಂತೂ 'ವಾಣಿಜ್ಯ ವಿದ್ಯುತ್' ಮತ್ತು 'ಬಹಿರಂಗ ವಿದ್ಯುತ್ ಮಾರುಕಟ್ಟೆ'ಯ ಪರಿಕಲ್ಪನೆಯನ್ನು ಪ್ರೋತ್ಸಾಹಿಸುತ್ತಲೇ ಬಂದಿದೆ. ಅವು ಈ ಸರಕಾರದ ವಿದ್ಯುತ್ ಧೋರಣೆಗಳ ಅಡಿಪಾಯವೇ ಆಗಿ ಬಿಟ್ಟಿವೆ, ಹೀಗಿರುವಾಗ ಖಾಸಗಿಯವರಿಗೆ ಬಿಟ್ಟಿ ಕಲ್ಲಿದ್ದಲಿನ ಪ್ರಯೋಜನ ವಿದ್ಯುತ್ ಬಳಕೆದಾರರಿಗೆ ಕಡಿಮೆ ದರದ ವಿದ್ಯುತ್ತಿನ ಮೂಲಕ ದಕ್ಕಿದೆ ಎಂಬ ಯುಪಿಎ-2 ವಕ್ತಾರರುಗಳ ಮಾತುಗಳು ಸುಳ್ಳಲ್ಲದೆ ಬೇರೇನೂ ಅಲ್ಲ ಎನ್ನುತ್ತಾರೆ ಡಾ. ಪ್ರಬೀರ್ ಪುರಕಾಯಸ್ಥ.

ರಾಜ್ಯ ವಿದ್ಯುತ್ ಮಂಡಳಿಗಳನ್ನು ವಿಭಜಿಸಿ ವಿದ್ಯುತ್ ಉತ್ಪಾದನಾ ಕಂಪನಿಗಳು, ವಿತರಣಾ ಕಂಪನಿ(ಡಿಸ್ಕಾಂ)ಗಳು ಎಂದು



ಪ್ರತ್ಯೇಕಿಸಿದ್ದು, ಶೇರು ವಿನಿಮಯ(ಸ್ಟಾಕ್ ಎಕ್ಸ್‌ಚೇಂಜ್) ಮಾದರಿಯಲ್ಲಿ ಐಇಎಕ್ಸ್(ಭಾರತ ಇಂಧನ ವಿನಮಯ) ಮತ್ತು ಪಿಎಕ್ಸ್‌ಐ(ಭಾರತದ ವಿದ್ಯುತ್ ವಿನಮಯ)ಗಳನ್ನು ನಿರ್ಮಿಸಿದ್ದು ವಿದ್ಯುತ್ ವಲಯವನ್ನು ಅನಿಯಂತ್ರಿತಗೊಳಿಸಲಾಗಿಯೇ. ಕಲ್ಲಿದ್ದಲು ಗಣಿ ಹಂಚಿಕೆಯ ಧೋರಣೆ ರೂಪಿತಗೊಂಡಿರುವುದು ಇದಕ್ಕೆ ಪೂರಕವಾಗಿ ಎನ್ನುತ್ತಾರೆ ಪರಿಣಿತರು.

ಈಗ 12 ಶೇ.ದಷ್ಟು ವಿದ್ಯುತ್ ಈ ಅನಿಯಂತ್ರಿತ ಮಾರುಕಟ್ಟೆಯ ಮೂಲಕ ಮಾರಾಟವಾಗುತ್ತಿವೆ. ಹೊಸ ಘಟಕಗಳಲ್ಲೂ ವಿದ್ಯುತ್ ಉತ್ಪಾದನೆಯ ಖರ್ಚು ರೂ.2.20 ಇದ್ದಾಗಲೂ, ಬೇಡಿಕೆಯನ್ನು ಅನುಸರಿಸಿ ಈ ಮಾರುಕಟ್ಟೆಯಲ್ಲಿ ವಿದ್ಯುತ್ ಮಾರಾಟ ಬೆಲೆ ಯುನಿಟ್ಟಿಗೆ ಕನಿಷ್ಟ 4.50 ರೂ.ನಿಂದ 12ರೂ. ವರೆಗೂ ಇರುತ್ತದೆ. ಉದಾರೀಕರಣದ ನಂತರದ ಕಳೆದ ಹತ್ತು ವರ್ಷಗಳಲ್ಲೇ ರಾಜ್ಯ ವಿದ್ಯುತ್ ಮಂಡಳಿಗಳ ನಷ್ಟ 24837 ಕೋಟಿ ರೂ.ಗಳಿಂದ ರೂ. 2 ಲಕ್ಷ ಕೋಟಿಗೆ ಏರಿರುವುದೂ(ಇದರಲ್ಲಿ ಮುಕ್ಕಾಲು ಪಾಲು ಕಳೆದ 5 ವರ್ಷಗಳಲ್ಲೇ ಉಂಟಾಗಿರುವುದು) ಇದೇ 'ವಿದ್ಯುತ್ ಮಾರುಕಟ್ಟೆ'ಯ ಮತ್ತು ಇತರ ನವ-ಉದಾರವಾದಿ



ವೇದರಾಜ ಎನ್.ಕೆ.

ಧೋರಣೆಗಳ ಪರಿಣಾಮವಾಗಿ ಎನ್ನುತ್ತಾರೆ ಡಾ.ಪುರಕಾಯಸ್ಥ. ಈಗ ಈ ಸಾಲದ ಹೊರೆಯನ್ನು ತಗ್ಗಿಸುವ ಹೆಸರಿನಲ್ಲಿ ವಿದ್ಯುತ್ ದರ ಏರಿಕೆಯ ಹುನ್ನಾರ!

ಇದೀಗ ಮನಮೋಹನ್ ಸಿಂಗ್ ಸರಕಾರ ಅನುಸರಿಸುತ್ತಿರುವ ಧೋರಣೆಗಳ ಸಾರಾಂಶ: ದೇಶದ ನೈಸರ್ಗಿಕ ಸಂಪನ್ಮೂಲಗಳ ಲೂಟಿಯ ಮೂಲಕ ಭಾರತೀಯ ಬಂಡವಾಳದ 'ಪ್ರಾಣಿ ಚೈತನ್ಯ'ಕ್ಕೆ ಮುಕ್ತ ಅವಕಾಶ ಕಲ್ಪಿಸುವುದು- **ಆರಿಸಿದ ಕೆಲವರಿಗೆ ಕಲ್ಲಿದ್ದಲು ಗಣಿಗಳ ಹಂಚಿಕೆಯ ಮೂಲಕ ಕಲ್ಲಿದ್ದಲು ಸಂಪನ್ಮೂಲದ ಲೂಟಿ, ಮತ್ತು ಒಂದು ವಿದ್ಯುತ್ ಮಾರುಕಟ್ಟೆಯ ಮೂಲಕ ಡಿಸ್ಕಾಂಗಳ ಹೊರೆಯನ್ನು ಹೆಚ್ಚಿಸಿ, ಅದನ್ನು ಇಳಿಸುವ ಹೆಸರಿನಲ್ಲಿ ಬಳಕೆದಾರರ ಲೂಟಿ!**

★

ಈಗ ಬಹುರಾಷ್ಟ್ರೀಯ ಕಂಪನಿಗಳಿಗಾಗಿಯೇ ಎಫ್‌ಡಿಐ ನಿಯಮಗಳಲ್ಲೂ ಸಡಿಲಿಕೆ!

ಕೋಟ್ಯಂತರ ಜನಗಳ ಅಭಿಪ್ರಾಯಕ್ಕಿಂತ ಬಂಡವಾಳಿಗರ ಹಿಡಿತದ ದೊಡ್ಡ ಪತ್ರಿಕೆಗಳ, ಇತರ ಮಾಧ್ಯಮಗಳ, ವಿದೇಶಿ ಹಣಕಾಸು ಬಂಡವಾಳದ ತುತ್ತೂರಿಗಳ ಶಾಭಾಷ್‌ಗಿರಿ, ಸರ್ಟಿಫಿಕೇಟುಗಳೇ ತನಗೆ ಮುಖ್ಯ ಎಂದು ಯಾವುದೇ ನಾಚಿಕೆಯಿಲ್ಲದೆ ಪ್ರದರ್ಶಿಸುತ್ತಿರುವ ಯುಪಿಎ-2 ಸರಕಾರ, ಸಪ್ಟಂಬರ್ 20ರಂದು ದೇಶಾದ್ಯಂತ ವ್ಯಕ್ತಗೊಂಡ ಭಾರೀ ಆಕ್ರೋಶದ ಪರಿವೆಯೇ ಇಲ್ಲದೆ, ಸಭ್ಯತನ, ಪ್ರಾಮಾಣಿಕತೆಯ ಎಲ್ಲ ಎಲ್ಲೆಗಳನ್ನೂ ಮೀರಿ ವರ್ತಿಸಲು ನಿರ್ಧರಿಸಿದಂತಿದೆ.

ಯಾವುದೇ ಪ್ರಜಾಪ್ರಭುತ್ವ ನಡವಳಿಕೆಯ ಪರಿವೆಯಿಲ್ಲದೆ, ಅದೀಗ ವಿದೇಶಿ ನೇರ ಹೂಡಿಕೆಯ ನಿಯಮಗಳ ಬಗ್ಗೆ ಒಂದು ಅಧಿಸೂಚನೆಯನ್ನು ಹೊರಡಿಸಿಯೇ ಬಿಟ್ಟಿದೆ. ಅದರಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಲಾಭಕೋರರಿಗೆ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಡಲೂ ಅದು ಹೇಸಿಲ್ಲ. ಇದು ಪ್ರಧಾನ ಮಂತ್ರಿಗಳು ಪ್ರಸಾರ ಭಾಷಣದಲ್ಲಿ ಹೇಳಿರುವಂತೆ, 'ದೇಶದ ಆರ್ಥಿಕ ಹಿತದೃಷ್ಟಿಯಿಂದ' ಕೈಗೊಳ್ಳಲೇ ಬೇಕಾಗಿ ಬಂದ ಕ್ರಮ ಅಲ್ಲ, ಬದಲಾಗಿ, ವಾಲ್ ಮಾರ್ಟ್ , ಟೆಸ್ಕೋ, ಕೆರೆಪೋರ್ ಮುಂತಾದ ದೈತ್ಯ ವಿದೇಸಿ ಕಂಪನಿಗಳ ಹಿತದೃಷ್ಟಿಯಿಂದಷ್ಟೇ ಕೈಗೊಂಡಿರುವ ಕ್ರಮಗಳು ಎಂಬುದು ಈ ಅಧಿಸೂಚನೆಗಳಲ್ಲಿ ಸ್ಪಷ್ಟವಾಗಿದೆ. ಏಕೆಂದರೆ ಅದರಲ್ಲಿನ ಎಲ್ಲ ನಿಯಮಗಳನ್ನೂ ಈ ವಿದೇಶಿ ಕಂಪನಿಗಳ 'ವಿಶ್ವಾಸ' ಗಳಿಸಲಿಕ್ಕಾಗಿಯೇ ರೂಪಿಸಿದಂತವುಗಳು ಎಂಬುದು ಎದ್ದು ಕಾಣುತ್ತದೆ.

ಒಂದು, ಎಫ್‌ಡಿಐನ ಕನಿಷ್ಟ ಮಿತಿ 10 ಕೋಟಿ ಡಾಲರು(550 ಕೋಟಿ ರೂ.)ಗಳಿಗಿಂತ ಕಡಿಮೆಯಿರಬಾರದು. ಇದು ಈ ದೈತ್ಯ ಕಂಪನಿಗಳಿಗೆ ಮಾತ್ರ ಸಾಧ್ಯ.

ಎರಡು: ವಿದೇಶಿ ಚಿಲ್ಲರೆ ಮಳಿಗೆಗಳನ್ನು 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ನಗರಗಳಲ್ಲಿ ಮಾತ್ರ ತೆರೆಯಬೇಕು. ಈ ದೈತ್ಯ ಕಂಪನಿಗಳಿಗೂ ಬೇಕಾಗಿರುವುದು ಇದೇ-ನಗರಗಳ

ಪುಟ 15ಕ್ಕೆ

ವಿದ್ಯಾರ್ಥಿ ಚಳುವಳಿ ಕಟ್ಟಿ.....

ಪುಟ 9 ರಿಂದ

ಬೆಂಬಲಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಹೋರಾಟ ರೂಪಿಸುವುದು ಪ್ರಥಮ ಆದ್ಯತೆಯಾಗಬೇಕಿದೆ.

ಎಸ್.ಎಫ್.ಐನ ಕಳೆದ ಅಖಿಲ ಭಾರತ ಸಮ್ಮೇಳನದ ನಂತರ ವಿಚ್ಛಿದ್ರಕಾರಿ ಶಕ್ತಿಗಳ ಧಾಳಿಯಿಂದ 6 ಜನ ನಮ್ಮ ಸಂಗಾತಿಗಳು ಕೊಲೆಗೀಡಾಗಿದ್ದಾರೆ. ಆಳುವ ವರ್ಗಕ್ಕೆ ಹಾಗೂ ಅವರ ಏಜೆಂಟ್‌ಗಳಿಗೆ ಎದುರಾಗಿ ಪ್ರಜಾಪ್ರಭುತ್ವ ಮೌಲ್ಯಗಳ ಉಳಿವಿಗಾಗಿ, ದೇಶದ ಐಕ್ಯತೆ-ಸಮಗ್ರತೆಗಾಗಿ, ಸಾಮಾಜಿಕ-ಆರ್ಥಿಕ ಸಮಾನತೆಗಾಗಿ ಹೋರಾಡುತ್ತಿದ್ದ 6 ಜನ ಸಂಗಾತಿಗಳನ್ನು ಕೊಲೆ ಮಾಡಲಾಗಿದೆ. ಇವರು ತಾವು ನಂಬಿದ ವಿಚಾರಗಳು ದೇಶದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಕ್ರಾಂತಿಯ ಕಿಡಿಗಳಾಗಿ ಹೊರ ಹೊಮ್ಮಲಿವೆ. ಅವರು ನಮ್ಮ ಸಂಗಾತಿಗಳನ್ನು ಕೊಂದಿದ್ದಾರೆ ಆದರೆ ಹುತಾತ್ಮ ಸಂಗಾತಿಗಳಾದ ಅಭಿಜಿತ್ ಮಹತೋ, ಪಾರ್ಥ ಬಿಸ್ವಾಸ್, ತಿಲಕ್ ಟುಡು, ಸ್ವಪನ್ ಕೊಲ್ಯೆ, ಎ.ಬಿ.ಬಿಜೇಶ್ ಮತ್ತು ಅನೀಶ್ ರಾಜನ್ ರವರು ನಂಬಿದ ವಿಚಾರಗಳನ್ನು ಕೊಲ್ಲಲು ಸಾಧ್ಯವಿಲ್ಲ.

ವಿಶೇಷ ಕಾರ್ಯಕ್ರಮ

ಸೆಪ್ಟಂಬರ್ 6ರಂದು ಎಸ್.ಎಫ್.ಐನ ಅಖಿಲ ಭಾರತ ಮಾಜಿ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸಿದ್ದ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಮಾಜಿ ಮುಖಂಡರಾದ ಕಾಂ.ಬಿಮನ್ ಬೋಸ್, ಕಾಂ.ಪ್ರಕಾಶ್ ಕಾರತ್, ಕಾಂ.ನೇಪಲ್ ದೇಬ್ ಭಟ್ಟಾಚಾರ್ಯ, ಕಾಂ.ಎಂ.ಎ.ಬೇಬಿ, ಕಾಂ.ಸೀತಾರಾಂ ಯೆಚೂರಿ, ಕಾಂ.ನಿಲೋತ್ಪಲ್ ಬಸು, ಕಾಂ.ವಿಜಯ್ ರಾಘವನ್, ಕಾಂ.ಸುಜನ್ ಚಕ್ರವರ್ತಿ, ವೈ.ವೆಂಕಟೇಶ್ವರ ರಾವ್, ಕಾಂ.ಪಿ.ಕೃಷ್ಣಪ್ರಸಾದ್ ಭಾಗವಹಿಸಿದ್ದರು.

ಕಾಂ.ಬಿಮನ್ ಬೋಸ್‌ರವರು ಮಾತನಾಡುತ್ತಾ 1970ರಲ್ಲಿ ಎಸ್.ಎಫ್.ಐ 7 ರಾಜ್ಯಗಳಲ್ಲಿ ರಾಜ್ಯಸಮಿತಿಗಳನ್ನು ಹೊಂದಿತ್ತು ಪ್ರಸ್ತುತ 23 ರಾಜ್ಯ ಸಮಿತಿಗಳು ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಅಭ್ಯಾಸ ಮತ್ತು ಹೋರಾಟದೊಂದಿಗೆ 'ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದ, ಘೋಷಣೆಗಳುಳ್ಳ ಎಸ್.ಎಫ್.ಐ ನ ಶ್ವೇತ ಪತಾಕೆಯನ್ನಿಡಿದು ಇನ್ನಷ್ಟು ದೃಢವಾಗಿ ಚಳುವಳಿಯನ್ನು ಮುನ್ನಡೆಸಬೇಕೆಂದು ಕರೆ ನೀಡಿದರು.

ಕಾಂ.ಪ್ರಕಾಶ್ ಕಾರತ್ ಮಾತನಾಡುತ್ತಾ ದೇಶದಲ್ಲಿ ಶಿಕ್ಷಣದ ವ್ಯಾಪಾರೀಕರಣ ವಿರುದ್ಧದ ಹೋರಾಟದಲ್ಲಿ ಎಸ್.ಎಫ್.ಐ ಮುಂಚೂಣಿಯಲ್ಲಿದೆ. ಶಿಕ್ಷಣ ಹಕ್ಕು ಕಾಯ್ದೆಯ ಜಾರಿಗಾಗಿ ಹಾಗೂ ಸರ್ವರಿಗೂ ಸಮಾನ ಶಿಕ್ಷಣಕ್ಕಾಗಿ ಪ್ರಬಲ ಹೋರಾಟಗಳನ್ನು ರೂಪಿಸಬೇಕೆಂದರು. ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ದೊಡ್ಡ ಪ್ರಮಾಣದ ಗೆಲುವು ಸಾಧಿಸಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದ ಅವರು ಬಲಿಷ್ಠ ವಿದ್ಯಾರ್ಥಿ ಚಳುವಳಿಯನ್ನು ಕಟ್ಟುವ ಮೂಲಕ ಎಡ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಗೊಳಿಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ ಎಸ್.ಎಫ್.ಐ ಕೇಂದ್ರ ಸಮಿತಿಯಿಂದ ಪ್ರಕಟಿಸಿದ್ದ 6 ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ಸೌಹಾರ್ದ ಪ್ರತಿನಿಧಿಗಳು

ಸಮ್ಮೇಳನದಲ್ಲಿ ಡಿ.ವೈ.ಎಫ್.ಐ ಅಖಿಲ ಭಾರತ ಅಧ್ಯಕ್ಷರಾದ ಶ್ರೀರಾಮಕೃಷ್ಣನ್, ಎ.ಐ.ಕೆ.ಎಸ್ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ.ಕೆ.ವರದರಾಜನ್, ಎಸ್.ಟಿ.ಎಫ್.ಐ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಕೆ.ರಾಜೇಂದ್ರನ್, ಸಿ.ಐ.ಟಿ.ಯು ಅಖಿಲಭಾರತ ಕಾರ್ಯದರ್ಶಿ ಕಾಂ.ಕೆ.ಕೆ.ದಿವಾಕರನ್‌ರವರು, ಎಸ್.ಎಫ್.ಐ ಮಾಜಿ ಅಧ್ಯಕ್ಷರಾದ ಕೆ.ಎನ್ ಬಾಲಗೋಪಾಲ್, ಉಪಾಧ್ಯಕ್ಷರಾಗಿದ್ದ ಹಾಗೂ ದಿ ಹಿಂದೂ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಎನ್.ರಾಮ್‌ರವರು ಭಾಗವಹಿಸಿ ಶುಭಕೋರಿ ಮಾತನಾಡಿದರು

ನೂತನ ಕೇಂದ್ರ ಸಮಿತಿ

ಸಮ್ಮೇಳನವು 83 ಜನರ ನೂತನ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. 14 ಜನರ ಪದಾಧಿಕಾರಿಗಳ ಸಮಿತಿ ಅವಿರೋಧವಾಗಿ ಆಯ್ಕೆಯಾಯಿತು. ನೂತನ ಅಖಿಲ ಭಾರತ ಅಧ್ಯಕ್ಷರಾಗಿ ಕಾಂ.ಶಿವದಾದನ್.ವಿ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ರಿತೊಬ್ರತೊ ಬ್ಯಾನರ್ಜಿ ಸರ್ವಾನುಮತದಿಂದ ಆಯ್ಕೆಯಾದರು.

ಕರ್ನಾಟಕದಿಂದ 5 ಜನ ಸಂಗಾತಿಗಳು ಕೇಂದ್ರ ಸಮಿತಿಗೆ ಆಯ್ಕೆಯಾಗಿದ್ದಾರೆ. ಕಾಂ.ಅನಂತ ನಾಯ್ಕ್. ಎನ್(ಕಾರ್ಯದರ್ಶಿ ಮಂಡಳಿ ಸದಸ್ಯರು), ಕಾಂ.ಹುಳ್ಳಿ ಉಮೇಶ್, ಕಾಂ.ಗುರುರಾಜ್ ದೇಸಾಯಿ(ಕೊಪ್ಪಳ), ಕಾಂ.ಜಗದೀಶ್ ಸೂರ್ಯ(ಮೈಸೂರು), ಕಾಂ.ರೇಣುಕಾ ಕಹಾರ್(ಹಾವೇರಿ).

ಸಮಾರೋಪ

ಕೊನೆಗೆ ಸಮಾರೋಪ ಕಾರ್ಯಕ್ರಮ ನಡೆಯಿತು. 26 ವರ್ಷಗಳಿಂದ ನಿರಂತರವಾಗಿ ದೇಶದಲ್ಲಿ ವಿದ್ಯಾರ್ಥಿ ಚಳುವಳಿ ಕಟ್ಟಲು ಶ್ರಮಿಸಿದ್ದ ಎಸ್.ಎಫ್.ಐ ಅಖಿಲ ಭಾರತ ಅಧ್ಯಕ್ಷರಾಗಿದ್ದ ಕಾಂ.ಪಿ.ಕೆ.ಬಿಜು ರವರನ್ನು ಕೇಂದ್ರ ಸಮಿತಿಯಿಂದ ಬಿಡುಗಡೆಗೊಳಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.ಈ ಸಂದರ್ಭದಲ್ಲಿ ಸಮ್ಮೇಳನದಲ್ಲಿದ್ದ ಎಲ್ಲ ಪ್ರತಿನಿಧಿಗಳು ಎದ್ದುನಿಂತು ಅವರಿಗೆ ಗೌರವಪೂರ್ವಕ ಕೆಂಪುವಂದನೆಗಳನ್ನು ತಿಳಿಸಿದರು. ಕರ್ನಾಟಕದಿಂದ ಕೇಂದ್ರ ಸಮಿತಿ ಸದಸ್ಯರಾಗಿದ್ದ ಕಾಂ.ಹೆಚ್.ಆರ್.ನವೀನ್ ಕುಮಾರ್‌ರವರನ್ನು ಸೇರಿದಂತೆ ಕೇಂದ್ರ ಸಮಿತಿಯಿಂದ ರಿಲೀವ್ ಆದ ಎಲ್ಲಾ ಸಂಗಾತಿಗಳನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು

ಸಂಕುಚಿತವಾದದ ಬೇಲಿ.........

ಪುಟ 3 ರಿಂದ

ಸಂಕುಚಿತ ರಾಜಕಾರಣ

ಆದ್ದರಿಂದ ಯಾವ ಭಾಷೆಯಲ್ಲಿ ಬರೆದರು ಎನ್ನುವುದಕ್ಕೆ ವಿಪರೀತ ಒತ್ತು ನೀಡಿ ವಿಭಜಿಸುವುದಕ್ಕಿಂತ ಏನನ್ನು ಬರೆದರು, ಮತ್ತದರ ಪ್ರಸ್ತುತತೆ ಏನು ಎನ್ನುವುದರತ್ತ ಚರ್ಚೆ ಬೆಳೆಸುವುದು ಆರೋಗ್ಯಕರ. ಇಂಗ್ಲೀಷ್‌ನ ಕಾರಣಕ್ಕೆ 'ಇವ ನಮ್ಮನಲ್ಲ' ವೆಂಬುದು ನಮ್ಮನ್ನು ಸಂಕುಚಿತ ಬೇಲಿಯೊಳಗೆ ಬಂಧಿಸುತ್ತದೆ. 'ವಿಶ್ವ ಮಾನವ ಸಂದೇಶ ಸಾರಿದ ಪರಂಪರೆಯ ಕವಿ ನಾಡು, ಹಲವು ಬಗೆಯ ಹೂವುಗಳುಳ್ಳ ಸುಂದರ ತೋಟವೀ ಕನ್ನಡನಾಡು' ಎಂದೆಲ್ಲಾ ಹಾಡುವವರು ಸಂಕುಚಿತವಾದದ ಸಂದೇಶ ಬಿತ್ತುವುದು ಅಪಾಯಕಾರಿಯಲ್ಲವೇ? ಇಂತಹ ಪ್ರಯತ್ನಗಳು ಮಹಾಕವಿ ತಿರುವಳ್ಳುವರ್ ಪ್ರತಿಮೆ ಅನಾವರಣ ವಿಷಯದಲ್ಲಿಯೂ ತಾರಕ್ಕೇರಿಸಿದ್ದ ಘಾಟು ಇನ್ನೂ ಬಿಸಿಯಾಗಿದೆ. ವಾದ ವಿವಾದಗಳ ಭರದಲ್ಲಿ ಭಾಷೆಯ ಗೆರೆ ಕೊರೆದು ಸೃಜನಶೀಲ ಬರಹಗಾರರನ್ನು ದೂಷಿಸುವುದಾದರೂ ಯಾಕೆ? ಭಾಷಾ ಸಂಕುಚಿತ ರಾಜಕೀಯಕ್ಕೆ ಚಿಂತಕರು ಬಲಿಯಾಗಬೇಕೇಕೆ? ಇದೇ ಸಂದರ್ಭದಲ್ಲಿ ಉತ್ತಮವಾಗಿ ಕನ್ನಡದಲ್ಲಿ ಬರೆದ ಅನೇಕರನ್ನು ಗುರುತಿಸಲಿಲ್ಲವೇಕೆಂಬುದು ಸಹ ಇಲ್ಲೀಗ ಅಪ್ರಸ್ತುತ. ಅದು ಬೇರೆ ಸಂಗತಿ.

ಸ್ಮಾರಕಗಳು ಸ್ಮಶಾನವಾಗದಂತಾಗಲು

ಒಬ್ಬ ಲೇಖಕ , ಹೋರಾಟಗಾರ ಯಾರೇ ಆಗಲಿ ಅವರಿಗೆ ಸ್ಮಾರಕವೊಂದನ್ನು ಕಟ್ಟಿದಾಕ್ಷಣ ಅವರಿಗೆ ಗೌರವ ತೋರಿ ನ್ಯಾಯ ಬಗೆದಂತೆ ಎಂದು ಬಾವಿಸುವುದು ತಪ್ಪು. ಇಂತಹ ಹತ್ತಾರು ಸ್ಮಾರಕಗಳು ಧೂಳು ತಿನ್ನುತ್ತಾ ದಿಕ್ಕೇಡಿಗಳಾಗಿ ಬಿದ್ದಿವೆ. ಸ್ಮಾರಕ ಕಟ್ಟಿ ಅವರ ಚಿಂತನೆಗಳಿಗೆ ಕಲ್ಲು ಚಪ್ಪಡಿ ಎಳೆಯುವುದು ಅಂತಹವರಿಗೆ ಬಗೆವ ದ್ರೋಹ ಮಾತ್ರವಲ್ಲ ಆಳುವವರ ವಂಚಕ ರಾಜಕಾರಣ. ನಮ್ಮ ಗಮನ, ಒತ್ತು ಇರಬೇಕಾದದ್ದು ಸಾಧಕರ ಚಿಂತನೆ, ಬದುಕು ಕೊಡುಗೆಗಳತ್ತ. ಅವುಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯು ಅಗತ್ಯವಿರುವುದನ್ನ ಅಳವಡಿಸಿಕೊಳ್ಳುವುದರಲ್ಲಿ. ಬುದ್ಧ, ಬಸವ, ಅಂಬೇಡ್ಕರ್, ಸರ್ವಜ್ಞ, ವಿವೇಕಾನಂದ, ಮಾರ್ಕ್ಸ್, ಏಂಗೆಲ್ಸ್, ಲೆನಿನ್, ಚೆ, ಭಗತ್ ಸಿಂಗ್, ಜ್ಯೋತಿಬಸು, ಲಕ್ಷ್ಮಿ ಸೆಹೆಗಲ್, ಮಹಾತ್ಮಗಾಂಧಿ, ಕುವೆಂಪು, ಬೇಂದ್ರೆ ಮುಂತಾವರು ಸದಾ ಜನಮಾನಸದಲ್ಲಿರುವುದು ಸ್ಮಾರಕಗಳಿಂದಲ್ಲವೇ ಅಲ್ಲ.

ಆದ್ದರಿಂದ ಕಟ್ಟಲಾಗುವ 'ಸ್ಥಾವರ'ದಲ್ಲಿ 'ಜಂಗಮದ ಜೀವಂತಿಕೆ' ತರಲು ಸಕಾರಾತ್ಮಕ ಚರ್ಚೆಗಳು ಬೆಳೆದಲ್ಲಿ ನಾಡಿಗೂ ಒಂದಿಷ್ಟು ಪ್ರಯೋಜನವಾದೀತು. ಅಂತಹ ಎಚ್ಚರವನ್ನು ಸರಕಾರ ವಹಿಸಲಿ. ಈ ಹಿನ್ನಲೆಯಲ್ಲಿ ಸ್ಮಾರಕ ಭವನ ಹಲವು ಉತ್ತಮ ಚಟುವಟಿಕೆಗಳು, ಸಂಶೋಧನೆಗೆ ಇಂಬು ಕೊಡುವಂತಾಗಲಿ. ಸಮಾಧಾನಕರ ಸಂಗತಿಯೆಂದರೆ ನಮ್ಮ ನಾಡಿನ ಹಲವಾರು ಪ್ರಗತಿಪರ ಸಾಹಿತಿಗಳು ಸಮತೋಲನದ, ಸಕಾರಾತ್ಮಕ ನಿಲುವು ಪ್ರತಿಪಾದಿಸಿರುವುದು ವಾತಾವರಣವನ್ನು ಇನ್ನಷ್ಟು ಕಲುಷಿತಗೊಳಿಸದಂತೆ ಮಾಡಿದೆ ಎಂಬುದು.

ನಮ್ಮ ನಾಡಿನ ಚಿಂತಕರಿಗೆ ಚರ್ಚೆ ಬೆಳೆಸಲು ಹತ್ತಾರು ವಿಷಯಗಳಿವೆ. ಅದರತ್ತ ಕತ್ತೆತ್ತಿ ನೋಡಬಾರದೇಕೆ?

ಈ ಸೋಗಾದರೂ ಏಕೆ, ಪ್ರಧಾನಿಗಳೇ?....

ಪುಟ 7 ರಿಂದ

ಸಮರ್ಥಕರು ಹೇಳಿಕೊಳ್ಳಬಹುದು. ಇದು ಕೂಡಾ ನಿಜವೇ ಎಂದಿಟ್ಟುಕೊಳ್ಳೋಣ. ಹಾಗಿದ್ದರೆ, ಈ ಅನಿವಾರ್ಯತೆಯಲ್ಲಿಯೇ ಸದ್ಗುಣಗಳನ್ನು ಕಾಣುವ ಅಗತ್ಯವೇನೂ ಇಲ್ಲವಲ್ಲ, ದೇಶದ ಮೇಲೆ ಬಲವಂತದಿಂದ ಹೇರಿರುವುದನ್ನು ಜನಗೆ ಒಳಿತು ಮಾಡುವಂತ ಕ್ರಮಗಳು ಎಂದು ಸೋಗು ಹಾಕುವ ಅಗತ್ಯವೇನೂ ಇಲ್ಲವಲ್ಲ. ಅದಕ್ಕೂ ಮುಖ್ಯ ಸಂಗತಿಯೆಂದರೆ, ಇಂತಹ ಸಮರ್ಥನೆಗಳು ನಿಜವೂ ಅಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಒಂದು ದೇಶ, ಬಂಡವಾಳದ ಮೇಲೆ ಹತೋಟಿಗಳನ್ನು ಹಾಕಿ ಜಾಗತೀಕರಣಗೊಂಡ ಹಣಕಾಸಿನ ಸುಳಿಯಿಂದ ಹೊರಬರಲು ಖಂಡಿತಾ ಸಾಧ್ಯವಿದೆ. ನಮ್ಮದೇ ನೆರೆಯಲ್ಲಿನ ಮಲೇಸ್ಯಾ ಮಹಾತೀರ್ ಮಹಮ್ಮದ್ ನೇತೃತ್ವದಲ್ಲಿ ಇದನ್ನು ತೋರಿಸಿಯೂ ಕೊಟ್ಟಿದೆ.

ಇನ್ನು, ನಮ್ಮ ಸಂವಿಧಾನದ ಕಣ್ಣೋಟವನ್ನು ಉಲ್ಲಂಘಿಸುವುದಲ್ಲದೆ ಬೇರೆ ದಾರಿಯಿಲ್ಲ, ಏಕೆಂದರೆ, ಹಣಕಾಸಿನ ಜಾಗತೀಕರಣಕ್ಕೆ ಪರ್ಯಾಯವೇ ಇಲ್ಲದಿರುವ ಒಂದು ವ್ಯವಸ್ಥೆಯಲ್ಲಿ ಜನತೆಯ ಹಕ್ಕುಗಳನ್ನು ಅವರ ಜೀವನಾಧಾರಗಳನ್ನು ಅತಿಕ್ರಮಿಸಬೇ ಬೇಕಾಗಿದೆ ಎಂದು ಯಾವುದಾದರೂ ಸರಕಾರ ನಂಬಿರುವುದಾದರೆ, ಅಂತಹ ಸರಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯಲು ಯಾವ ನೈತಿಕ ಹಕ್ಕೂ ಇಲ್ಲ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಶೆಟ್ಟರ್ ದರ್ಬಾರಿನಲ್ಲಿ ತಿಪ್ಪೆ ಗುಂಡಿಗಳೇ....

ಪುಟ 11 ರಿಂದ

ಗಲ್ಲಿ ಗಲ್ಲಿಗಳು, ಓಣಿಗಳು, ರಸ್ತೆಗಳು, ಹಾದಿ ಬೀದಿಗಳು, ಮುಖ್ಯ ರಸ್ತೆಗಳು ಹೆದ್ದಾರಿಗಳ ಬದಿಗಳೂ ಕೂಡ ಕೊಳೆತು ನಾರುವ ಕಸದ ರಾಶಿಯಿಂದ ಅಲಂಕೃತಗೊಂಡು 'ಶೋಭಿ'ಸುತ್ತಿವೆ.

ಇದು ದಿಢೀರನೆ ಉದ್ಭವವಾದ ಸಮಸ್ಯೆ ಅಲ್ಲ. ಬಿಬಿಎಂಪಿ ವ್ಯಾಪ್ತಿಯ ಸಾಕಷ್ಟು ಬಡಾವಣೆಗಳಲ್ಲಿ, ಅಲ್ಲಿನ ರಸ್ತೆಗಳಲ್ಲಿ ಅಕ್ಷರಶಹ: ಕಸ ಗುಡಿಸುವ ವ್ಯವಸ್ಥೆಯೇ ಇಲ್ಲ. ಅದರಲ್ಲೂ ಬಡವರು, ಕೆಳ ಮಧ್ಯಮವರ್ಗದ ಜನರು, ಸಾಮಾನ್ಯ ಜನ ವಾಸಿಸುವ ಬಡಾವಣೆಗಳಲ್ಲಿ ಹಲವಾರು ಕಡೆಗಳಲ್ಲಿ ಇದು ನಿಜ. ರಸ್ತೆಯಲ್ಲಿ ಕಸ ಮಾತ್ರವಲ್ಲ ಮಳೆಯಲ್ಲಿ ಕೊಚ್ಚಿಕೊಂಡು ರಸ್ತೆಗೆ ಹರಿದು ಬರುವ ಮಣ್ಣಿನ ರಾಶಿ, ರಸ್ತೆಗೆ ತಂದು ಸುರುವಲಾದ ಹಳೆ ಕಟ್ಟಡದ ಇಟ್ಟಿಗೆ, ಕಲ್ಲು, ಮಣ್ಣು, ಕೋಳಿ ಅಂಗಡಿಯ ತ್ಯಾಜ್ಯದಿಂದ ಹಿಡಿದು, ಹಳೆ ಟೈರ್ ಅಂಗಡಿಯ ತ್ಯಾಜ್ಯದವರೆಗೆ ಎಲ್ಲವೂ ಹಾಸು ಹೊಕ್ಕಾಗಿ ಹರಡಿಕೊಂಡಿರುತ್ತವೆ. ನಾಯಿಗಳು, ದನಗಳು ಈ ಕಸದ ರಾಶಿಯನ್ನು ರಸ್ತೆಗೆ ಎಳೆದು ತಿನ್ನುವುದನ್ನು ತಿಂದು ಉಳಿದುದನ್ನು ಬಿಟ್ಟು ಹೋಗುತ್ತವೆ. ಒಂದು ದೃಷ್ಟಿಯಿಂದ ನೋಡಿದರೆ ಈ ಬೀದಿ ನಾಯಿ, ಬಿಡಾಡಿ ದನಗಳೇ ವಾಸಿ. ಬಿಬಿಎಂಬಿ ಅಧಿಕಾರಿಗಳು ಅದಕ್ಕಿಂತಲೂ ಕಡೆ. ನಾಯಿ ದನಗಳು ತಮಗೆ ಸಾಧ್ಯವಾದ ಕಸವನ್ನಾದರೂ ನಿವಾರಿಸುತ್ತವೆ.

ಇಲ್ಲಿ ಕಸದ ಪ್ರಶ್ನೆ ಮಾತ್ರವೇ ಇಲ್ಲ. ಜನ ಮತ್ತು ವಾಹನಗಳು ಸಾಗುವ ಹಾದಿಯನ್ನು ರಸ್ತೆ ಎಂದು ಕರೆದರೆ ನಿಜವಾಗಿಯೂ ರಸ್ತೆ ಎಂಬುದು ಎಲ್ಲಾದರೂ ಇದ್ದರೆ ಅದಕ್ಕೆ ಖಂಡಿತಾ ಅಪಮಾನ. ಹೆಜ್ಜೆ ಹೆಜ್ಜೆಗೂ ಗುಂಡಿಗಳು, ಹಳ್ಳ ಕೊಳ್ಳ ಕೊರಕಲುಗಳು, ಒಂದಾದ ಮೇಲೆ ಒಂದು ಸಾಲಾಗಿ ಶಿಸ್ತಾಗಿ ಇರಬೇಕಾದ ಸಿಮೆಂಟ್ ರಸ್ತೆ ವಿಭಜಕಗಳು ಕಿತ್ತು ಬಂದು ಅಸ್ತವ್ಯಸ್ತವಾಗಿ ಒಂದೆಡೆ ರಾಶಿ ಬಿದ್ದಿರುವುದಕ್ಕೆ ಲೆಕ್ಕವೇ ಇಲ್ಲ. ಇದನ್ನೆಲ್ಲಾ ಕೇಳಿದರೆ ಮೆಟ್ರೋ ಕಾಮಗಾರಿಯ ನೆಪ ಹೇಳಲಾಗುತ್ತದೆ. ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ ರಸ್ತೆಗುಂಡಿ ಮುಚ್ಚುವುದು ಬೇಡ, ವಾಹನ ಚಾಲಕರು ಬೇಕಾದರೆ ಬಿದ್ದು ಸಾಯಲಿ, ನಾವು ಸುಮ್ಮನಿರುತ್ತೇವೆ ಎಂದು ಬೆಂಗಳೂರಿನ ಜನ ಬಿಬಿಎಂಪಿಗೆ ಪ್ರಮಾಣ ಪತ್ರವನ್ನೇನಾದರೂ ಕೊಟ್ಟಿದ್ದಾರೆಯೇ ?

ಮೆಟ್ರೋ ಕಾಮಗಾರಿ ಇಲ್ಲದ ಕಡೆಯೂ ಇದೇ ಅವಸ್ಥೆ ಇದೆಯಲ್ಲ !! ಬಿಬಿಎಂಪಿ ಬಳಿ ಏನು ಉತ್ತರವಿದೆ ಇದಕ್ಕೆ. ಕಸವನ್ನು ವರ್ಗೀಕರಣ ಮಾಡಿ ಕೊಡದಿದ್ದರೆ ದಂಡ ಹಾಕಲಾಗುವುದು ಎಂದು ಜನರನ್ನು ಹೆದರಿಸಲಾಗುತ್ತಿದೆ. ಕಸದ ವರ್ಗೀಕರಣವೇನೋ ಒಳ್ಳೆಯದೇ. ರಸ್ತೆ ಬದಿಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆ ಮಾಡಿದರೆ 100 ರೂ. ದಂಡ ಹಾಕಲಾಗುವುದು ಎಂದೂ ಬಿಬಿಎಂಪಿ ಘೋಷಣೆ ಹೊರಡಿಸಿದೆ.

ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡುವುದು ಅನಾರೋಗ್ಯಕರ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಇಂತಹ ಸನ್ನಿವೇಶಕ್ಕೆ ಯಾರು ಹೊಣೆ ಎಂಬುದು ಪ್ರಶ್ನೆ.

50 ಲಕ್ಷ ಜನಸಂಖ್ಯೆಯ ಬೆಂಗಳೂರು ನಗರದಲ್ಲಿ ಲೆಕ್ಕಕ್ಕೆ ಇರುವುದು 300 ಸಾರ್ವಜನಿಕ ಶೌಚಾಲಯ. ಅದರಲ್ಲಿ 150 ಶೌಚಾಲಯಗಳು ನಿರ್ವಹಣೆ ಎಂಬುದೇ ಇಲ್ಲದೇ ಗಬ್ಬುನಾಥ ಬೀರುತ್ತ ಮರಣ ಹೊಂದಿವೆ. ಬದುಕಿರುವ ಸು. 150 ಶೌಚಾಲಯಗಳನ್ನು ಬಳಸಲು ಬಯಸಿದ ಜನರಿಂದ ಬಹಳಷ್ಟು ಕಡೆಗಳಲ್ಲಿ ಕೈ ಕಚ್ಚುವ ಪ್ರಮಾಣದ ಶುಲ್ಕ ವಸೂಲಾತಿ ನಡೆಯುತ್ತದೆ. ಇದನ್ನು ಯಾರೂ ಕೇಳುವವರೇ ಇಲ್ಲ. ಕಸವನ್ನೇ ಗುಡಿಸುವ ವ್ಯವಸ್ಥೆ ಮಾಡಲಾರದವರು ಕಸವನ್ನೇ ಸಾಗಿಸದವರು ಕಸ ವರ್ಗೀಕರಣ ಮಾಡಿಲ್ಲ ದಂಡ ಕಟ್ಟಿ ಎಂದು ಬಂದರೆ ಜನ ಸುಮ್ಮನೇ ಬಿಡುತ್ತಾರಯೇ ? ಮೊದಲು ಬಿಬಿಎಂಪಿ ಬಡವರ ಮನೆ ಬೀದಿಯಾದರೂ ಕಸ ಗುಡಿಸುವ, ಕಸ ತೆಗೆಸುವ ಕೆಲಸ ಮಾಡಬೇಕು. ಆಗ ವಗೀಕರಣದ ಪ್ರಶ್ನೆ ಬರುತ್ತದೆ.

ಬಿಬಿಎಂಪಿ ನೌಕರರೊಬ್ಬರಿಗೆ ಸೋರುವ-ಯಾವಾಗಲಾದರೂ ಬೀಳುವ ವಸತಿಯೊಂದನ್ನು ನೀಡಿದ್ದಕ್ಕಾಗಿ ಬಿಬಿಎಂಪಿಗೆ ರಾಜ್ಯ ಹೈಕೋರ್ಟ್ ಛೀಮಾರಿ ಹಾಕಿ ಹಳೆಯ ಕಟ್ಟಡ ಕುಸಿತ ಪ್ರಕರಣಗಳನ್ನು ಆಗ ಆದ ಸಾವು ನೋವುಗಳ ವಿಷಯವನ್ನು ನೆನಪಿಸಿದೆ. ಮತ್ತು ಇಂತಹ ಪ್ರಕರಣದಲ್ಲಿ ಕಟ್ಟಡ ಕುಸಿದು ಅನಾಹುತವಾದರೆ ಬಿಬಿಎಂಪಿ ಆಯುಕ್ತರೇ ಹೊಣೆ ಎಂದು ಎಚ್ಚರಿಸಿದೆ.

ಏನು ಎಚ್ಚರಿಸಿದರೂ ವಿಷಯ 'ಗೋರ್ಗಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ!' ನೇ ಸರಿ. ಯಾಕೆಂದರೆ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯ ಖುದ್ದು ಎದುರಿಗೆ ಬಾದಾಮಿ ಹೌಸ್ ಅಂತ ಕರೆಯುವ ಒಂದು ಕಟ್ಟಡವಿದೆ. ಆ ಕಟ್ಟಡದ ಕಛೇರಿಗಳ ವಾಹನ ನಿಲ್ದಾಣದ ಎತ್ತರದ ಗೋಡೆಗಳು ಪೀಸಾ ವಾಲು ಗೋಪುರಕ್ಕಿಂತಲೂ ಓರೆಯಾಗಿ ವಾಲಿಕೊಂಡು ಈಗಲೋ ಆಗಲೋ ಯಾರಾದರು ಅಮಾಯಕ ಜನರನ್ನು ಬಲಿ ತೆಗೆದುಕೊಳ್ಳಲು ಕಾದು ನಿಂತಿವೆ.

ಬೆಂಗಳೂರಿನಲ್ಲಿ ಇಂತಹ ಅನಾಹುತ ತಪ್ಪಿಸಬೇಕಾದ ನೂರು ಬಿಬಿಎಂಪಿ ಅಧಿಕಾರಿಗಳು ದಿನವೂ ಬಂದು ಹೋಗುವ ಜಾಗದಲ್ಲಿ ಕಣ್ಣು ಕುಕ್ಕುತ್ತಿರುವ ಅಪಾಯವನ್ನೇ ಗ್ರಹಿಸಲಾರದವರು ಇನ್ನು ಎಲ್ಲೆಲ್ಲೋ ನಡೆಯಬಹುದಾದ ಅಪಾಯಗಳನ್ನು ಹೇಗೆ ನಿವಾರಿಸಬಲ್ಲರು. ಬೆಂಗಳೂರು ಮಹಾನಗರ ಪಾಲಿಕೆಗೆ ವಕ್ಕರಿಸಿಕೊಂಡು ಜನರ ಬದುಕನ್ನೇ ಪಣಕ್ಕೆ ಒಡ್ಡಿರುವ ಈ ಬಿಜೆಪಿ ಆಡಳಿತವನ್ನು ಜನತೆ ತಿಪ್ಪೆ ಗುಂಡಿಯನ್ನು ಸ್ವಚ್ಚ ಮಾಡಿ ನಿವಾರಿಸಿದಂತೆ ನಿವಾರಿಸಬೇಕಾದ ಅಗತ್ಯವಿದೆ.

ಯುಪಿಎ ದರ್ಬಾರ್...

ಪುಟ 13 ರಿಂದ

ಮಾರುಕಟ್ಟೆಗಳೇ ಅವಕ್ಕೆ ಅತ್ಯಂತ ಲಾಭದಾಯಕ. ಯಾವುದಾದರೂ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಇಷ್ಟು ಜನಸಂಖ್ಯೆಯ ನಗರ/ಪಟ್ಟಣಗಳಿಲ್ಲವಾದರೆ, ವಿದೇಶಿ ಚಿಲ್ಲರೆ ಕಂಪನಿಗಳು ಅಲ್ಲಿ ತಮಗೆ ಸೂಕ್ತವೆನಿಸಿದ ಸ್ಥಳಗಳಲ್ಲಿ ಮಳಿಗೆಗಳನ್ನು ತೆರೆಯಬಹುದು ಎಂಬ ವಿನಾಯ್ತಿ ಬೇರೆ! ಅಂದರೆ 10ಲಕ್ಷ ಜನಸಂಖ್ಯೆಯ ಕನಿಷ್ಟ ಮಿತಿಯಿದ್ದರೂ ಈ ವಿದೇಶಿ ಕಂಪನಿಗಳು ತಮಗೆ ಲಾಭದಾಯಕವೆನಿಸುವ ದೇಶದ ಯಾವ ಮೂಲೆಯಲ್ಲಾದರೂ ಮಳಿಗೆಯನ್ನು ತೆರೆಯುವ ಸ್ವಾತಂತ್ರ್ಯ ಹೊಂದುತ್ತವೆ.

ಮೂರು, ಈ ಹೂಡಿಕೆಗಳಲ್ಲಿ ಕನಿಷ್ಟ 50 ಶೇ. 'ಹಿಂಬದಿಯ ಮೂಲರಚನೆ'ಗಳಲ್ಲಿ ತೊಡಗಿಸಬೇಕೆಂಬ ನಿಯಮದಿಂದಾಗಿ ರೈತರಿಗೆ ಬಹಳ ಪ್ರಯೋಜನವಾಗುತ್ತದೆ ಎಂಬ ತರ್ಕ ಹೂಡಲಾಗಿದೆ. ಆದರೆ ಹಲವಾರು ದೇಶಗಳ ಇದುವರೆಗಿನ ಅನುಭವಗಳ ಪ್ರಕಾರ ದೇಶೀ ರೈತರಿಗೆ ಅವರಿಂದಲೂ ದೊರೆಯುವುದು ಮಾರುಕಟ್ಟೆ ಬೆಲೆಗಳಲ್ಲ, ಈ ಕಂಪನಿಗಳು ತಮ್ಮ ಅಪಾರ ಹಣಬಲದಿಂದ ನಿರ್ಧರಿಸುವ ಬೆಲೆಗಳು ಮಾತ್ರ, ಮುಖ್ಯವಾಗಿ ಅವು ತಮ್ಮ ಮೂಗಿನ ನೇರಕ್ಕೆ ಹೇರುವ 'ಕಟ್ಟುನಿಟ್ಟಾದ ಗುಣಮಟ್ಟ'ಗಳ ಶರತ್ತುಗಳಿಂದಾಗಿ.

ಯುಪಿಎ-2 ಸರಕಾರೆಫ್‌ಡಿಐಗಾಗಿ ದೇಶೀ ಹಿತಾಸಕ್ತಿಗಳನ್ನು ಬಲಿಗೊಡಲೂ ಹೇಸುತ್ತಿಲ್ಲ ಎಂಬುದಕ್ಕೆ ಮತ್ತೊಂದು ಉದಾಹರಣೆ ಈಗಾಗಲೇ 51ಶೇ.ಕ್ಕಿಂತ ಹೆಚ್ಚು ಎಫ್‌ಡಿಐಗೆ ಅವಕಾಶ ಇರುವ ಏಕಬ್ರಾಂಡ್ ಮಳಿಗೆಗಳಲ್ಲಿ ಮಾರುವ ಸರಕುಗಳ 30ಶೇ.ದಷ್ಟು ಮೌಲ್ಯದ ಸರಕುಗಳನ್ನು ಭಾರತೀಯ 'ಸಣ್ಣ ಉದ್ದಿಮೆಗಳು, ಗ್ರಾಮೀಣ ಉದ್ದಿಮೆಗಳು ಮತ್ತು ಕುಟೀರ ಉದ್ದಿಮೆಗಳಿಂದ'ಲೇ ಪಡೆಯಬೇಕು ಎಂಬ ಇದುವರೆಗಿನ ಕಡ್ಡಾಯವನ್ನು ತೆಗೆದು ಹಾಕಲಾಗಿದೆ. ಈಗ ಕಡ್ಡಾಯ ಎಂಬ ಪದ ಹೋಗಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಂದ 'ಅಪೇಕ್ಷಣೀಯ' ಎಂಬ ಪದ ಬಂದಿದೆ. ಅಲ್ಲದೆ ಸಣ್ಣ ಉದ್ದಿಮೆಯ ನಿರೂಪಣೆಯನ್ನೇ ಕೈಬಿಡಲಾಗಿದೆ. .ಅಂದರೆ ಒಟ್ಟಾರೆಯಾಗಿ ಈ ಶರತ್ತನ್ನೇ ಅರ್ಥಹೀನಗೊಳಿಸಲಾಗಿದೆ.

ಈ ಮೂಲಕ ಮನಮೋಹನಸಿಂಗ್ ಸರಕಾರ ಒಂದೇ ಏಟಿನಲ್ಲಿ ಭಾರತದ ಕೋಟ್ಯಂತರ ಚಿಲ್ಲರೆ ವ್ಯಾಪಾರಿಗಳ ಬದುಕಿನ ಮೇಲೆ ದೊಡ್ಡ ಪ್ರಹಾರ ಮಾಡಿದೆ, ಈ ರಾಷ್ಟ್ರ-ವಿರೋಧಿ ನಿರ್ಧಾರವನ್ನು ಸರಕಾರ ಹಿಂತೆಗೆದು ಕೊಳ್ಳುವಂತೆ ಮಾಡಲೇ ಬೇಕು ಎಂದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

★

'ಹೆಚ್ಚುವರಿ' ಆಹಾರ ದಾಸ್ತಾನು: ಬಡವರ ಸಬ್ಸಿಡಿಯೊಂದಿಗೆ ಬಹಿರಂಗ ಮಾರುಕಟ್ಟೆಗೆ!

ಯುಪಿಎ-2 ಸರಕಾರ ಒಂದು ಕೋಟಿ ಟನ್ 'ಹೆಚ್ಚುವರಿ' ಆಹಾರ ದಾಸ್ತಾನನ್ನು ಹಿಟ್ಟಿನ ಗಿರಣಿಗಳು, ಬಿಸ್ಕಿಟ್ ತಯಾರಕರು ಮುಂತಾದ ಸಗಟು ಬಳಕೆದಾರರಿಗೆ ಬಹಿರಂಗ ಮಾರುಕಟ್ಟೆಯಲ್ಲಿ ಹರಾಜಿನ ಮೂಲಕ ಮಾರಲು ಹಾಗೂ ರಫ್ತು ಮಾಡಲು ನಿರ್ಧರಿಸಿದೆಯಂತೆ. ಮುಂದಿನ ನಾಲ್ಕು ತಿಂಗಳಲ್ಲಿ, ಪ್ರತಿ ತಿಂಗಳು 25 ಲಕ್ಷ ಟನ್‌ಗಳಂತೆ 'ಲಾಭವಿಲ್ಲ, ನಷ್ಟವಿಲ್ಲ' ಎಂಬ ಆಧಾರದಲ್ಲಿ ಹರಾಜು ಹಾಕಲಾಗುವುದಂತೆ. ಈ ಮೂಲಕ ಆಹಾರ ಹಣದುಬ್ಬರಕ್ಕೆ ಕಡಿವಾಣ ಮತ್ತು 'ಹೆಚ್ಚುವರಿ' ದಾಸ್ತಾನುಗಳ ವಿಲೇವಾರಿಯ ಪ್ರಶ್ನೆ ಇವೆರಡನ್ನೂ ಒಂದೇ ಏಟಿಗೆ ನಿರ್ವಹಿಸಿದಂತಾಗುತ್ತದೆ ಎಂಬದು ಸರಕಾರದ ಸಮರ್ಥನೆ.

ವಾಸ್ತವವಾಗಿ ಸರಕಾರ ಈ ಮೂಲಕ 'ಆಹಾರ ಸಬ್ಸಿಡಿ'ಯ ಪ್ರಯೋಜನವನ್ನು ಹಸಿದಿರುವ ಕೋಟ್ಯಂತರ ದಟ್ಟದರಿದ್ರರಿಗೆ ಮತ್ತು ಆಹಾರ ಅಭದ್ರತೆಯಿಂದ ನರಳುತ್ತಿರುವವರಿಗೆ ಪಡಿತರ ವ್ಯವಸ್ಥೆಯ ಮೂಲಕ ತಲುಪಿಸುವ ಬದಲು, ಬಹಿರಂಗ ಮಾರುಕಟ್ಟೆಯ ಕುಳಗಳಿಗೆ ತಲುಪಿಸಲು ಮುಂದಾಗುತ್ತಿದೆ. ಬಿಸ್ಕತ್ ತಯಾರಕರಲ್ಲಿ ಬಹು ದೊಡ್ಡ ಕಂಪನಿಗಳು ಇವೆ ಎಂಬುದನ್ನು ಗಮನಿಸಬೇಕು.

ಇನ್ನು 'ಹೆಚ್ಚುವರಿ' ದಾಸ್ತಾನನ್ನು ಈ ರೀತಿ ಮಾರುವ ಮೂಲಕ ಆಹಾರ ಹಣದುಬ್ಬರದ ಮೇಲೆ ಕಡಿವಾಣ ಬೀಳುತ್ತದೆ ಎಂಬುದಂತೂ ತರ್ಕಹೀನ ಎನ್ನುತ್ತಾರೆ ಆರ್ಥಿಕ ತಜ್ಞರು. ವಾಸ್ತವವಾಗಿ ಅಗಸ್ಟ್ ತಿಂಗಳಲ್ಲಿ ಆಹಾರ ಹಣದುಬ್ಬರ 12.03ಶೇ.ಕ್ಕೆ ಏರಿದೆ, ಇದು ಕೂಡ ಡೀಸೆಲ್ ದರ ಏರಿಕೆಯ ಮೊದಲು ಎಂಬುದನ್ನು ಗಮನಿಸಬೇಕು. ಇದೇ ತಿಂಗಳಲ್ಲಿ ಬಳಕೆದಾರ ಸೂಚ್ಯಂಕದಲ್ಲಿ 10.03ಶೇ. ಮತ್ತು ಸಗಟು ಬೆಲೆ ಸೂಚ್ಯಂಕದಲ್ಲಿ 7.55ಶೇ. ಏರಿಕೆಯಾಗಿದೆ. ಅಂದರೆ ಆಹಾರ ಹಣದುಬ್ಬರವೇ ಜನಗಳನ್ನು ಅತಿ ಹೆಚ್ಚಾಗಿ ಬಾಧಿಸುತ್ತಿರುವುದು. ಇಂತಹ ಸಂದರ್ಭದಲ್ಲಿ, 5 ಕೋಟಿ ಟನ್ 'ಹೆಚ್ಚುವರಿ' ಆಹಾರ ದಾಸ್ತಾನು ಇರುವಾಗ ಯಾವುದೇ ಪ್ರಾಮಾಣಿಕವಾದ ಸರಕಾರಕ್ಕೆ ಅದನ್ನು ಪಡಿತರ ವ್ಯವಸ್ಥೆಯ ಮೂಲಕ, ಎಪಿಎಲ್, ಬಿಪಿಎಲ್ ಎಂಬ ಲೇಬಲ್ಲುಗಳಿಲ್ಲದೆ ಪ್ರತಿ ಕುಟುಂಬಕ್ಕೆ ಕೆ.ಜಿ.ಗೆ 2ರೂ.ದರದಲ್ಲಿ ತಿಂಗಳಿಗೆ 35 ಕೆ.ಜಿ. ಆಹಾರಧಾನ್ಯಗಳನ್ನು ಪೂರೈಸುವ ವಿಚಾರ ಮೊದಲಿಗೆ ಬರಬೇಕಿತ್ತು. ಆದರೆ ಯುಪಿಎ-2 ಸರಕಾರ ಉಳ್ಳವರಿಗೇ ಅದನ್ನು ಹಂಚುವ ಯೋಚನೆಯನ್ನು ಮಾಡುತ್ತಿದೆ.

ಸರಕಾರ ಈ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಆಗ್ರಹಿಸಿದೆ.

JANASHAKTHI KANNADA VARA PATRIKE OCT 07, 2012 Price : Rs. 5/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO



ಜಿ.ಎನ್.ನಾಗರಾಜ್ 8

ಶಾಲೆಯಿಂದ ಶಾಲೆಗೆ ಹಾರಿದ ದುಂಬಿ ಗ್ರಂಥಾಲಯದಲ್ಲಿ ಜೇನು ಹೀರಿತು

ಚೀನಾದ ಪ್ರಸಿದ್ಧ 1911ರ ಕ್ರಾಂತಿಯ ಸೇನೆಯಲ್ಲಿ ಪಾಲ್ಗೊಂಡು ಮರಳಿದ ಮಾವೋರವರಿಗೆ ಮತ್ತೆ ಯಾವ ಶಾಲೆಗೆ ಸೇರುವುದು, ಯಾವ ವಿಷಯದ ಶಿಕ್ಷಣ ಪಡೆಯುವುದು ಎಂಬ ಪ್ರಶ್ನೆ ಎದುರಾಯಿತು.(ಅಂದಿನ ಚೀನಾದಲ್ಲಿ ಕಾಲೇಜುಗಳಿಗೂ ಶಾಲೆಗಳೆಂದೇ ಕರೆಯುತ್ತಿದ್ದರು.) ಹದಿನೆಂಟು ವರ್ಷ ವಯಸ್ಸಿನವರಾಗಿದ್ದ ಮಾವೋರವರ ಮುಂದೆ ಹಲವು ಆಯ್ಕೆಗಳು ಕುಣಿಯತೊಡಗಿದವು. ವಿವಿಧ ಶಾಲೆಗಳು ಪತ್ರಿಕೆಯ ಜಾಹೀರಾತುಗಳ ಮೂಲಕ ತಮ್ಮ ಶಾಲೆಗಳ ಹಾಗೂ ತಮ್ಮ ಕೋರ್ಸುಗಳ ಹೆಗ್ಗಳಿಕೆಯನ್ನು ಸಾರುವುದು ಪದ್ಧತಿಯಾಗಿತ್ತು.

"ಆಗ್ಗೆ ನಾನು ಮುಂದೆ ಏನು ಮಾಡಬೇಕೆಂಬುದೇ ನನಗೆ ತಿಳಿದಿರಲಿಲ್ಲ." ಎಂದು ಬರೆಯುತ್ತಾರೆ ಮಾವೋ. ಒಂದು ಪೋಲೀಸು ಶಾಲೆಯ ಜಾಹೀರಾತು ಅವರ ಕಣ್ಸೆಳೆಯಿತು. ಅದಕ್ಕೆ ಅರ್ಜಿ ಹಾಕಿದರು. ಅದಕ್ಕೆ ಸಂಬಂಧಿಸಿದ ಪರೀಕ್ಷೆಯಾಗುವುದರಲ್ಲಿ ಸೋಪು ತಯಾರಿಕೆಯ ಶಾಲೆಯೊಂದರ ಜಾಹೀರಾತು ಕಂಡಿತು. ಸೋಪು ತಯಾರಿಕೆ ಸಮಾಜಕ್ಕೆ ಎಷ್ಟೊಂದು ಮುಖ್ಯ ಎಂಬುದನ್ನೆಲ್ಲಾ ವಿವರಿಸಿ ಈ ಶಾಲೆಗೆ ಫೀಸು ಕೊಡಬೇಕಾಗಿಲ್ಲ, ವಸತಿಯೂ ಉಚಿತ, ಜೊತೆಗೆ ಸ್ವಲ್ಪ ಸಂಬಳವೂ ಸಿಗುತ್ತದೆಂಬ ಖಾತರಿಯನ್ನೂ ನೀಡಲಾಗಿತ್ತು. ಮಾವೋ ಅದಕ್ಕೂ ಅರ್ಜಿ ಹಾಕಿದರು.

ಅಷ್ಟರಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದ ಅವರ ಮಿತ್ರನೊಬ್ಬ ಅವರನ್ನು ಕಾನೂನು ಶಾಲೆಗೆ ಸೇರಲು ಒತ್ತಾಯಿಸಿದ. ಅದರ ಜಾಹೀರಾತುಗಳು ಕೂಡ ಬಹಳ ಆಕರ್ಷಕವಾಗಿದ್ದುವು. ಸರಿ ಕಾನೂನು ಶಾಲೆಗೂ ಅರ್ಜಿ ಗುಜರಾಯಿಸಿದರು. ಮತ್ತೆ ಇನ್ನೊಂದು ಜಾಹೀರಾತು ಅವರ ಕಣ್ಣಿಗೆ ಬಿತ್ತು. ದೇಶದ ಆರ್ಥಿಕತೆಯನ್ನು ಬಲಪಡಿಸಲು ಇಂದು ತುರ್ತಾಗಿ ಅಗತ್ಯವಾಗಿರುವುದು ಅರ್ಥಶಾಸ್ತ್ರಜ್ಞರು ಎಂದು ಪ್ರತಿಪಾದಿಸಿತ್ತು. ಸರ್ಕಾರಕ್ಕೆ ಸೇರಿದ್ದ ಈ ಉನ್ನತ ವಾಣಿಜ್ಯ ಶಾಲೆಯಲ್ಲಿ ವಿಶಾಲವಾದ ಪಠ್ಯ ವಿಷಯಗಳು, ಉತ್ತಮ ಶಿಕ್ಷಕರು ಇದ್ದಾರೆಂದು ಕೇಳಿ ಅರ್ಜಿ ಹಾಕಿದ್ದು ಮಾತ್ರವಲ್ಲ ಸೇರಿಯೂ ಬಿಟ್ಟರು. ವರ್ತಕರಾದ ಅವರ ತಂದೆಗೆ ನಿರೀಕ್ಷಿದಂತೆಯೇ ಇದು ಅಪಾರ ಸಂತೋಷವನ್ನುಂಟು ಮಾಡಿತು.


ಹುನಾನ್ ಪ್ರಾಂತ ಗ್ರಂಥಾಲಯ

ಆದರೆ ಈ ಶಾಲೆಯಲ್ಲಿ ಎಲ್ಲ ವಿಷಯಗಳನ್ನೂ ಇಂಗ್ಲಿಷಿನಲ್ಲಿಯೇ ಪಾಠ ಮಾಡುತ್ತಿದ್ದರು. ಅಲ್ಲಿಯ ಅನೇಕ ವಿದ್ಯಾರ್ಥಿಗಳಂತೆ ಮಾವೋರವರಿಗೂ ಇಂಗ್ಲಿಷಿನ ಅಕ್ಷರಗಳನ್ನು ಬಿಟ್ಟರೆ ಬೇರೇನೂ ಗೊತ್ತಿರಲಿಲ್ಲ. ಆ ಶಾಲೆಯಲ್ಲಿ ಇಂಗ್ಲಿಷಿನ ಅಧ್ಯಾಪಕರೂ ಇರಲಿಲ್ಲ. ಮಾವೋರವರು ಒಂದು ತಿಂಗಳು ಹಾಗೂ ಹೀಗೂ ಇದರಲ್ಲಿಯೇ ಏಗಿ ನಂತರ ಈ ಶಾಲೆಯನ್ನು ತ್ಯಜಿಸಿದರು.

ನಂತರ ಚಾಂಗ್ ಶಾದ ಮತ್ತೊಂದು ಶಾಲೆಗೆ ಅರ್ಜಿ ಹಾಕಿ , ಪ್ರವೇಶ ಪರೀಕ್ಷೆಯಲ್ಲಿ ಮೊದಲ ಸ್ಥಾನ ಗಳಿಸಿ ಸೇರಿಕೊಂಡರು. ಈ ಶಾಲೆಯಲ್ಲಿ ಕಲಿಸುತ್ತಿದ್ದ ವಿಷಯಗಳು ಬಹಳ ಸೀಮಿತವಾಗಿದ್ದುವು ಹಾಗೂ ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದ ಮಿತಿಗಳು ಅತಿಯಾಗಿದ್ದವು. ಇಂತಹ ಶಾಲೆಯಲ್ಲಿ ಮುಂದುವರೆಯುವುದರಲ್ಲಿ ಯಾವ 'ಸಾರ್ಥಕತೆಯೂ ಮಾವೋರವರಿಗೆ ಕಾಣಿಸಲಿಲ್ಲ. ಈ ಶಾಲೆಯ ಶಿಕ್ಷಕರೊಬ್ಬರು ಮಾವೋರವರ ಭಾಷಾ ಪ್ರೌಢಿಮೆಯನ್ನು ಮೆಚ್ಚಿ ಸಾಮ್ರಾಟರ ಕಾಲದ ಘಟನಾವಳಿಗಳ ಬಖೈರೊದನ್ನು ಓದಲು ನೀಡಿದರು. ಅದನ್ನು ಓದಿದ ಮೇಲೆ ಶಾಲೆಯಲ್ಲಿ ಕಳೆಯುವ ಸಮಯ ವ್ಯರ್ಥವೆನಿಸಿತು. ಕೊನೆಗೆ ಆರು ತಿಂಗಳ ನಂತರ ಶಾಲೆ ಬಿಟ್ಟು ಸ್ವಯಂ ಕಲಿಕೆಯ ಮೂಲಕವೇ ಹೆಚ್ಚು ಶಿಕ್ಷಣ ಪಡೆಯಲು ತೀರ್ಮಾನಿಸಿದರು.

ಪುಸ್ತಕ ಭಂಡಾರದಲ್ಲಿ ನಿರಂತರ ಓದು.

ತಮಗೆ ಅರ್ಥಪೂರ್ಣವಾಗಿ ಕಂಡ ಪುಸ್ತಕಗಳನ್ನು ಓದುವುದರಿಂದಲೇ ಉತ್ತಮ ಜ್ಞಾನ ಪಡೆಯಬಹುದು ಎಂದು ಕಂಡುಕೊಂಡ ಮಾವೋ ಹುನಾನ್ ರಾಜ್ಯ ಗ್ರಂಥಾಲಯದ ದಿನನಿತ್ಯದ ಅತಿಥಿಯಾದರು. ಕಾಲವನ್ನು ಒಂದು ಚೂರೂ ವ್ಯರ್ಥ ಮಾಡದೆ ಗ್ರಂಥಾಲಯ ಬೆಳಗ್ಗೆ ತೆಗೆಯುವ ಸಮಯದಿಂದ ಮಧ್ಯೆ ಎರಡು ಅಕ್ಕಿ ರೊಟ್ಟಿ ತಿನ್ನಲು ಮಾತ್ರ ಹೊರಬಂದು ಅದು ಮುಚ್ಚುವವರೆಗೂ ಆರಿಸಿದ ಪುಸ್ತಕಗಳ ಅಧ್ಯಯನದಲ್ಲಿ ತೊಡಗಿದರು.

ಈ ಸಮಯದಲ್ಲಿ ಮಾವೋರವರು ವಿಶ್ವ ಚರಿತ್ರೆ ಭೂಗೋಳಗಳನ್ನು, ಅರ್ಥಶಾಸ್ತ್ರದ ಮಹೋನ್ನತ ಕೃತಿಗಳಲ್ಲೊಂದಾದ ಆಡಾಮ್ ಸ್ಮಿತ್‌ರವರ ' ರಾಷ್ಟ್ರಗಳ ಸಂಪತ್ತು',ಜೀವ ವಿಕಾಸದ ಬಗೆಗಿನ ಮೂಲ ಗ್ರಂಥವಾದ ಚಾರ್ಲ್ಸ್ ಡಾರ್ವಿನ್‌ರವರ ' ಜೀವ ಪ್ರಬೇಧಗಳ ಉಗಮ ', ಸ್ಪೆನ್ಸರನ 'ತರ್ಕಶಾಸ್ತ್ರ ', ರೂಸೋ,ಮೊಂಟೆಸ್ಕ್ಯೊ,ಜಾನ್ ಸ್ಟುವರ್ಟ್ ಮಿಲ್ ಮುಂತಾದ ಅನೇಕ ತತ್ವ ಶಾಸ್ತ್ರಜ್ಞರ ಕೃತಿಗಳನ್ನು ಓದಿದರು. ಕಾವ್ಯ, ಸಾಹಿತ್ಯ ಗ್ರೀಕ್ ಪುರಾಣಗಳನ್ನು ಫ್ರಾನ್ಸ್, ಇಂಗ್ಲೆಂಡ್,ಅಮೆರಿಕ,ರಷ್ಯಾ ಮೊದಲಾದ ದೇಶಗಳ ಚರಿತ್ರೆ,ಭೂಗೋಳಗಳ ಅಭ್ಯಾಸ ನಡೆಸಿದರು.

" ನಾನು ಈ ರೀತಿ ಕಳೆದ ಅರ್ಧ ವರ್ಷ ಅತ್ಯಂತ ಅಮೂಲ್ಯವಾದದ್ದೆಂದು ನಾನು ಪರಿಗಣಿಸುತ್ತೇನೆ " ಎಂದು ಮಾವೋರವರು ಮುಂದೆ 1936ರಲ್ಲಿ ಚೀನಾದ ಕ್ರಾಂತಿಯ ಪ್ರಧಾನ ನಾಯಕನಾಗಿ ಕ್ರಾಂತಿಕಾರಿ ಶಿಕ್ಷಣ ನೀಡುವ ವಿಶ್ವ ವಿದ್ಯಾಲಯವೊಂದನ್ನು ನಡೆಸುತ್ತಿದ್ದ ಸಮಯದಲ್ಲಿ ಬರೆದ ಜೀವನ ಚಿತ್ರದಲ್ಲಿ ಹೇಳಿಕೊಂಡಿದ್ದಾರೆ. ಹೀಗೆ ಹಲವು ಬಾರಿ ಗ್ರಂಥಾಲಯವೆಂಬ ವಿಶಿಷ್ಟ ವಿಶ್ವ ವಿದ್ಯಾಲಯದಲ್ಲಿ ಸ್ವ ಶಿಕ್ಷಣ ಪಡೆದುಕೊಳ್ಳುವ ತೀರ್ಮಾನ ಮಾಡಿದ್ದಾರೆ.


ಅಧ್ಯಯನಶೀಲ ಮಾವೋ

1913 ರಲ್ಲಿ ಅವರು ಪಡೆದ ಸ್ವ-ಶಿಕ್ಷಣ ಮೊದಲ ಹಂತ ಮಾತ್ರ. ಚೀನಾದಲ್ಲಿ ' ಹೊಸ ಶಿಕ್ಷಣ'ವೆಂದು ಕರೆಯಲಾಗುತ್ತಿದ್ದ ಆಧುನಿಕ ಶಿಕ್ಷಣದ ಸಾರವನ್ನು ಈ ಹಂತದಲ್ಲಿ ಪಡೆದರೆ ಮುಂದೆ ಮಾರ್ಕ್ಸ್‌ವಾದದ ಆಳವಾದ ಅಧ್ಯಯನ ಮಾಡಲು ಕೂಡ ಇಂತಹದೇ ಗ್ರಂಥಾಲಯ ವಿ.ವಿ.ಯ ಮೊರೆ ಹೋಗುತ್ತಾರೆ. ಎಳೆ ವಯಸ್ಸಿನಲ್ಲಿಯೇ ಮಾವೋರಲ್ಲಿ ಚಿಗುರಿದ ಪುಸ್ತಕ ಪ್ರೀತಿ ಈಗ ಪಲ್ಲವಿಸಿ ಮತ್ತಷ್ಟು ಗಾಢವಾಯಿತು. ಇನ್ನು ಮುಂದಿನ ಅವರ ಜೀವನದ ಉದ್ದಕ್ಕೂ ಎಂತಹದೇ ಕಠಿಣ ಪರಿಸ್ಥಿತಿಯಲ್ಲಿಯೂ ಅವರ ಪುಸ್ತಕ ಸಾಂಗತ್ಯಕ್ಕೆ ಒಂದು ದಿನವೂ ಅಡ್ಡಿಯುಂಟಾಗಲಿಲ್ಲ. ಶತ್ರು ಸೇನೆಗಳು ಬೆಂಬತ್ತಿ ಬರುತ್ತಿದ್ದ ಲಾಂಗ್ ಮಾರ್ಚ್ (ದೀರ್ಘ ಪಯಣ) ದಲ್ಲಿ ಕೂಡ ಅವರ ಬಳಿ ಅವರು ಆಗ ಓದುತ್ತಿದ್ದ ಒಂದು ಪುಸ್ತಕ ಸಂಗ್ರಹ ಇರುತ್ತಿತ್ತು.

ಮಾವೋ ತಮ್ಮ ಹಾಗೂ ಗೆಳೆಯರ ಪಿಳ್ಳು ಜುಟ್ಟು ಕತ್ತರಿಸಿ ಒಗೆದದ್ದು

ಚೀನಾದಲ್ಲಿ ಎಲ್ಲರೂ ಪಿಳ್ಳು ಜುಟ್ಟು ಬಿಡುವ ಅಭ್ಯಾಸವಿತ್ತು. ಭಾರತದಲ್ಲಿದ್ದಂತೆಯೇ ಅದು ಕಂದಾಚಾರದ ಸಂಕೇತವಾಗಿತ್ತು ಮಾತ್ರವಲ್ಲ ಎಲ್ಲರೂ ಪಿಳ್ಳು ಜುಟ್ಟು ಬಿಡಲೇಬೇಕೆಂಬ ಸಾಮ್ರಾಟನ ಕಡ್ಡಾಯದ ಪರಿಣಾಮವಾಗಿ ರಾಜ ಭಕ್ತಿಯ ಹೆಗ್ಗುರುತಾಗಿತ್ತು. ಅಂದ ಮೇಲೆ ಪಿಳ್ಳು ಜುಟ್ಟು ಕತ್ತರಿಸುವುದು ರಾಜಾಳ್ವಿಕೆಯನ್ನು ವಿರೋಧಿಸುವವರ ಸಂಕೇತವೂ ಆಯಿತು. 1911 ರ ಕ್ರಾಂತಿಕಾರಿ ಸಂಘರ್ಷದ ಸಮಯದಲ್ಲಿ ಪಿಳ್ಳು ಜುಟ್ಟು ತೆಗೆದು ಹಾಕುವುದೂ ಒಂದು ಚಳುವಳಿಯೇ ಆಯಿತು. ಮಾವೋ ಕೂಡ ತಮ್ಮ ಪಿಳ್ಳು ಜುಟ್ಟು ತೆಗೆದು ಹಾಕಿದರು. ಅವರ ಸ್ನೇಹಿತರು ಕೆಲವರು ತಮ್ಮ ಪಿಳ್ಳು ಜುಟ್ಟನ್ನು ಕತ್ತರಿಸಲು ಮೊದಲು ಒಪ್ಪಿ ನಂತರ ಹಿಂದೆ ಮುಂದೆ ನೋಡತೊಡಗಿದರು. ಆಗ ಮಾವೋ ಮತ್ತವರ ಗೆಳೆಯನೊಬ್ಬ ಕೂಡಿ ರಾತ್ರಿ ಅವರು ಮಲಗಿರುವಾಗ ಪಿಳ್ಳು ಜುಟ್ಟನ್ನು ಕತ್ತರಿಸಿ ಒಗೆದರು. ಈ ಪ್ರಸಂಗ ತೂಗುಯ್ಯಾಲೆ ಆಡುತ್ತಿದ್ದ ಅನೇಕರಿಗೆ ಒಂದು ಪಾಠವಾಯಿತು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH